

ಹಿರಿಯ ಹೆಜ್ಜೆಗಳು

ಲೇಖಕರು - ಚಿತ್ರಗಾರರು

ಪ್ರೊ|| ಸಾ. ಕೃ ರಾಮಚಂದ್ರರಾವ್

ಪ್ರಕಾಶಕರು :

ಅನನ್ಯ ಪ್ರಕಾಶನ

ಹಿರಿಯ ಹೆಜ್ಜೆಗಳು

ಲೇಖಕರು - ಚಿತ್ರಗಾರರು :

ಪ್ರೊ. ಸಾ. ಕೃ ರಾಮಚಂದ್ರರಾವ್

ಪ್ರಕಾಶಕರು :

ಅನನ್ಯ ಪ್ರಕಾಶನ

ಅನನ್ಯ 91/2, 4ನೇ ಮುಖ್ಯ ರಸ್ತೆ ಮಲ್ಲೇಶ್ವರ, ಬೆಂಗಳೂರು - 3.

'Hiriya Hejjegalu'

© Author

First Edition : August 2003

Published by :
ANANYA
91/2, 4th Main Road,
Malleswaram, Bangalore - 560 003.
Ph : 3345069.
email: gml1980@vsnl.net

Copies : **500 Books**

Price : **150/-**

Designed & Printed at:
Akshara Printers
No.54/4, Police Station Road,
Basavanagudi,
Bangalore - 560 004.
Ph : 6524897, 6524082

ಪ್ರಕಾಶಕರ ನುಡಿ

ಸಂಗೀತ ಮತ್ತಿತರ ಕಲೆಗಳನ್ನು ಉಳಿಸಿ ಬೆಳೆಸುವುದನ್ನು ಧ್ಯೇಯವಾಗಿಟ್ಟುಕೊಂಡಿರುವ 'ಅನನ್ಯ'ದ ಅಭಿವ್ಯಕ್ತಿ ರೂಪ 'ಅನನ್ಯ ಅಭಿವ್ಯಕ್ತಿ'. ಈ ಮಾಸಪತ್ರಿಕೆ ಸಂಗೀತದ ಬಗ್ಗೆ ಗಂಭೀರ ಚರ್ಚೆನಡೆಸುವ, ವಿಚಾರಗಳನ್ನು ಉದ್ದೀಪಿಸುವ, ಸಂಗೀತದ ಇಂದಿನ ಸ್ಥಿತಿ-ಗತಿಗಳನ್ನು ಚಿತ್ರಿಸುವ ಹಾಗೂ ಕರ್ನಾಟಕ ಸಂಗೀತ ಸಂಪ್ರದಾಯ-ಮೌಲ್ಯಗಳು ಬೆಳೆದು ಬಂದಿರುವ ಬಗೆಯನ್ನು ಕಂಡಿರಿಸುವ ಮಹಾದಾಕಾಂಕ್ಷೆಯನ್ನೂ ಹೊಂದಿದೆ. ಹಿರಿಯ ಸಂಗೀತ ಕಲಾವಿದರನ್ನು, ಅವರ ಜೀವನ-ಸಾಧನೆಗಳನ್ನು ಓದುಗರ, ಸಂಗೀತಗಾರರ ಹಾಗೂ ಬೆಳೆಯುತ್ತಿರುವ ಕಲಾವಿದರ ಮುಂದಿಡುವುದೂ ಈ ಘನ ಉದ್ದೇಶವನ್ನು ಈಡೇರಿಸುವ ಒಂದು ಕ್ರಮ ಎಂದು ನಮ್ಮ ನಂಬಿಕೆ.

ಸಂಗೀತ ಕಲಾರತ್ನ ವಿದ್ಯಾಲಂಕಾರ ಪ್ರೊ॥ ಎಸ್. ಕೆ. ರಾಮಚಂದ್ರರಾವ್ ಅವರು ಸಂಗೀತ-ಕಲಾಭಿಮಾನಿಗಳು; ಅವನ್ನು ಸವಿಯಬಲ್ಲ ಹಾಗೂ ವಿಮರ್ಶಿಸಬಲ್ಲ ಸಹೃದಯರು; ಮಿಗಿಲಾಗಿ ಸ್ವತಃ ಚಿತ್ರ ಕಲಾವಿದರೂ, ಶಿಲ್ಪಿಗಳೂ ಆದವರು. ಇವರ ಕಲಾಸ್ವಾದನೆಯಲ್ಲಿ ಸಹೃದಯನ ರಸಿಕತೆಯೂ, ವಿಮರ್ಶಕನ ಬೌದ್ಧಿಕತೆಯೂ, ಕಲೆಗಾರನ ಸೃಜನಶೀಲತೆಯೂ ಮುಪ್ಪುರಿಗೊಂಡಿವೆ. ಇವರ ಚಿತ್ರಕಲೆಯೂ ಅತ್ಯಂತ ವಿಶಿಷ್ಟವಾದುದು. ಸರಳವಾದ, ಸ್ಪಷ್ಟವಾದ ರೇಖೆಗಳಲ್ಲಿ ಕಲಾವಿದನ ಮುಖದೊಂದಿಗೆ ವ್ಯಕ್ತಿತ್ವವನ್ನೇ ಪ್ರಕಟಿಸುವ ಸೂಕ್ಷ್ಮತೆ ಇವರ ಚಿತ್ರಗಳಿಗೆ ಇದೆ. ಇವರ ಶಬ್ದಚಿತ್ರವೂ ಅಷ್ಟೇ ಸ್ಪಷ್ಟ, ನಿಖರ ಹಾಗೂ ಚಿಕ್ಕದಾದರೂ ಚೊಕ್ಕವಾದುದು - brevity is the soul of wit - ಎಂಬಂತೆ. ಅವರು ಸ್ವತಃ ಕಂಡು ಮಾತನಾಡಿಸಿದ, ಅಥವಾ ಅವರು ಹಿರಿಯರಿಂದ ಕೇಳಿದ, ಕಲಾವಿದರ ರೇಖಾಚಿತ್ರಗಳನ್ನು ಅವರು ಔತ್ಸುಕ್ಯ ಸ್ವ-ಕುತೂಹಲದಿಂದ ಸಿದ್ಧಪಡಿಸಿ ಇಟ್ಟುಕೊಂಡ ಮಾಲಿಕೆಯಾಗಿ ನೀಡಲು ಕೇಳಿಕೊಂಡಾಗ ಅದನ್ನು ಅತ್ಯಂತ ಉದಾರಹೃದಯದಿಂದ ಅವರು ನಡೆಸಿಕೊಟ್ಟಿದ್ದಾರೆ. ಆ ಮಾಲಿಕೆಯ ಪುಸ್ತಕರೂಪವೇ ತಮ್ಮ ಕೈಯಲ್ಲಿರುವ 'ಹಿರಿಯ ಹೆಜ್ಜೆಗಳು'. ಆ ಹಿರಿಯ ಕಲಾವಿದರುಗಳ ಬಗ್ಗೆ ಅಧಿಕಾರಯುತವಾಗಿ, ತೂಕವಾಗಿ ಲಯತಪ್ಪದಂತೆ ಬರೆಯಬಲ್ಲವರು ಬೆರಳೆಣಿಕೆಯಷ್ಟು ಜನ ಮಾತ್ರ. ಆದರೆ ಆ ಚಿತ್ರ ವೈಖರಿ ಪ್ರೊ॥ ಎಸ್. ಕೆ. ರಾಮಚಂದ್ರರಾಯರದೇ ಅನನ್ಯ ಶೈಲಿ. ''ಹಿರಿಯ ಹೆಜ್ಜೆಗಳು'' ಮಾಲಿಕೆ ಅಭಿವ್ಯಕ್ತಿಯ ಮೌಲ್ಯವನ್ನು ಹೆಚ್ಚಿಸಿದೆ; ಅದಕ್ಕೆ ಸವಿಗೂಡಿಸಿದೆ; ಅಭಿವ್ಯಕ್ತಿಯ ಪ್ರಯತ್ನವನ್ನು ಸಾರ್ಥಕಗೊಳಿಸಿದೆ.

ತಮಗೆ ಅತ್ಯಂತ ಸಹಜವಾದ ಶಿಸ್ತಿನಿಂದ ಈ ರೇಖಾಚಿತ್ರಗಳನ್ನು - ಚಿತ್ರಗಳನ್ನು ಒಮ್ಮೆಯೂ ತಪ್ಪದೆ, ಸಕಾಲಕ್ಕೆ ಒದಗಿಸಿದುದಲ್ಲದೆ, ಅವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ಅನುಮತಿಯಿತ್ತು ನಮ್ಮನ್ನು ಕೃತಾರ್ಥರನ್ನಾಗಿಸಿದ್ದಾರೆ. ಅವರಿಗೆ 'ಅನನ್ಯ'ದ ಪರವಾಗಿ ಅತ್ಯಂತ ಗೌರವ-ಕೃತಜ್ಞತಾಪೂರ್ವಕ ಪ್ರಣಾಮಗಳು. ಅವರ ಬೆಂಬಲ-ಆಶೀರ್ವಾದ ಅನನ್ಯಕ್ಕೆ ಸದಾ ಇರಲಿ!

'ಅನನ್ಯ'ಕ್ಕೆ ಸಂಬಂಧಿಸಿದ ಮುದ್ರಣದ ಎಲ್ಲ ಕೆಲಸಗಳನ್ನು ಏಕರೂಪವಾದ ಪ್ರೀತಿ-ವಿಶ್ವಾಸಗಳಿಂದ ನಡೆಸಿಕೊಡುತ್ತಿರುವ ಹಾಗೂ ಈ ಪುಸ್ತಕವನ್ನು ವಿಶೇಷ ಮುತುವರ್ಜಿ ವಹಿಸಿ ಮುದ್ರಿಸಿರುವ 'ಅಕ್ಷರ ಪ್ರಿಂಟರ್ಸ್'ನ ಶ್ರೀ ಆರ್. ಪಿ. ನಾಗರಾಜ್ ಹಾಗೂ ಅಷ್ಟೇ ಆಸ್ಥೆಯಿಂದ ಡಿ.ಟಿ.ಪಿ. ಕೆಲಸವನ್ನು ನಿರ್ವಹಿಸಿರುವ ಅವರ ಸಹೋದ್ಯೋಗಿ ಶ್ರೀ ಅಶ್ವಿನ್ ಅವರಿಗೆ ನಮ್ಮ ನೆನಕೆಗಳು.

ಬೆಂಗಳೂರು

10-08-2003

ಪ್ರಕಾಶಕರು

ಸಾ. ಕೃ. ರಾ ರವರ ಬಗ್ಗೆ...........

ನಮ್ಮ ಕರ್ಣಾಟಕದವರೆಂದೇ ವಿದ್ವಾಂಸರು ಗುರುತಿಸಿರುವ ಕ್ರಿ.ಶ. ಹನ್ನೆರಡನೆಯ ಶತಾಬ್ದಿಯ ಮಹಾಗಣಿತಶಾಸ್ತ್ರಜ್ಞ ಭಾಸ್ಕರಾಚಾರ್ಯರ ಬಗೆಗೆ ಅವರದೇ ಕೃತಿ 'ಲೀಲಾವತಿ' ಯಲ್ಲಿ ಕಡೆಗೊಂದು ಶ್ಲೋಕವಿದೆ. ಇದು ಬಹುಶಃ ಅವರದೋ ಅವರ ಶಿಷ್ಯರೊಬ್ಬರದೋ ಪದ್ಯವೆಂದು ಊಹೆ. ಆ ಒಕ್ಕಣೆಯಿಂತಿದೆ :

ಅಷ್ಟೌ ವ್ಯಾಕರಣಾನಿ ಸಪ್ತ ಭಿಷಜಾಂ ವ್ಯಾಚಷ್ಟ ತಾಃ ಸಂಹಿತಾಃ
ಷಟ್ ತರ್ಕಾನ್ ಗಣಿತಾನಿ ಪಂಚ ಚತುರೋ ವೇದಾನಧೀತೇ ಸ್ಮ ಯಃ ।
ರತ್ನಾನಾಂ ತ್ರಿತಯಂ ದ್ವಯಂ ಚ ಬುಬುಧೇ ಮೀಮಾಂಸಯೋರಂತರಂ
ಸದ್ಬ್ರಹ್ಮೈಕಮಗಾಧಬೋಧಮಹಿಮಾ ಸೋಽಸ್ಯಾಃ ಕವಿರ್ಭಾಸ್ಕರಃ ॥

ಈ ಪ್ರಕಾರ ಭಾಸ್ಕರಾಚಾರ್ಯರು ಕೇವಲ ಗಣಿತಶಾಸ್ತ್ರಜ್ಞರಷ್ಟೇ ಆಗಿರಲಿಲ್ಲ, ಮತ್ತೂ ಏನೆಲ್ಲ ಆಗಿದ್ದರು. ಅವರಿಗೆ ಎಂಟು ಬಗೆಯ ವ್ಯಾಕರಣಗಳಲ್ಲಿ, ಏಳು ಬಗೆಯ ವೈದ್ಯಕೀಯಸಂಹಿತೆಗಳಲ್ಲಿ, ಆರು ಬಗೆಯ ತರ್ಕವಿದ್ಯೆಗಳಲ್ಲಿ, ಐದು ಬಗೆಯ ಗಣಿತ-ಖಗೋಲ ಸಿದ್ಧಾಂತಗಳಲ್ಲಿ, ನಾಲ್ಕು ವೇದಗಳಲ್ಲಿ, ಮೂರು ತೆರನಾದ ರತ್ನ ಶಾಸ್ತ್ರಗಳಲ್ಲಿ, ಎರಡು ಬಗೆಯ ಮೀಮಾಂಸಾದರ್ಶನಗಳಲ್ಲಿ ಪಾಂಡಿತ್ಯವಿದ್ದುದಲ್ಲದೆ ಏಕಮೇವಾದ್ವಿತೀಯವೆನಿಸಿದ ಪರಬ್ರಹ್ಮದ ಅರಿವೂ ಇತ್ತೆಂದು ತಿಳಿಯುತ್ತದೆ. ಅವರ ಲೀಲಾವತಿಯನ್ನಷ್ಟೇ ನೋಡಿದರೆ ಸಾಕು, ಭಾಸ್ಕರಾಚಾರ್ಯರೆಂಥ ಕವಿಯಾಗಿದ್ದರೆಂಬುದೂ ಸ್ಪಷ್ಟವಾಗುತ್ತದೆ. ಇಂಥ ಬಹುಶಾಸ್ತ್ರಕೋವಿದರನ್ನು ಯಾವ ಕಾಲದಲ್ಲಿಯೂ ಕಾಣುವುದು ಕಷ್ಟ. ಸುಮಾರು ಸಾವಿರವರ್ಷಗಳ ಹಿಂದೆ ಕಾಶ್ಮೀರದಲ್ಲಿ ಅವತರಿಸಿದ್ದ ಮಹಾಮಾಹೇಶ್ವರ ಅಭಿನವಗುಪ್ತಪಾದರಾದರೂ ಇದೇ ವರ್ಗದವರು. ವೇದಭಾಷ್ಯಾದಿಗಳ ನಿರ್ಮಾಪಕರಾಗಿ 'ಸುಧಾನಿಧಿ' ಗಳೆಂಬ ಹೆಸರುಗಳುಳ್ಳ ಹಲವಾರು ವಿಶ್ವಕೋಶಸದೃಶವಾದ ಕೈಪಿಡಿಗಳನ್ನು ಬರೆದ ನಮ್ಮ ನಾಡಿನವರೇ ಆದ ಶ್ರೀ ಸಾಯಣಾಚಾರ್ಯರು ಕವಿಗಳೂ ಕಲಿಗಳೂ ಆದ ಬಹುಶಾಸ್ತ್ರ ಕಲಾಕೋವಿದರು, ವಿಜಯನಗರಸಾಮ್ರಾಜ್ಯದ ಮುಂಬೆಳಗಿನ ಕಾಲದಲ್ಲಿ ಮಹಾಮಂತ್ರಿಗಳಾಗಿದ್ದು ರಾಷ್ಟ್ರವನ್ನು ಮುನ್ನಡೆಸಿದವರು. ಹೀಗೆಯೇ ಸಾಹಿತೀಸಮರಾಂಗಣ ಸಾರ್ವಭೌಮನಾಗಿದ್ದ ಪರಮಾರಚಕ್ರೇಶ್ವರ ಭೋಜರಾಜನು ಹತ್ತಾರು ಶಾಸ್ತ್ರ-ಕಲೆಗಳನ್ನು ಕುರಿತು ಅನೇಕ ಬೃಹದ್ಗ್ರಂಥಗಳನ್ನು ವೈಶಿಷ್ಟ್ಯಪೂರ್ಣವಾಗಿ ಬರೆದ ಮಹಾಪಂಡಿತ. ಶ್ರೀ ಶಂಕರಭಗವತ್ಪಾದರ ಶಾರೀರಕಭಾಷ್ಯಕ್ಕೆ ವ್ಯಾಖ್ಯೆಯನ್ನು ರಚಿಸಿದ ವಾಚಸ್ಪತಿಮಿಶ್ರರು ಸಮಸ್ತ ದರ್ಶನಗಳಲ್ಲಿಯೂ ಕೋವಿದರಾಗಿದ್ದು ಆಯಾ ದರ್ಶನಗಳ ಬಗೆಗೆಲ್ಲ ಪ್ರಾಮಾಣಿಕವೂ ಮೌಲಿಕವೂ ಆದ ಆಧಾರ ಗ್ರಂಥಗಳನ್ನು ರಚಿಸಿದ ಧೀಮಂತರು. ಹೀಗೆಯೇ ಶ್ರೀಮನ್ನಿಗಮಾಂತದೇಶಿಕರೆಂದು ವಿಶ್ರುತರಾದ ವೇಂಕಟನಾಥರೂ, ಅಪರಶಂಕರರೆಂದೇ ಆದರಿಸಲ್ಪಟ್ಟ ಅಪ್ಪಯ್ಯದೀಕ್ಷಿತರೂ ಅವರ ಸಮಕಾಲೀನರಾಗಿದ್ದ ಶ್ರೀವಿಜಯೀಂದ್ರ ತೀರ್ಥ, ರತ್ನಖೇಟಶ್ರೀನಿವಾಸದೀಕ್ಷಿತ, ಗೋವಿಂದದೀಕ್ಷಿತರಂಥವರೂ ಇದೇ ತೆರನಾಗಿ ಸರ್ವತಂತ್ರ ಸ್ವತಂತ್ರರೆಂದೆನಿಸಿದ್ದರೆಂಬುದು ಇತಿಹಾಸ ಪ್ರಸಿದ್ಧ. ನಮ್ಮ ಪರಂಪರೆಯು ಕೇವಲ ಒಂದೇ ಶಾಸ್ತ್ರವನ್ನು ಓದಿದವನು ಆ ಶಾಸ್ತ್ರದಲ್ಲಿಯ ತೊಡಕುಗಳನ್ನು ಬಿಡಿಸಲೂ ಅಸಮರ್ಥನಾಗುವನೆಂದು ಸಾರಿದೆ. ಹೀಗಾಗಿಯೇ '**ಏಕಂ ಶಾಸ್ತ್ರಮಧೀಯಾನೋ ನ ಗಚ್ಛೇತ್ ಶಾಸ್ತ್ರನಿರ್ಣಯಂ**' ಎಂಬ ಮಾತು ಹುಟ್ಟಿದೆ.

ಇದೀಗ ಕ್ರಿ.ಶ. ಇಪ್ಪತ್ತೊಂದನೆಯ ಶತಾಬ್ದಿಯ ಆರಂಭದಲ್ಲಿ ಇಂಥ ಸರ್ವತಂತ್ರಸ್ವತಂತ್ರರೂ ಬಹುಶಾಸ್ತ್ರಕಲಾವ್ಯುತ್ಪನ್ನರೂ ಆದ ಮಹನೀಯರು ತಮ್ಮ ನಡೆ-ನುಡಿಗಳಿಂದ ಎಲ್ಲರ ಆದರಾಭಿಮಾನಗಳಿಗೆ ಪಾತ್ರರಾಗಿ ನಮ್ಮ ನಡುವೆಯೇ ಸುಳಿದಾಡುವವರು ಉಂಟೇ? ನಮ್ಮ ಈ ನಗರ (ಬೆಂಗಳೂರು) ದಲ್ಲಿಯೇ ಇದ್ದಾರೆಯೇ? ಎಂದು ಯಾರಾದರೂ ಪ್ರಶ್ನಿಸಿದರೆ ನನಗೆ ಕೂಡಲೇ ಹೊಳೆಯುವ ಉತ್ತರ ವಿದ್ಯಾಲಂಕಾರ ಆಚಾರ್ಯ ಸಾ.ಕೃ. ರಾಮಚಂದ್ರರಾಯರೆಂದೇ. ಇವರು ದಿಟವಾಗಿ ವಿದ್ಯೆಗೇ ಅಲಂಕಾರಪ್ರಾಯರು.

ಇವರ ಬಗೆಗೆ ಹೇಳುವುದಾದರೂ ಹೇಗೆ? ಹೇಳದಿರುವುದಾದರೂ ಹೇಗೆ? ಅವರದು ಬರಿಯ ಪ್ರಸಿದ್ಧಿಯಲ್ಲ, ಸಿದ್ಧಿ; ಸಕಲವಿದ್ಯಾಸಮೃದ್ಧಿ, ಸಾರಸ್ವತಸುಧಾಬ್ಧಿ. ಇಂಥವರೊಬ್ಬಿಬ್ಬರನ್ನು ಪಡೆದರೂ ಸಾಕು, ಆ ನಾಡು-ನುಡಿಗಳಿಗೆ ಅರ್ಥಗೌರವ ದಕ್ಕುತ್ತದೆ. ಇಂಥವರೊಬ್ಬರಿದ್ದರೆ ಸಾಕು, ಆ ಸಂಸ್ಕೃತಿಗೆ ಹೆಮ್ಮೆಯುಂಟಾಗುತ್ತದೆ. ಈಚೆಗೆ ಅವರು ಕೈಗೊಂಡ ಮೂವತ್ತು ಸಂಪುಟಗಳಿಗೂ ಮಿಕ್ಕ ಋಗ್ವೇದವ್ಯಾಖ್ಯಾನವನ್ನಷ್ಟೇ ಗಮನಿಸಿ ಅವರನ್ನು ವೇದನಿಧಿಯೆನ್ನೋಣವೇ? ಆಯುರ್ವೇದವನ್ನೂ ಬಲ್ಲವರವರು, ಅಲ್ಲಿಯೂ ಆಕರಕೋಶಗಳನ್ನು ನಿರ್ಮಿಸಿದ್ದಾರೆ. ಅವರ ಹತ್ತಾರು ಸಂಪುಟಗಳ ಆಗಮಕೋಶ-ಪ್ರತಿಮಾಕೋಶ- ವಾಸ್ತುಶಿಲ್ಪಕೋಶ-ದೇವತಾಕೋಶಸಮುಚ್ಚಯಾದಿಗಳನ್ನು ಗಮನಿಸಿ ಅವರನ್ನು ಸರ್ವಾಗಮಸರ್ವಸ್ವವೆನ್ನೋಣವೇ? ಸಂಗೀತಾದಿ ವಿವಿಧ ಲಲಿತಕಲಾರಹಸ್ಯವನ್ನೂ ಬಲ್ಲ ಸಂಗೀತಕಲಾರತ್ನರವರು. ವೇದಾಂತ, ಮೀಮಾಂಸಾ, ನಿರುಕ್ತ, ಮಂತ್ರಶಾಸ್ತ್ರ, ತಂತ್ರವಿದ್ಯಾದಿಗಳನ್ನು ಬಲ್ಲ ವೈದಿಕಸಂಪ್ರದಾಯದ ಶಾಸ್ತ್ರಚೂಡಾಮಣಿಗಳೆನ್ನೋಣವೇ? ಜೈನ-ಬೌದ್ಧಾದಿದರ್ಶನಾಂತರಗಳ ಮೂಲ-ಚೂಲಗಳನ್ನೂ ಅರಿತುನುರಿತ ವಿಶ್ವಕುತೂಹಲಿಗಳವರು. ಶಿಲ್ಪವೇ, ಸ್ಥಾಪತ್ಯವೇ, ಚಿತ್ರವೇ, ಸಾಹಿತ್ಯವೇ; ಯಾವುದುಂಟು? ಯಾವುದಿಲ್ಲ?

ಕಾಲೇಜಿನ ವ್ಯಾಸಂಗದ ದೃಷ್ಟಿಯಿಂದ ಹೇಳುವುದಾದರೆ ಮನಶ್ಶಾಸ್ತ್ರದ ಪೂರ್ವಾಪರಗಳನ್ನು ಆಪೋಷಿಸಿದ ರಾಯರು ಆ ಕ್ಷೇತ್ರದಲ್ಲಿ ಅಧ್ಯಾಪನವನ್ನು ಮಾಡಿದ್ದಲ್ಲದೆ ತೌಲನಿಕಾಧ್ಯಯನದ ಸಂಶೋಧನೆಗಳನ್ನೂ ನಡಸಿದ್ದಾರೆ. ಮ್ಯಾನೇಜ್‌ಮೆಂಟಿನಿಂದ ಮೊದಲ್ಗೊಂಡು ಮಾಡರ್ನ್‌ಸೈನ್ಸಿನವರೆಗೆ ಅನೇಕ ಆಧುನಿಕ ವಿದ್ಯೆಗಳಿಗೆ ಪರಂಪರೆಯ ಕೊಂಡಿಗಳನ್ನು ಬೆಸೆದಿದ್ದಾರೆ. ಅವರ ಗ್ರಂಥರಾಶಿಯನ್ನೇ ಕಂಡರೆ ಅಣ್ಣಪ್ಪದೈವದಂಥ ಜಾನಪದದರ್ಶನವಿರಲಿ, ನಾಟ್ಯಶಾಸ್ತ್ರ ಹಾಗೂ ಪ್ರತಿಭೆ ಎಂದರೇನು? ಎಂಬಂಥ ಸಾಹಿತ್ಯಮೀಮಾಂಸೆಯಿರಲಿ, ಟಿಬೆಟನ್ ತಾಂತ್ರಿಕಸಂಪ್ರದಾಯದ ಬಗೆಗಿನ ಆಂಗ್ಲಭಾಷಾಸಂಪುಟಗಳಿರಲಿ, ಪೌರವವಿಜಯಾದಿಗಳಂಥ ಸಂಸ್ಕೃತ-ಪ್ರಾಕೃತರಚನೆಗಳಿರಲಿ, ಪುರಂದರದರ್ಶನದಂಥ ಸಂಪಾದಿತಗ್ರಂಥರಾಶಿಯಿರಲಿ ; ಯಾವುದರಲ್ಲಿಯೂ ಹೊಸ ಹೊಳಹಿನ ಹಸುರುತನ ಎದ್ದೆದ್ದು ತೋರುತ್ತದೆ. ಅಂಗೈಅಗಲದ ಪುಸ್ತಕಗಳಾದ ನಗೆಯ ನೆಲೆ, ವಿವಾಹ ಪದ್ಧತಿಗಳು, ಜಯದೇವ, ವಾಲ್ಮೀಕಿ, ಅಶ್ವಘೋಷ ಅಂಥವುಗಳಿಂದ ಮೊದಲ್ಗೊಂಡು ಪ್ರೌಢಗಂಭೀರವಾದ ದರ್ಶನೋದಯ, ಡೆವಲಪ್‌ಮೆಂಟ್ ಆಫ್ ದಿ ಋಗ್ವೇದಿಕ್ ಥಾಟ್ ನಂಥ ಗ್ರಂಥಗಳವರೆಗೆ ಎಲ್ಲೆಲ್ಲಿಯೂ ಅವರ ವಿಶಾಲವ್ಯಾಸಂಗದ ಮತ್ತೇಭವಿಕ್ರೀಡಿತವು ತಾಂಡವಿಸುತ್ತದೆ.

ಇನ್ನವರ ಬರೆವಣಿಗೆಯೋ ಬಂಗಾರದ ಬೆರಗೇ ಸರಿ. ಅಂಥ ಹದ-ಪಾಕ, ನವುರು-ನಾಜೂಕು ಇನಿ-ಬನಿ,ಕುಸುರಿ-ಕೌಶಲ, ಮಾರ್ದವ-ಸೌಷ್ಠವಗಳ ಆ ಪ್ರಸನ್ನಗಂಭೀರಶೈಲಿ ಅದೆಷ್ಟು ತಪಸ್ಸಿನ ಫಲವೋ ! ಕಥೆ-ಕಾದಂಬರಿ (ರಾಯರು 'ಸುಖಪ್ರಾರಬ್ಧ' ಎಂಬೊಂದು ರೋಚಕಕಾದಂಬರಿಯನ್ನೂ ಬರೆದಿದ್ದಾರೆ!), ವಿಮರ್ಶೆ-ವ್ಯಕ್ತಿಚಿತ್ರ, ವಿವೃತಿ-ವಿಶ್ಲೇಷಣೆ (ಈಶೋಪನಿಷತ್ತಿಗೆ ಎಲ್ಲ ಭಾಷ್ಯ-ವ್ಯಾಖ್ಯೆಗಳ ಬೆಳಕಿನಲ್ಲಿ ಬರೆದ ವಿಶ್ಲೇಷಣಾತ್ಮಕವಿವೃತಿಯಿಲ್ಲಿ ಉಲ್ಲೇಖಾರ್ಹ), ಜೀವನಚರಿತ್ರೆ (ಶಾರದಾಪೀಠದ ಮಾಣಿಕ್ಯ, ಪುರುಷಸರಸ್ವತಿ, ಕಲಾವಿದ ಕೆ. ವೆಂಕಟಪ್ಪ ಇತ್ಯಾದಿ), ಅನುವಾದ-ಸಂವಾದ ಮುಂತಾದ ಎಲ್ಲ ಬಗೆಯ ಅಭಿವ್ಯಕ್ತಿಗೂ ಬಾಗಿ ಬರುವ,

ಬಳಸಿದಷ್ಟೂ ಬೆಳೆದು ಬೆಳಗುವ ಅವರ ಭಾಷಾಶಿಲ್ಪ ನಿಜಕ್ಕೂ ನಮ್ಮ ನುಡಿಯೊಡಲಿನ ರಸವಿಸ್ಮಯ. ವಿವಿಧಕಲೆಗಳಲ್ಲಿ ಪ್ರಯೋಗಪರಿಣತಿ, ಬಹುಶಾಸ್ತ್ರಗಳಲ್ಲಿ ಅಪಾರದೀಧಿತಿ, ಹತ್ತಾರು ಭಾಷೆಗಳಲ್ಲಿ ಅನರ್ಗಳ ಪಾಂಡಿತಿ, ವಿವಿಧ ಸಾಂಸ್ಕೃತಿಕಸಂದರ್ಭಗಳಲ್ಲಿ ಅಸಮಾನಸಾಧನಸಂಪತ್ತಿ - ಎಲ್ಲಿಂದೆಲ್ಲಿಗೆ ಈ ವ್ಯಾಪ್ತಿ! ಎಂಥ ಗಹನತತ್ತ್ವದ ಸಂಕೀರ್ಣ ಸಂದರ್ಭವನ್ನೂ ಅರಿಯಬಲ್ಲ ಬುದ್ಧಿ, ಆ ಅರಿವನ್ನೆಲ್ಲ ಅಡಕವಾಗಿ ಪ್ರಸಂಗೋಚಿತಪರಿಪಾಕದಿಂದ ಪ್ರಯೋಗಿಸಬಲ್ಲ ಚಿತ್ತ (ರಾಯರ ನೆನಪಿನಶಕ್ತಿ ಅಸಾಧಾರಣ. ಅದೆಷ್ಟೋ ಭಾಷಣಗಳನ್ನವರು ಬರಿಗೈಯಲ್ಲಿಯೇ ನಿರ್ವಹಿಸಿದ್ದಾರೆ, ನಿರ್ವಹಿಸುತ್ತಿದ್ದಾರೆ ಕೂಡ. ಉದ್ಧರಣಗಳೆಲ್ಲ ವಾಚೋವಿಧೇಯ), ಆ ಪ್ರಮೇಯ ನಿರೂಪಣೆಯಲ್ಲಿ ಎಣೆಯಿಲ್ಲದ ತಿಳಿತನ, ತುಂಬುತನ ಹಾಗೂ ನಳನಳಿಸುವ ಬೆಳಗಿನ ಬೆಡಗುಗಳನ್ನು ಬಗೆಗಾಣಿಸಬಲ್ಲ ಮನಸ್ಸು - ಈ ಒಂದೊಂದೂ ರಾಯರ ವಿದ್ಯಾದೇವಾಲಯ ಗೋಪುರದ ಕಾಂಚನಕಲಶಗಳೇ ಸರಿ. ಅವರು ನಮ್ಮೊಡನಿರುವ ಸಂಚಾರಿ ಸಂಸ್ಕೃತಿಸರ್ವಸ್ವವೇ ಸೈ.

ಪ್ರೊ। ರಾಮಚಂದ್ರರಾಯರದು ಸ್ವಯಂನಿರ್ಮಿತವ್ಯಕ್ತಿತ್ವ. ಪಾಲಕ್ಕಾಡು ನಾರಾಯಣ ಶಾಸ್ತ್ರಿ, ಭದ್ರಾಂತ ನಾರದಮಹಾಸ್ಥವಿರ, ವಿನಯಚಂದ್ರಮುನಿ, ರಾಳ್ಲಪಲ್ಲಿ ಅನಂತಕೃಷ್ಣ ಶರ್ಮಾ, ಕಲಾವಿದ ಕೆ. ವೆಂಕಟಪ್ಪ, ಹೆಮ್ಮಿಗೆ ದೇಶಿಕಾಚಾರ್ಯರಂಥ ಅನೇಕ ಪುಣ್ಯಶ್ಲೋಕ ಗುರುಗಳಿಂದ ವಿದ್ಯೆಯನ್ನು ಗಳಿಸಿ ''**ತಸ್ಯ ಮೇ ಸರ್ವಶಿಷ್ಯಸ್ಯ ನೋಪದೇಶದರಿದ್ರತಾ**'' ಎಂಬಂತಿದ್ದರೂ, ಯಾವುದಕ್ಕೂ ಕುರುಡಾಗಿ ಗಂಟುಬೀಳುವವರಲ್ಲ. ನಿಸ್ಸ್ಪೃಹರಾಗಿ ಅನುದಿನವೂ ಅನೇಕವರ್ಷಗಳಿಂದ ಆಸಕ್ತವಿದ್ಯಾರ್ಥಿಗಳಿಗೆ ಅನೇಕಶಾಸ್ತ್ರಗಳನ್ನು ಪಾಠ ಹೇಳುವ ಆದರ್ಶಗುರುಗಳಾಗಿ ಶಿಷ್ಯವತ್ಸಲರಾಗಿ ಗೌರವಭಾಜನರಾಗಿದ್ದೂ ಯಾವುದೇ 'ಮಠ'ವನ್ನು ತಮ್ಮ ಪ್ರಚಾರಕ್ಕಾಗಿ ಕಟ್ಟಿಕೊಂಡವರು ಇವರಲ್ಲ.

ತಮಗೆ ಸಂದ ಪ್ರಶಸ್ತಿಗಳಿಗಾಗಲಿ ಪುರಸ್ಕಾರಗಳಿಗಾಗಲಿ, ಸಮರ್ಪಿತ ಸಂಮಾನಗಳಿಗಾಗಲಿ ನಿವೇದಿತನೀರಾಜನಗಳಿಗಾಗಲಿ ಅವರು ಬಗೆತೆತ್ತದ್ದಿಲ್ಲ, ನಗೆಬಿರಿದದ್ದಿಲ್ಲ. ಅಕಾಡೆಮಿಗಳ ಪ್ರಶಸ್ತಿಗಳ ಸುರಿಮಳೆಯೇ? ಸಂಘ-ಸಂಸ್ಥೆಗಳ ಸತ್ಕಾರವೇ? ವಿಶ್ವವಿದ್ಯಾಲಯಗಳ ಮನ್ನಣೆಯೇ? ಸರ್ಕಾರದ ಸಮರ್ಚೆಯೇ? - ಯಾವುದಕ್ಕೂ ಅವರು ನಿಷ್ಪಂದರು. ಅವರಿಗೆ ನಾವು ಹಲವರು ಅಭಿಮಾನಿಗಳು ಸೇರಿ ಅರ್ಥಪೂರ್ಣವಾದ ಅಚ್ಚುಕಟ್ಟಿನದೂ ಆದ ಸಂಭಾವನಗ್ರಂಥವೊಂದನ್ನರ್ಪಿಸಿ ಅವರ ಕೃತಿಗಳ ಬಗೆಗೊಂದು ವಿಚಾರಗೋಷ್ಠಿಯನ್ನೂ ಮಾಡಬೇಕೆಂದು ಹರಸಾಹಸ ಮಾಡಿದೆವಾದರೂ ಅವರು ಎಳ್ಳಷ್ಟೂ ಜಗ್ಗಲಿಲ್ಲವೆಂಬ ಸಂಗತಿಯನ್ನಿಲ್ಲಿ ಸ್ಮರಿಸಿದರೆ ರಾಯರ ಪೂಜಾವಿಮುಖತೆಯ ಆಯಾಮ ಅರಿವಾಗದಿರದು. ಅವರ ವ್ಯಾಸಂಗ-ಲೇಖನ-ಉಪನ್ಯಾಸ- ಪ್ರವಚನಗಳೆಲ್ಲ 'ಸ್ವಾಂತಸ್ಸುಖಾಯ' ಸಾಗುವ ಲೀಲಾಖೇಲನ. ತಾವು ಬರೆದ ಅಸಂಖ್ಯಲೇಖನಗಳನ್ನೂ ('ಸುಧಾ' ಪತ್ರಿಕೆಗೆ ಅವರು ಬಹುಕಾಲ ಬರೆದಿದ್ದಾರೆ, ನಮ್ಮ 'ಅನನ್ಯ ಅಭಿವ್ಯಕ್ತಿ'ಗೇ ಸಾಕಷ್ಟು ಲೇಖನಗಳನ್ನಿತ್ತಿರುವುದಲ್ಲದೆ ಸಂಗೀತಕಲಾವಿದರ ಲೇಖನ-ಚಿತ್ರಮಾಲೆ, ದಿನದರ್ಶಿಕೆಯ ಸಜ್ಜಿಕೆ ಮುಂತಾದುವನ್ನೂ ನಡಸಿದ್ದಾರೆ. ಮೈಸೂರು ವಿ.ವಿ.ದ ಕನ್ನಡವಿಶ್ವಕೋಶಕ್ಕಾಗಿ ಬೆಲೆಯುಳ್ಳ ನೂರಾರು ಲೇಖನಗಳನ್ನು ಅನೇಕ ವಿಷಯಗಳ ಬಗೆಗೆ ಬರೆದಿದ್ದಾರೆ). ನೂರೈವತ್ತಕ್ಕೂ ಮಿಕ್ಕ ಪುಸ್ತಕಗಳನ್ನೂ ಅವರು ನೆನೆಯುವುದೇ ಇಲ್ಲ. ಬರೆಹವು ಮುಗಿದ ಬಳಿಕ ಅದರ ಬಗೆಗಿನ ಎಲ್ಲ ಮೋಹವೂ ನೀಗಿರುತ್ತದೆಂಬುದು ರಾಯರ ಇಂಗಿತ.

ನಮ್ಮ ಹಿರಿದಾದ ಸಂಸ್ಕೃತಿ-ಪರಂಪರೆಗಳ ಅಸಂಖ್ಯ ತಂತುಗಳನ್ನು ಕೂಡಿದಮಟ್ಟಿಗೂ ಅಖಂಡವಾಗಿ ರಕ್ಷಿಸಿ, ವ್ಯಾಖ್ಯಾನಿಸಿ, ವಿಶ್ಲೇಷಿಸಿ, ಬಾಳಿ, ಪ್ರಚುರ ಪಡಿಸುವುದರಲ್ಲಿ ಜೀವನಸಾರ್ಥಕ್ಯವನ್ನು ಕಾಣುತ್ತಿರುವ ಪ್ರೊ। ರಾಮಚಂದ್ರರಾಯರಿಗೆ, ಅವರ ಈ ಸಾರಸ್ವತ ಸವನಕ್ಕೆ ಏನೆಂದು ವಂದನೆ ಸಲ್ಲಿಸೋಣ? ಇನ್ನೆಂಥ

ಯಜ್ಞಭಿಕ್ಷೆಯನ್ನು ಅರ್ಪಿಸೋಣ? ಅವರ ಈ ಎಲ್ಲ ಬಗೆಯ ವಿದ್ಯಾಸಮಾರಾಧನೆಗೂ ನಾವು ಎಂದೆಂದೂ ಋಣಿಗಳೆಂದು ಕೈಮುಗಿದು, ಕೈಕಟ್ಟಿ ಕೂರುವುದೊಂದೇ ನಮ್ಮ ಪಾಲಿಗೆ ಸಂದ ಪೂಜಾಭಾಗ್ಯ.

ಬೆಳ್ನುಡಿಯ, ಬೆಳ್ನಗೆಯ, ಮಿಂಚುಗಂಗಳ, ಸಿತಸ್ಮಿತದ ರಾಮಚಂದ್ರರಾಯರ ಹೊರನೋಟದ ನಿಲವೇ ಅವರ ಅಂತರಂಗ ವೈಭವಕ್ಕೊಂದು ಮಣಿದರ್ಪಣ. ಹೆಚ್ಚಾಗಿ ಹಸನ್ಮುಖರೂ ವಿನೋದಶೀಲರೂ ಶುಚಿ-ರುಚಿಗಳ ಸ್ನೇಹಜೀವಿಗಳೂ ಆದವರಾದರೂ ನಿಷ್ಠುರಸತ್ಯಗಳನ್ನು ನಿರ್ಭೀತಿಯಿಂದ ಎಂಥವರಿಗೂ ಎಂಥ ವೇದಿಕೆಯಲ್ಲಿಯೂ ಆಡಿ ದಕ್ಕಿಸಿಕೊಳ್ಳಬಲ್ಲ ಕೆಚ್ಚು ಅವರದೇ, ಅವರೊಬ್ಬರದೇ. ನಮ್ಮ ಸಂಸ್ಕೃತಿಯ ನೆಲೆ - ಬೆಲೆಗಳನ್ನರಿಯದೆಯೇ ಸುಸಂಪ್ರದಾಯದ ಸೂಕ್ಷ್ಮವನ್ನು ತಿಳಿಯದೆಯೇ ಎಲ್ಲವನ್ನೂ ಕುರುಡಾಗಿ ಹೊಗಳುವ ಅಥವಾ ತೆಗಳುವ ಯಾವುದೇ ಯತ್ನಕ್ಕೂ ರಾಯರದು ಸ್ಫೋಟಕಸದೃಶಪ್ರತಿಕ್ರಿಯೆ. ಈ ನಿರ್ಣಬಂಧ ಶಾರ್ದೂಲವಿಕ್ರೀಡಿತಕ್ಕೆ ಮುಖ್ಯಕಾರಣ ಅವರ ನಿರೀಹತೆಯೇ - '**ನಿರೀಹಾಣಾಂ ಈಶಃ ತೃಣಮಿವ ತಿರಸ್ಕಾರವಿಷಯಃ**'.

ರಾಯರ ಬರೆಹಗಳಾಗಲಿ, ಭಾಷಣಗಳಾಗಲಿ ವಿವಿಧವರ್ಣಶಬಲಿತ ಸುರಚಾಪದಂತೆ, ವಜ್ರದೀಪ್ತಿಯಂತೆ ಬಹುವಿಚಾರಸ್ಫುರಕ್ಕಾಗಿರುತ್ತವೆ, ಅನೇಕ ಅಚುಂಬಿತ ವಿಷಯಗಳ ಬೇರೆ ಬೇರೆ ಎಳೆಗಳನ್ನು ಭಾವ - ಬುದ್ಧಿಗಳ ಮಗ್ಗದ ಮೇಲೆ ನೇಯ್ದ ಕೌಶೇಯವಾಗಿರುತ್ತವೆ. ತಮ್ಮ ಬಾಳಿಗೊಂದು ಹಿರಿದಾದ ಗುರಿಯನ್ನು ಕಂಡುಕೊಂಡು ಅದರಂತೆ ಬಾಳುವಲ್ಲಿ ಅದೆಷ್ಟೋ ತೊಡಕು-ತೊಂದರೆಗಳನ್ನು ಅನುಭವಿಸಿಯೂ ಅವಕ್ಕೆಲ್ಲ ಅಂಜದೆ, ಅಳುಕದೆ ಬಾಳುತ್ತಿರುವ, ಬೆಳಗುತ್ತಿರುವ ರಾಮಚಂದ್ರರಾಯರು ನಮ್ಮ ಕಾಲದ ಏಕವ್ಯಕ್ತಿ ವಿಶ್ವವಿದ್ಯಾಲಯವಾಗಿ ಅನ್ಯಾದೃಶರು.

ಕವಿವರೇಣ್ಯ ನೀಲಕಂಠದೀಕ್ಷಿತನು ತನ್ನ ಹಿರಿಯಜ್ಜ ಅಪ್ಪಯ್ಯ ದೀಕ್ಷಿತರ ಬಗೆಗೆ ಹೀಗೆನ್ನುತ್ತಾನೆ :

ಯಂ ವಿದ್ಮ ಇತಿ ಯುದ್ಗ್ರಂಥಾನಭ್ಯಸ್ಯಾಮೋಽಖಿಲಾನಿತಿ ।
ಯಸ್ಯ ಶಿಷ್ಯಾಃ ಸ್ಮ ಇತಿ ಚ ವಿಕತ್ಥಂತಿ ವಿಪಶ್ಚಿತಃ ॥

''ನಾವು ಅವರ ಬಗೆಗೆ ಕೇಳಿ ಬಲ್ಲೆವು, ನಾವು ಅವರ ಕೃತಿಗಳನ್ನೆಲ್ಲ ವ್ಯಾಸಂಗ ಮಾಡಿದ್ದೇವೆ, ನಾವು ಅವರಲ್ಲಿ ಪಾಠವನ್ನೇ ಕಲಿತಿದ್ದೇವೆ - ಎಂದು ವಿದ್ವಾಂಸರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.''

ಈ ಮಾತಿಗೆ ಆಚಾರ್ಯ ರಾಮಚಂದ್ರರಾಯರೂ ಹೊರತಲ್ಲ. ಇವರ ಪ್ರೀತಿಗೆ ನಾವೆಲ್ಲ ಸದಾ ದಕ್ಕುವಂತಾಗಲಿ; ವೈಯಕ್ತಿಕವಾಗಿ ಅವರಿಗೆ ಈ ಮೂಲಕ ನಾನು ನನ್ನೊಂದು ನಮನವನ್ನು ಸಲ್ಲಿಸುವ ಅವಕಾಶದೊರೆತದ್ದು ಅನಂತವಾಗಲಿ.

॥ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ ॥

ಶತಾವಧಾನಿ ಡಾ॥ ಆರ್. ಗಣೇಶ್

ಮೊದಲ ಮಾತು

ಇದೊಂದು ಚಿತ್ರಶಾಲೆ. ಇಲ್ಲಿ ನೆರೆದಿರುವ ಮಹನೀಯರೆಲ್ಲ ಸಂಪ್ರದಾಯ ಸಂಗೀತದ ಮೂಲಕ ರಸಿಕರಿಗೆ ಪರಮಾನಂದವನ್ನು ಉಣಬಡಿಸಿದವರು; ಹಾಗೆ ಮಾಡಿ ಕೃತಾರ್ಥರಾದವರು. ನನ್ನ ಪಾಲಿಗೆ ಈ ಪರಮಾನಂದವನ್ನು ಒದಗಿಸಿದವರ ಚಿತ್ರಗಳನ್ನು ಮನಸ್ಸಿನಲ್ಲಿ ಉಳಿಸಿಕೊಂಡು ಗೆರೆಗಳಲ್ಲಿ ಕಡೆದಿಡುವ ಪ್ರಯತ್ನವನ್ನು ಮಾಡಿದ್ದೇನೆ. ಇವರಷ್ಟೆ ಮಂದಿ ನನಗೆ ಸುಖವನ್ನು ನೀಡಿದವರೆಂದಲ್ಲ; ಚಿತ್ರಣಕ್ಕೆ ಬಂದವರು ಇವರಷ್ಟು ಮಂದಿ, ಇವರಲ್ಲಿ ಹಲವರು ನನಗೆ ನೇರಾಗಿ ಪರಿಚಿತರು; ಉಳಿದವರು ಹಳಬರು, ಕೇಳ್ಮೆಯಿಂದಷ್ಟೆ ನನಗೆ ಅವರ ಪರಿಚಯ. ಆದರೂ ಅವರ ಸಂಗೀತದ, ವ್ಯಕ್ತಿತ್ವದ ಸೊಬಗಿಗೆ ಮಾರುಹೋಗಿದ್ದೇನೆ.

ಚಿತ್ರಣದ ಸಂದರ್ಭ ಇದು. ನನಗೆ ಎಳವೆಯಿಂದ ಸಂಗೀತ ಚಿತ್ರಶಿಲ್ಪಗಳನ್ನು ಕುರಿತಂತೆ ಸಮಾನವಾದ ಆಸಕ್ತಿ, ಅಭಿರುಚಿ. ಉದ್ಯೋಗವನ್ನು ಹಿಡಿದು ಬೆಂಗಳೂರಿಗೆ ಬಂದಮೇಲೆ ಗಾಯನಸಮಾಜದ ಸೆಳೆವು ಮೂಡಿಕೊಂಡದ್ದು ಸಹಜವೇ. ಅಲ್ಲಿ ಕಾರ್ಯಕ್ರಮಕ್ಕೆಂದು ಬರುತ್ತಿದ್ದ ಸಂಗೀತವಿದ್ವಾಂಸರ ವಸತಿ, ಊಟ ಗಾಯನಸಮಾಜದ ಕಾರ್ಯದರ್ಶಿಯಾಗಿದ್ದ 'ರಾಜಶ್ರೀ' (ಕೆ. ಶ್ರೀನಿವಾಸಯ್ಯಂಗಾರ್, ವಕೀಲರು) ಅವರ ಮನೆಯಲ್ಲೇ. ಸ್ನೇಹಿತನಾಗಿದ್ದ ನನಗೆ ಊಟದಲ್ಲಿ ಪಾಲ್ಗೊಳ್ಳಲು ನಿತ್ಯನಿಮಂತ್ರಣ ಇದ್ದಿತು. ಆಗ ಸಂಗೀತ ವಿದ್ವಾಂಸರೊಂದಿಗೆ ಒಡನಾಟ, ಮಾತುಕತೆ ಒದಗಿ ಬಂದಿತು. ಆ ಸಂಗೀತವಿದ್ವಾಂಸರೂ ಮತ್ತೆ ಮತ್ತೆ ಗಾಯನಸಮಾಜಕ್ಕೆ ಬರುತ್ತಲೆ ಇದ್ದುದರಿಂದ ಪರಸ್ಪರ ಪರಿಚಯ ಆಳವಾಯಿತು, ವಿಶ್ವಾಸವೂ ಬೆಳೆಯಿತು. ಅವರೊಂದಿಗೆ ಮಾತುಕತೆಯಾಡುತ್ತ ಕಾಲಹರಣ ಮಾಡುತ್ತಿದ್ದಾಗ ಅವರ ಚಿತ್ರಗಳನ್ನೂ ಬಿಡಿಸಿಕೊಳ್ಳುವುದಾಯಿತು.

ಹೀಗೆ ಈ ಚಿತ್ರಗಳು ಬೇರೆ ಬೇರೆ ಕಾಲಗಳಲ್ಲಿ, ಹತ್ತಾರು ವರ್ಷಗಳ ಅವಧಿಯಲ್ಲಿ, ಮೈದಳೆದವು. ಅವೆಲ್ಲ ಸ್ವಸಂತೋಷಕ್ಕಾಗಿಯೇ. ಪ್ರಕಾಶನದ ಉದ್ದೇಶ ಎಷ್ಟು ಮಾತ್ರವೂ ಇರಲಿಲ್ಲ, ಆದರೆ ನನ್ನ ಮಾನ್ಯ ಮಿತ್ರ ಅನನ್ಯದ ಡಾ|| ರಾಘವೇಂದ್ರ ತಮ್ಮ 'ಅಭಿವ್ಯಕ್ತಿ' ಮಾಸಪತ್ರಿಕೆಯ ಒಂದು ಹಂತದಲ್ಲಿ 'ಹಿರಿಯ ಹೆಜ್ಜೆಗಳು' ಎಂಬ ಚಿತ್ರ-ಲೇಖನ ಅಂಕಣವೊಂದನ್ನು ಆಲೋಚಿಸಿ, ನನ್ನಲ್ಲಿ ಪ್ರಸ್ತಾಪಿಸಿದಾಗ ಈ ಚಿತ್ರಗಳನ್ನು ಅವರಿಗೆ ಒಪ್ಪಿಸಿದೆ. ಅವೆಲ್ಲ ಕೂಡಿಕೊಂಡು ಈಗ ಈ ಪುಸ್ತಕ ಹೊರಬರುತ್ತಿದೆ. ಇಲ್ಲಿ ಸೇರಿರುವ ಎಲ್ಲ ವಿದ್ವಾಂಸರೂ ನಮ್ಮ ಪೀಳಿಗೆಗೆ ದಿಟವಾಗಿ ಹಿರಿಯ ಹೆಜ್ಜೆಗಳೇ, ಅನುಕರಣೀಯರೇ.

ಚಿತ್ರಕ್ಕೆ ಬರಹವೂ ಇರಬೇಕಲ್ಲ? ನನಗೆ ಹತ್ತಿರದಿಂದ ಪರಿಚಿತರಾಗಿದ್ದ ಅನೇಕ ಸಂಗೀತ ವಿದ್ವಾಂಸರನ್ನು ಕುರಿತಂತೆ ವಿವರಗಳೇನೋ ನನಗೆ ತಿಳಿದಿದ್ದುವು; ಅವರ ಸಂಗೀತವನ್ನೂ ಸವಿದಿದ್ದೆನಾಗಿ ಬರಹ ಸುಲಭವೇ ಆಯಿತು. ಆದರೆ ಅಷ್ಟು ಪರಿಚಯಕ್ಕೆ ಬಾರದ ವಿದ್ವಾಂಸರ ವಿಚಾರವಾಗಿ ನನಗೆ ನೆರವಾದುದು ನನ್ನ ಸ್ನೇಹಿತರೂ ಸಹಪಾಠಿಯೂ ಆದ ಡಾ|| ವಿ. ಎಸ್. ಸಂಪತ್ಕುಮಾರಾಚಾರ್ಯರ ಎರಡು ಸಂಪುಟಗಳ 'ಕರ್ನಾಟಕ ಸಂಗೀತ ಪಾರಿಭಾಷಿಕ ಶಬ್ದಕೋಶ'; ಚೆನ್ನೈನಿಂದ ಹೊರಬರುತ್ತಿರುವ 'ಶ್ರುತಿ' ಪತ್ರಿಕೆಯ ಸಂಚಿಕೆಗಳೂ ನೆರವಾದುವು. ಇವೆರಡೂ ಆಕರಗಳಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಇನ್ನು ಈ ಚಿತ್ರಸಂಕಲವನ್ನು 'ಅನನ್ಯದ ಅಭಿವ್ಯಕ್ತಿ'ಯು ಈಗ ಹೊರತರಲು ಸಂಕಲ್ಪಿಸಿರುವುದು ನನಗೊಂದು ಕೋಡನ್ನು ಮೂಡಿಸಿದೆ. ಅದಕ್ಕಾಗಿ ನನ್ನ ಸ್ನೇಹಿತರಾದ ಡಾ|| ರಾಘವೇಂದ್ರ ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಮುದ್ರಣದ ಕೆಲಸದಲ್ಲಿ ನಾನು ಕೊಟ್ಟ ತೊಂದರೆಗಳನ್ನು ತಾಳಿಕೊಂಡು, ಸೊಗಸಾಗಿ ಬೆಳಕು ಕಾಣಿಸಿರುವ ಶ್ರೀ ರಾಜು, ಶ್ರೀ ಅಶ್ವಿನ್ ಮೊದಲಾದ ಮಿತ್ರರಿಗೂ ಋಣಿಯಾಗಿದ್ದೇನೆ.

ಸಾ. ಕೃ ರಾಮಚಂದ್ರರಾವ್

ಪರಿವಿಡಿ

ರಾಳ್ಲಪಲ್ಲಿ ಅನಂತಕೃಷ್ಣಶರ್ಮರು	11	ತಿರುವಿಲ್ವಾಮಲೆ ಬಿಲ್ವಾದ್ರಿ ಅಯ್ಯರ್	51	ಮಾಮುಂಡಿಯಾ ಪಿಳ್ಳೆ *	91
ವೈಣಿಕಶಿಖಾಮಣಿ ಶೇಷಣ್ಣ *	13	ಕಾರೈಕುಡಿ ಸಾಂಬಶಿವ ಅಯ್ಯರ್	53	ಶರ್ಮಾದೇವಿ ಸುಬ್ರಹ್ಮಣ್ಯ ಶಾಸ್ತ್ರಿ	93
ವೀಣಾ ಧನಮ್ಮಾಳ್ *	15	ಟಿ. ಆರ್. ಮಹಾಲಿಂಗಂ	55	ನಾರಾಯಣಸ್ವಾಮಿ ಅಪ್ಪಾ	95
ವೈಣಿಕಪ್ರವೀಣ ಸುಬ್ಬಣ್ಣ *	17	ನಾಟನಹಳ್ಳಿ ಚೆನ್ನಕೇಶವಯ್ಯ	57	ಪಾಲಕ್ಕಾಡು ನಾರಾಯಣಸ್ವಾಮಿ	97
ಬಿಡಾರದ ಕೃಷ್ಣಪ್ಪ *	19	ಮಧುರೆ ಮಣಿ ಅಯ್ಯರ್	59	ಡಾ| ಎಸ್. ರಾಮನಾಥನ್	99
ಮಹಾರಾಜಪುರಂ ವಿಶ್ವನಾಥಯ್ಯರ್	21	ಡಿ. ಸುಬ್ಬರಾಮಯ್ಯ	61	ಎಂ. ಡಿ. ರಾಮನಾಥನ್	101
ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೆ	23	ನಾಮಕ್ಕಲ್ ನರಸಿಂಹ ಅಯ್ಯಂಗಾರ್ *	63	ಎಂ. ಎ. ನರಸಿಂಹಾಚಾರ್	103
ಮುಡಿಕೊಂಡಾನ್ ವೆಂಕಟರಾಮಯ್ಯರ್	25	ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್	65	ಮಂಗಳಂಪಲ್ಲಿ ಬಾಲಮುರಳೀಕೃಷ್ಣ	105
ಪಾಪನಾಶಂ ಶಿವನ್ *	27	ಪಾಲಕ್ಕಾಡು ಮಣಿ ಅಯ್ಯರ್	67	ಶ್ರೀಪಾದ ಪಿನಾಕಪಾಣಿ *	107
ಪುದುಕ್ಕೊಟ್ಟೆ ದಕ್ಷಿಣಾಮೂರ್ತಿ ಪಿಳ್ಳೆ *	29	ಚೆಂಬೈ ವೈದ್ಯನಾಥ ಭಾಗವತರು	69	ಎಂ. ಎಸ್. ಶೆಲ್ವಪುಳ್ಳೆ ಅಯ್ಯಂಗಾರ್	109
ಮನ್ನಾರುಗುಡಿ ಪಕ್ಕೀರಿ ಪಿಳ್ಳೆ *	31	ಟಿ. ಕೆ. ರಂಗಾಚಾರಿ	71	ಸಂಧ್ಯಾವಂದನಂ ಶ್ರೀನಿವಾಸರಾವ್	111
ಬೂದಲೂರು ಕೃಷ್ಣಮೂರ್ತಿಶಾಸ್ತ್ರಿ	33	ಲಾಲ್ಗುಡಿ ಜಯರಾಮನ್	73	ಚಿಂತಲಪಲ್ಲಿ ವೆಂಕಟರಾಯರು	113
ಮುತ್ತಯ್ಯ ಭಾಗವತರು	35	ಟಿ. ಎಂ. ಪುಟ್ಟಸ್ವಾಮಯ್ಯ	75	ಕೃಷ್ಣರಾಜ ವಡೆಯರ್ (ನಾಲ್ವಡಿ) *	115
ಕಾಂಚೀಪುರಂ ನಾಯನಾಪಿಳ್ಳೈ *	37	ಟಿ. ಚೌಡಯ್ಯ	77	ಚಿಕ್ಕರಾಮರಾಯರು	117
ಪಾಲಕ್ಕಾಡು ರಾಮಭಾಗವತರು	39	ಎಚ್. ಪುಟ್ಟಾಚಾರ್	79	ವೀಣೆ ಶಿವರಾಮಯ್ಯ	119
ಮೈಸೂರು ಕೆ. ವಾಸುದೇವಾಚಾರ್ಯರು	41	ಕೆ. ಎಸ್. ನಾರಾಯಣ ಸ್ವಾಮಿ	81	ಎಸ್. ವಿ. ಪಾರ್ಥಸಾರಥಿ	121
ಟೈಗರ್ ವರದಾಚಾರ್ಯರು	43	ತುರೈಯೂರು ರಾಜಗೋಪಾಲ ಶರ್ಮ	83	ಎಂ. ಎಸ್. ಸುಬ್ಬುಲಕ್ಷ್ಮಿ	123
ತಿರುವಿಯಮಿಮಲ್ಲೈ ಸುಬ್ರಹ್ಮಣ್ಯ ಪಿಳ್ಳೆ	45	ಮುಸಿರಿ ಸುಬ್ರಹ್ಮಣ್ಯಯ್ಯರ್	85	ತಿರುವಾಲಂಗಾಡು ಸುಂದರೇಶ ಅಯ್ಯರ್	125
ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ	47	ಶೆಮ್ಮಂಗುಡಿ ಶ್ರೀನಿವಾಸಯ್ಯರ್	87	ವಿ. ದೊರೆಸ್ವಾಮಿ ಅಯ್ಯಂಗಾರ್	127
ದೇವಕೋಟೈ ನಾರಾಯಣಯ್ಯಂಗಾರ್	49	ದ್ವಾರಂ ವೆಂಕಟಸ್ವಾಮಿ ನಾಯ್ಡು	89	ವರ್ಣ ಚಿತ್ರಗಳು........................	129-136

* ನನಗೆ ನೇರವಾಗಿ ಪರಿಚಯ ಇಲ್ಲದವರು.

ತಾಳ್ಳಪಾಕಂ ಅನ್ನಮಾಚಾರ್ಯರ ಸಂಕೀರ್ತನೆಗಳಿಗೆ ಶುದ್ಧಶಾಸ್ತ್ರೀಯ ರೂಪಕೊಟ್ಟು, ಸಂಗೀತ ವಿನಿಕೆಗಳಲ್ಲಿ ಬಳಕೆಗೆ ತಂದ ಮಹನೀಯರು. ಗಾಯಕರು, ಸಂಗೀತಶಾಸ್ತ್ರಕ್ಕೆ ಪ್ರಮಾಣಪುರುಷರು, ಪಿಟೀಲುವಾದಕರು. ವಾಗ್ಗೇಯಕಾರರು. ತೆಲುಗು ಸಾಹಿತ್ಯದಲ್ಲಿ ಸೀಮಾಪುರುಷರು. ಕವಿ, ಗ್ರಂಥಕಾರರು, ವಿಮರ್ಶಕರು, ವಾಗ್ಮಿ. ಕನ್ನಡದಲ್ಲೂ ಗ್ರಂಥಕಾರರು. ಸಂಸ್ಕೃತದಲ್ಲಿಯೂ ಕವಿತೆಗಳು, ಉಪನ್ಯಾಸಗಳು.

ಅನಂತಪುರ ಜಿಲ್ಲೆಯ ರಾಳ್ಳಪಲ್ಲಿ ಹುಟ್ಟಿದೂರು; ತಂದೆ ಕೃಷ್ಣಮಾಚಾರ್ಯರಿಂದ ಸಂಸ್ಕೃತ, ತೆಲುಗು ಸಾಹಿತ್ಯಗಳಿಗೆ ಪ್ರವೇಶ; ತಾಯಿಯಿಂದಾಗಿ ಸಂಗೀತದಲ್ಲಿ ಒಲವು. ಮೈಸೂರಿನಲ್ಲಿ ಪರಕಾಲಮಠದಲ್ಲಿ ಸಂಸ್ಕೃತ ಪ್ರೌಢ ವಿದ್ಯಾಭ್ಯಾಸ. ಆಗಲೇ ಮೈಸೂರು ಕರಿಗಿರಿರಾಯರಲ್ಲಿ ಸಂಗೀತದ ಕಲಿಕೆ. ಮುಂದೆ ಬಿಡಾರಂ ಕೃಷ್ಣಪ್ಪನವರ ಬಳಿ ದೀರ್ಘಕಾಲದ ಶಿಷ್ಯವೃತ್ತಿ. ವೀಣೆ ಶೇಷಣ್ಣನವರೊಡನೆ ನಿಕಟವಾದ ಸಂಪರ್ಕ. ಅವರೆಲ್ಲರಿಗೂ ಇವರು 'ಪಂಡಿತರು'!

ಮೈಸೂರು ಮಹಾರಾಜ ಕಾಲೇಜಿನಲ್ಲಿ ತೆಲುಗು ಪಂಡಿತರಾಗಿ ಸೇವೆ ಸಲ್ಲಿಸಿದರು (1912-1949). ಅನಂತರ ತಿರುಪತಿಯ ಪ್ರಾಚ್ಯಸಂಶೋಧನ ಸಂಸ್ಥೆಯಲ್ಲಿ ಅನ್ನಮಾಚಾರ್ಯರ ರಚನೆಗಳಿಗೆ ಸ್ವರಸಂಯೋಜನೆ ಮಾಡುವ ಕೆಲಸವನ್ನು ಕೈಗೊಂಡು 23 ಸಂಪುಟಗಳನ್ನು ಪ್ರಕಟಿಸಿದರು. ತಿರುಪತಿಯ ವೆಂಕಟೇಶ್ವರ ವಿಶ್ವವಿದ್ಯಾನಿಲಯವು ಡಿ.ಲಿಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಸ್ವತಂತ್ರ ಮನೋವೃತ್ತಿಯವರು; ಗಾಯನವನ್ನು ಕಲೆಯಂತೆ ಪರಿಗಣಿಸಿದರು, ವೃತ್ತಿಯಾಗಿ ಹಿಡಿಯಲಿಲ್ಲ. ಸಂಪ್ರದಾಯದಲ್ಲಿ ಶ್ರದ್ಧೆ, ಜೀವನದಲ್ಲಿ ಪರಿಶುದ್ಧಿ, ಹೃದಯದಲ್ಲಿ ರಸವಂತಿಕೆ, ಸರಳವಾದ ಬದುಕು, ಅಧ್ಯಾತ್ಮದತ್ತ ಒಲವು. ಹೇಳಿಕೇಳಿ ರಸಿಕರು, ಸಹೃದಯರು.

'ಸಂಗೀತಕಲಾನಿಧಿ'; 'ಸಂಗೀತಕಲಾಪ್ರಪೂರ್ಣ'. ಸಂಗೀತ-ಸಾಹಿತ್ಯ ಸಂಸ್ಥೆಗಳಲ್ಲಿ ಇವರಿಗೆ ಸರ್ವಮಾನ್ಯತೆ; ವಿದ್ವಾಂಸರ ಸಮೂಹದಲ್ಲಿ ಅಗ್ರಪಂಕ್ತಿಯ ಮರ್ಯಾದೆ. ಅವರ ವಿಮರ್ಶೆಗೆ ಎಲ್ಲರಿಂದಲೂ ಆದರವೇ. ❖



ರಾಳ್ಲಪಲ್ಲಿ ಅನಂತಕೃಷ್ಣಶರ್ಮರು
(1893-1978)

ಕರ್ನಾಟಕ ಸಂಗೀತ ಸಾಮ್ರಾಜ್ಯದಲ್ಲಿ ಅನಭಿಷಿಕ್ತ ಚಕ್ರವರ್ತಿಯಂತೆ ಮೆರೆದವರು. ಮೈಸೂರು ಎಲ್ಲೆಡೆ 'ವೀಣೆಯ ನಾಡಿದು' ಎಂದು ಮೆರೆಯಲು ಕಾರಣರಾದವರು. ಬದುಕಿರುವಾಗಲೇ ಪುರಾಣಪ್ರಸಿದ್ಧಿಯನ್ನು ಪಡೆದುಕೊಂಡವರು. ಅಜರಾಮರವಾದ ಕೀರ್ತಿ ಎಂದರೆ ಅವರದ್ದೇ.

ಮೈಸೂರು ಅರಸೊತ್ತಿಗೆಗೆ ಅಲಂಕಾರವಾಗಿದ್ದ ವೈಣಿಕರು. ತಂದೆ ಚಿಕ್ಕರಾಮಪ್ಪ ರಾಜಾಸ್ಥಾನದಲ್ಲಿ ವೀಣಾಬಕ್ಷಿಯಾಗಿದ್ದವರು. ದೊಡ್ಡಶೇಷಣ್ಣನವರಲ್ಲಿ ವೀಣಾಶಿಕ್ಷಣ; ಮೈಸೂರು ಸದಾಶಿವರಾಯರಲ್ಲಿ ಗಾಯನಶಿಕ್ಷಣ. ಮಹಾರಾಜ ನಾಲ್ವಡಿ ಕೃಷ್ಣರಾಜರಿಗೆ ಗುರುಗಳಾದವರು. ಬಹುಕಡೆ ಪ್ರವಾಸ ಮಾಡಿ ತಮ್ಮ ವೀಣಾವಾದನದಿಂದ ಜಯಭೇರಿ ಹೊಡೆದವರು. 'ವೈಣಿಕಶಿಖಾಮಣಿ' ಯೆನಿಸಿಕೊಂಡವರು (1920).

ವೈಣಿಕರೆಂದು ಹೆಸರಾದರೂ ಪಿಟೀಲು, ಮೃದಂಗ, ಕೊಳಲು, ಜಲತರಂಗ, ಮಯೂರವಾದ್ಯ, ಸ್ವರಬತ್ತು, ಪಿಯಾನೋ, ಹಾರ್ಮೋನಿಯಂ, ಮೊದಲಾಗಿ ಹತ್ತುಹಲವು ವಾದ್ಯಗಳಲ್ಲಿ ವಿಶೇಷ ಪರಿಣತಿ. ಅವರ ವಿನಿಕೆಯಲ್ಲಿ ಎದ್ದು ಕಾಣುತ್ತಿದ್ದುದು ಅವರ ಅದ್ಭುತವಾದ ಮನೋಧರ್ಮ. ಭಾವಪ್ರಚೋದನೆ, ರಸನಿರೂಪಣೆಗಳಲ್ಲಿ ಅವರನ್ನು ಮೀರಿಸಿದವರಿಲ್ಲ. ಸಂಶೋಧನೆಯೂ ಅವರಿಗೆ ಒಲವಿನ ವಿಚಾರವೇ.

ವಾಗ್ಗೇಯಕಾರರೂ ಹೌದು. ಮನೋಹಾರಿಯಾದ ವರ್ಣ, ಸ್ವರಜತಿ, ಕೃತಿ, ತಿಲ್ಲಾನಗಳನ್ನು ರಚಿಸಿದ್ದಾರೆ. ಸುಮಾರು ಐವತ್ತರಷ್ಟು ಅವರ ರಚನೆಗಳು. ಜಂಝೂಟಿ, ಕಾನಡ, ದರ್ಬಾರುರಾಗಗಳಲ್ಲಿರುವ ಅವರ ತಿಲ್ಲಾನಗಳು ಜನಪ್ರಿಯವಾದವು.

ಅವರ ಶಿಷ್ಯರಲ್ಲಿ ಚಿತ್ರಕಾರ ಕೆ. ವೆಂಕಟಪ್ಪ, ವೆಂಕಟ ಗಿರಿಯಪ್ಪ, ಶರ್ಮಾದೇವಿ ಸುಬ್ರಹ್ಮಣ್ಯಶಾಸ್ತ್ರಿ, ಶ್ರೀರಂಗಂ ರಾಮಸ್ವಾಮಿ ಅಯ್ಯಂಗಾರ್, ತಿರುಮಲೆ ರಾಜಮ್ಮ ಮೊದಲಾದವರು ಪ್ರಸಿದ್ಧರು. ಅವರ ಶಿಷ್ಯವಾತ್ಸಲ್ಯವೂ ಪ್ರಸಿದ್ಧವಾದದ್ದೇ. ಸಂಗೀತ ವಿದ್ಯೆಯನ್ನು ಬಯಸಿದವರಿಗೆಲ್ಲ ಧಾರಳವಾಗಿ ದಾನಮಾಡುವ ಸಂಕಲ್ಪ ಅವರದ್ದು.

ಸರಳಸ್ವಭಾವ, ವ್ಯವಹಾರದಲ್ಲಿ ಮುಗ್ಧರು, ಸಹಜವಾದ ಸಜ್ಜನಿಕೆ, ಅಪೂರ್ವವಾದ ಪ್ರತಿಭೆ, ದೈವಿಕಪುರುಷರೆಂದೇ ಜನ ಅವರನ್ನು ಬಗೆದಿದ್ದರು. ❖



ವೈಣಿಕಶಿಖಾಮಣಿ ಶೇಷಣ್ಣ
(1852 - 1926)

ಸಂಗೀತಸರಸ್ವತಿಯೇ ಮೈದಾಳಿ ಬಂದಂತೆ ತೋರಿಕೊಂಡು, ತಮ್ಮ ವೀಣಾವಾದನ ವೈಖರಿಯಿಂದ ರಸಿಕರನ್ನೆಲ್ಲ ಅಚ್ಚರಿಗೊಳಿಸಿದವರು; ತಂಜಾವೂರು ಕಲಾಶೈಲಿಗೆ ಅವರೊಂದು ಶಿಖರಪ್ರಾಯವಾಗಿದ್ದವರು. ಅವರ ಪ್ರಸಿದ್ಧಿ ಅಜರಾಮರವಾದುದು.

ಅಜ್ಜಿ ಕಾಮಾಕ್ಷಿ ರಾಜನರ್ತಕಿ; ಶ್ಯಾಮಶಾಸ್ತ್ರಿಯವರ ಮಗ ಸುಬ್ಬರಾಯಶಾಸ್ತ್ರಿಗಳಿಂದ ಗಾಯನವನ್ನು ಕಲಿತವರು. ತಾಯಿ ಸುಂದರಮ್ಮ ಇವರಿಂದಲೂ ಸುಬ್ಬರಾಯಶಾಸ್ತ್ರಿಗಳ ಮಗ ಅಣ್ಣಾಸ್ವಾಮಿಶಾಸ್ತ್ರಿಗಳಿಂದಲೂ ಸಂಗೀತ ಶಿಕ್ಷಣವನ್ನು ಪಡೆದುಕೊಂಡವರು. ಈ ಸಂಗೀತ ಬಳುವಳಿ ಧನಮ್ಮಾಳಿಗೆ ಬಂದಿತು. ಸೋದರಮಾವ ಅಪ್ಪಾಕಣ್ಣು, ಅಕ್ಕ ರೂಪವತಿ ಇಬ್ಬರೂ ಪಿಟೀಲುವಾದಕರಾದರು. ಧನಮ್ಮಾಳ್ ಒಬ್ಬರೇ ವೀಣೆಯನ್ನು ಹಿಡಿದದ್ದು.

ವೀಣೆ ಕಲಿತದ್ದು ಅಳಗಸಿಂಗರಯ್ಯ, ಸಾತನೂರು ಪಂಚನದ ಅಯ್ಯರ್, ಮೈಲಾಪುರ ಬಾಲದಾಸ (ಪದಗಳನ್ನು ಹಾಡುತ್ತಿದ್ದ, ವೀಣೆ ನುಡಿಸುತ್ತಿದ್ದ ಅಂಧವಿದ್ವಾಂಸ) ಇವರ ಬಳಿ. ನಿರಂತರ ಸಾಧನೆಯಿಂದ ವೀಣೆಯನ್ನು ಒಲಿಸಿಕೊಂಡರು. ವೀಣೆ ಅವರಿಗಾಗಿಯೇ ಸಿದ್ಧವಾದದ್ದು ಅವರು ವೀಣೆಗಾಗಿಯೇ ಹುಟ್ಟಿದ್ದು ಎನ್ನುವಂತಾಯಿತು.

ಅವರ ವಾದನಸೌಂದರ್ಯಕ್ಕೆ ಬೆರಗಾಗದವರೇ ಇಲ್ಲ. ಶ್ಯಾಮಶಾಸ್ತ್ರಿಗಳ ಕೃತಿಗಳ ಭಾವಪ್ರಧಾನತೆ ಅವರ ವಾದನದಲ್ಲಿ ಎದ್ದು ಕಾಣುತ್ತಿದ್ದಿತು. ಪದಗಳನ್ನೂ ಜಾವಳಿಗಳನ್ನೂ ನಿರೂಪಿಸುವಲ್ಲಿ ಸಿದ್ಧಹಸ್ತರು. ಮೊದಲಲ್ಲಿ ಅಕ್ಕ ರೂಪವತಿಯೊಂದಿಗೆ ಹಾಡುತ್ತಿದ್ದರು. ಈ ಜೋಡಿಗಾಯನ ತುಂಬ ಜನಪ್ರಿಯವಾಯಿತು.

ಹಲವೆಡೆ ಸಂಗೀತಸಭೆಗಳಲ್ಲಿ ವಿನಿಕೆ ಮಾಡಿದರಾದರೂ ಮನೆಗಳಲ್ಲಿ ರಸಿಕರೆದುರು ನುಡಿಸುವುದು ಅವರಿಗೆ ಮೆಚ್ಚು. ಹಲವಾರು ವರ್ಷಗಳು ಧರ್ಮಪುರಿ ಸುಬ್ಬರಾಯರೊಂದಿಗೆ ಅವರು 'ಉಲ್ಲಾಸಮು ಸಲ್ಲಾಪಮು' ಕಾರ್ಯಕ್ರಮವನ್ನು ನಡೆಸಿದರು. ತಮ್ಮ ಮನೆಯಲ್ಲೇ ಪ್ರತಿ ಶುಕ್ರವಾರ ನೆರೆದವರಿಗೆ ವೀಣಾವಾದನದ ಸೌಖ್ಯವನ್ನು ನೀಡುತ್ತಿದ್ದರು.

ಅರವತ್ತು ವರ್ಷಗಳ ಕಾಲ ಸಂಗೀತಸಾಮ್ರಾಜ್ಞಿಯಾಗಿ ಮೆರೆದು ಸಂಗೀತರಸಿಕರಿಗೆಲ್ಲ ರಸಪಾನವನ್ನು ಧಾರಾಳವಾಗಿ ಮಾಡಿಸಿ, ತನ್ನ ಇಷ್ಟದೈವವಾದ ಕೃಷ್ಣನಲ್ಲಿ ಕಣ್ಮರೆಯಾದರು. ❖



ವೀಣಾ ಧನಮ್ಮಾಳ್

(1867-1938)

ನಾಲ್ಕಾರು ತಲೆಮಾರುಗಳಿಂದ ರಾಜಾಸ್ಥಾನಗಳಲ್ಲಿ (ಮೊದಲು ತಂಜಾವೂರು, ಅನಂತರ ಮೈಸೂರು) ವೈಣಿಕ ವಿದ್ವಾಂಸರ ಮನೆತನ, ತಂದೆ ದೊಡ್ಡಶೇಷಣ್ಣನವರಲ್ಲೇ ಶಿಕ್ಷಣ. ವೈಣಿಕ ಶಿಖಾಮಣಿ ಶೇಷಣ್ಣನವರ ಶಿಕ್ಷಣವೂ ಅವರಲ್ಲೇ. ಹೀಗಾಗಿ ಶೇಷಣ್ಣ, ಸುಬ್ಬಣ್ಣ ಇವರ ದ್ವಂದ್ವವೀಣಾವಾದನ ಜನಪ್ರಿಯವಾಯಿತು.

ಸುಬ್ಬಣ್ಣ ಗಾಯಕರೂ ಹೌದು. ಮೈಸೂರು ಸದಾಶಿವರಾಯರಲ್ಲಿ ಶಿಷ್ಯವೃತ್ತಿ ಮಾಡಿದವರು. ಸೂಕ್ಷ್ಮವಾದ ಮನೋಧರ್ಮ, ಅಪಾರವಾದ ಕಲ್ಪನಾಶಕ್ತಿ, ಗಮಕಸಂಪನ್ನವಾದ ಸಂಗೀತ, ಸುನಾದ, ಗಂಭೀರ. ಸಂಪ್ರದಾಯಶುದ್ಧವಾದ ನುಡಿಸಾಣಿಕೆ. ರಕ್ತಿರಾಗಗಳಲ್ಲಿ ಹೆಚ್ಚು ಪ್ರೀತಿ. ಸರಿದೊರೆಯಿರದಂತೆ ಮೆರೆದವರು.

ಆಗರ್ಭ ಶ್ರೀಮಂತರು, ರಸಿಕರು, ಮೈಸೂರು ಅರಮನೆಯಲ್ಲಿ ವೀಣಾಭಕ್ಷಿ. ಆಗ ಅರಸರಾಗಿದ್ದ ಚಾಮರಾಜ ಒಡೆಯರ ಒಡನಾಡಿಯಾಗಿದ್ದವರು. ಹೀಗಾಗಿ ಸಂಗೀತವನ್ನು ಜೀವಿಕೆಗೆ ಬಳಸಿಕೊಳ್ಳುವ ಅಗತ್ಯವಿರಲಿಲ್ಲ. ತಮ್ಮ ಸಂತೋಷಕ್ಕೆ ಸಂಗೀತ ಮೀಸಲು; ರಾಜಭೋಗ ಅವರದ್ದು.

ವಾಗ್ಗೇಯಕಾರರಾಗಿ ಮೂವತ್ತಕ್ಕೂ ಮಿಕ್ಕು ಕೃತಿರಚನೆ ಮಾಡಿದರು. ಶಿಷ್ಯರಲ್ಲಿ ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸ ಯ್ಯಂಗಾರರು, ಟಿ. ದೇವೇಂದ್ರಪ್ಪನವರು, ತಿಟ್ಟೆ ಕೃಷ್ಣಯ್ಯಂಗಾರ್ಯರು, ಆರ್. ಎಸ್. ಕೇಶವಮೂರ್ತಿಗಳು ಮೊದಲಾದವರು ನಾಡಿನಲ್ಲಿ ಪ್ರಸಿದ್ಧರಾದರು. ❖



ವೈಣಿಕಪ್ರವೀಣ ಸುಬ್ಬಣ್ಣ
(1854-1938)

ಇವರ ತಂದೆ ನಂದಳಿಕೆ ವಿಶ್ವನಾಥಯ್ಯ ಧರ್ಮಸ್ಥಳದ ದಶಾವತಾರ ಮಂಡಳಿಯಲ್ಲಿ ನಟರಾಗಿದ್ದವರು, ಮುಮ್ಮಡಿಯವರ ಕಾಲದಲ್ಲಿ ಮೈಸೂರಿಗೆ ಬಂದು ಬಿಡಾರ ಹೂಡಿದರು. ಕೃಷ್ಣಪ್ಪ ಹುಟ್ಟಿದ್ದು ಮೈಸೂರಿನಲ್ಲೇ. ಹಾಗೆ ಬಿಡಾರದವರಾದದ್ದು.

ಬಡ ಹುಡುಗ, ಊಂಛವೃತ್ತಿಯನ್ನು ಹಿಡಿದಿದ್ದು, ಭಿಕ್ಷೆ ಬೇಡುವಾಗ ದೇವರ ನಾಮಗಳನ್ನು ಹಾಡುತ್ತಿದ್ದ. ರಸಿಕರೊಬ್ಬರ ಆಶ್ರಯದಲ್ಲಿ ನಿಂತು ಕರೂರು ರಾಮಸ್ವಾಮಯ್ಯ, ಗಿರಿಭಟ್ಟರ ತಮ್ಮಯ್ಯ, ಕರಿಗಿರಿರಾಯರು ಇವರಲ್ಲಿ ಸಂಗೀತ ಶಿಕ್ಷಣ ಪಡೆದರು. ವೀಣೆ ಶೇಷಣ್ಣನವರ ಮಾರ್ಗದರ್ಶನವೂ ಇದ್ದಿತು. ಅರಮನೆಯ ವಿದ್ವಾಂಸರೂ ಆದರು.

ನಾಟಕ ಮಂಡಲಿಯಲ್ಲೂ ಇದ್ದರು. ಲಕ್ಷ್ಯ ಲಕ್ಷಣ ಎರಡರಲ್ಲೂ ನಿಸ್ಸೀಮರಾದರು. ದೇವರನಾಮಗಳನ್ನು ಭಕ್ತಿಯಿಂದ, ಭಾವಪೂರ್ಣವಾಗಿ ಹಾಡುವುದರಲ್ಲಿ ಪ್ರಸಿದ್ಧರಾದರು. ತ್ರಿಸ್ಥಾಯಿಗಳಲ್ಲೂ ಹಾಡುವ ಸಾಮರ್ಥ್ಯವಿದ್ದಿತು. 'ಶ್ರೀ ಕೃಷ್ಣ' ಎಂಬ ಮುದ್ರಿಕೆಯಿಂದ ಹಲವು ಕೃತಿಗಳನ್ನೂ ರಚಿಸಿದ್ದಾರೆ.

ಇವರ ಶಿಷ್ಯರಲ್ಲಿ ಟಿ. ಚೌಡಯ್ಯ, ಬೆಂಗಳೂರು ನಾಗರತ್ನಮ್ಮ, ಬಿ. ದೇವೇಂದ್ರಪ್ಪ, ರಾಳ್ಳಪಲ್ಲಿ ಅನಂತಕೃಷ್ಣಶರ್ಮಾ, ಆರ್. ಆರ್. ಕೇಶವಮೂರ್ತಿ, ಟಿ. ಪುಟ್ಟಸ್ವಾಮಯ್ಯ, ಎ. ಸುಬ್ಬರಾವ್ ಮೊದಲಾದ ಪ್ರಮುಖರು ಇದ್ದಾರೆ. ❖



ಬಿಡಾರದ ಕೃಷ್ಣಪ್ಪ
(1866 - 1931)

ತ್ಯಾಗರಾಜರ ಪರಂಪರೆಯಲ್ಲಿ ವಿಶಿಷ್ಟವಾಗಿ ಬೆಳಗಿದ ಒಂದು ದೀಪ. ತಂದೆ ರಾಮಯ್ಯರ್ ಸಂಗೀತ ರಸಿಕರು. ತಂಜಾವೂರು ಜಿಲ್ಲೆಯಲ್ಲಿ ಕಾವೇರಿತೀರದ ಮಹಾರಾಜಪುರಂಗೆ ನೆರೆಯಲ್ಲಿರುವ ತಿರುಕ್ಕೋಡಿಕಾವಲ್ ನಟರಾಜನ ಆಲಯದಲ್ಲಿ ನಾಗಸ್ವರವಿದ್ವಾಂಸರಾಗಿದ್ದ ತಿರುಮಾರ್ಗಳ್ ನಟೇಶನ್ ಅವರ ವಾದನದ ವೈಖರಿಗೆ ಮಾರುಹೋದವರು ವಿಶ್ವನಾಥಯ್ಯರ್. ಸಂಗೀತದ ಮೇಲೆ ಹೀಗೆ ಮೂಡಿದ ಒಲವು ಸಂಗೀತಕ್ಕೇ ಸೆಳೆದುಕೊಂಡಿತು.

ಉಮಯಾಳ್‌ಪುರಂ ಸ್ವಾಮಿನಾಥಯ್ಯರಲ್ಲಿ ಶಿಕ್ಷಣ; ವೇಂಗಯ್ಯರ ಮಾರ್ಗದರ್ಶನ; ಘಟವಿದ್ವಾಂಸರಾಗಿದ್ದ ರಂಗಪ್ಪಯ್ಯರ ವಾದನಕ್ಕೆ ಒಲಿದು ತಾಳವಾದ್ಯಗಳನ್ನೂ ಅಭ್ಯಾಸಮಾಡಿದರು. ಅವರ ಹಾಡಿಕೆಯಲ್ಲಿ ಶಾರೀರದ ಸೊಬಗು ಮಾತ್ರವಲ್ಲದೆ ಮನೋಧರ್ಮದ ಪ್ರತಿಭೆ ಎದ್ದುಕಾಣುತ್ತಿದ್ದು ತುಂಬ ಜನಪ್ರಿಯರಾದ ಗಾಯಕರಾದರು. ಲಯಜ್ಞಾನ, ರಸಭಾವನಿರೂಪಣೆ, ಗಾನದಲ್ಲಿ ತನ್ಮಯತೆ ಇವುಗಳಿಂದಾಗಿ ಜನ ಇವರನ್ನು 'ಸಂಗೀತಭೂಪತಿ'ಯೆಂದೇ ಆದರಿಸಿದರು. ಅವರು ಹಾಡುತ್ತಿದ್ದ ಮೋಹನ ರಾಗ ಇವರಿಗೆ ಒಲಿದಂತೆ ಬೇರೆ ಯಾರಿಗೂ ಒಲಿಯಲಿಲ್ಲ! ಯಾವ ರಾಗವೇ ಆಗಲಿ ಇವರ ಬಾಯಿಂದ ಬಂದರೆ ಮೋಹಕವೇ!

ಶುದ್ಧಶಾಸ್ತ್ರೀಯ ಸಂಗೀತವನ್ನೇ ಮೆಚ್ಚಿಕೊಂಡಿದ್ದವರು; ಹಿಂದೂಸ್ಥಾನೀ ಸಂಗೀತದ ಪರಿಚಯವೂ ಚೆನ್ನಾಗಿದ್ದಿತು. ತ್ಯಾಗರಾಜರ ಭಕ್ತರು; ಪ್ರತಿವರ್ಷ ಆರಾಧನೆಯ ವೇಳೆ ತಿರುವಯ್ಯಾರಿಗೆ ಹೋಗಿ ಬರುತ್ತಿದ್ದರು. ಭಕ್ತಿಯಿಂದಲೇ ತ್ಯಾಗರಾಜ ಕೃತಿಗಳನ್ನು ಹಾಡುತ್ತಿದ್ದರು. ಹಾಡುವಾಗ ಮೈಮರೆಯುತ್ತಿದ್ದರು. ಸಂಪ್ರದಾಯ ಸಂಗೀತದ ಸಾರ್ವಭೌಮರೆನಿಸಿದ್ದರೂ ಚಲಚ್ಚಿತ್ರ ರಂಗವನ್ನು ಪ್ರವೇಶಿಸಿದರು. ಮಾತಿನಲ್ಲಿ ಹಾಸ್ಯದ ಹೊನಲು.

'ಸಂಗೀತಕಲಾನಿಧಿ'; ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿದರು. ಶಿಷ್ಯರಲ್ಲಿ ಮಗ ಮಹಾರಾಜಪುರಂ ಸಂತಾನಂ ಮತ್ತು ಶೆಮ್ಮಂಗುಡಿ ಶ್ರೀನಿವಾಸಯ್ಯರು ಪ್ರಸಿದ್ಧರು. ಹಾಡಿಕೆಯಲ್ಲಿ ಹೆಸರಾದರೂ ಖಂಜರಿ ವಾದ್ಯವನ್ನು ಪ್ರೌಢಿಮೆಯಿಂದ ನುಡಿಸುತ್ತಿದ್ದರು. ❖



ಮಹಾರಾಜಪುರಂ ವಿಶ್ವನಾಥಯ್ಯರ್

(1896-1970)

ನಾಗಸ್ವರವಾದನಕ್ಕೆ ಒಲಿದ ಇಶೈವೆಳ್ಳಾಲರ್ ಪಂಗಡದಲ್ಲಿ ಹುಟ್ಟಿದವರಾದರೂ ಪಿಟೀಲನ್ನು ತಮ್ಮ ವೃತ್ತಿಗೂ ಅನುರಕ್ತಿಗೂ ಆರಿಸಿಕೊಂಡರು. ಆದರೆ ಹಾಡಿಕೆಯಲ್ಲಿ ಪರಿಣತಿಯನ್ನು ಪಡೆದುಕೊಂಡದ್ದು ನಾಗಸ್ವರ ವಿದ್ವಾಂಸರಾಗಿದ್ದ ಕಂದಸ್ವಾಮಿ ಪಿಳ್ಳೆಯವರಿಂದಲೇ. ಅನಂತರ ಪಲ್ಲವಿ ವಿದ್ವಾಂಸರಾಗಿದ್ದ ತಿರುವಿಶನಲ್ಲೂರು ನಾರಾಯಣಸ್ವಾಮಿ ಅಯ್ಯರಲ್ಲಿ ಪ್ರೌಢಶಿಕ್ಷಣ. ಪಂದನಲ್ಲೂರು ಚಿನ್ನಸ್ವಾಮಿ ಪಿಳ್ಳೆಯವರ ಮಾರ್ಗದರ್ಶನ. ಮೊದಲಿನಿಂದ ಅಕ್ಕ ರತ್ನಮ್ಮಾಳ್ ಅವರ ಆರೈಕೆಯಲ್ಲಿ ಸಂಗೀತದ ಮುನ್ನಡೆ.

ವಿಖ್ಯಾತರಾದ ತಿರುಕ್ಕೋಡಿಕ್ಕಾವಲ್ ಕೃಷ್ಣಯ್ಯರಲ್ಲಿ ಪಿಟೀಲು ಶಿಕ್ಷಣ. 1916ರಲ್ಲಿ ಮೊದಲ ಕಚೇರಿ, ಹುಟ್ಟೂರಾದ ಆಲಂಗುಡಿಯಲ್ಲಿ. ಮುತ್ತಯ್ಯ ಭಾಗವತರ ಉತ್ತೇಜನ; ನಾಮಕ್ಕಲ್ ನರಸಿಂಹಯ್ಯಂಗಾರ್ಯರಿಂದ ಪ್ರೌಢಶಿಕ್ಷಣ, ಕೋನೇರಿರಾಜಪುರಂ ವೈದ್ಯನಾಥಯ್ಯರ್ (1917), ಪೂಚಿ ಶ್ರೀನಿವಾಸಯ್ಯಂಗಾರ್ (1919) ಮೊದಲಾದ ಹಿರಿಯ ಗಾಯಕರಿಗೆಲ್ಲ ಪಕ್ಕವಾದಕರು. ತಿರುವಾಂಕೂರು ಸಂಸ್ಥಾನದ ಆಸ್ಥಾನ ವಿದ್ವಾಂಸರು (1940); ಅರಸರಿಂದ ಆನೆಯ ಉಡುಗೊರೆ (ಕುಂಭಕೋಣದ ಗುಡಿಗೆ ಕೊಟ್ಟುಬಿಟ್ಟರೆನ್ನಿ). 'ಸಂಗೀತಕಲಾನಿಧಿ' (1948). ಸಂಗೀತ ನಾಟಕ ಅಕ್ಯಾಡಮಿ ಪ್ರಶಸ್ತಿ (1959).

ಸಂಗೀತಗಾರನು ಎಡೆಬಿಡದೆ ತನ್ನ ವಿದ್ವತ್ತನ್ನು ಹೆಚ್ಚಿಸಿಕೊಳ್ಳುತ್ತಲೆ ಇರಬೇಕೆಂಬುದು ಅವರ ನಿಲುವು. ಸಂಗೀತಕ್ಕೆ ಸಾಧನೆ ಎಷ್ಟಿದ್ದರೆ ಅಷ್ಟು ಮೆರುಗು. ತಾಳ್ಮೆಯಿರಬೇಕು, ಸಹನೆ ಇರಬೇಕು, ಕಷ್ಟಸಹಿಷ್ಣುತೆ ಇರಬೇಕೆಂದು ಅವರು ಮತ್ತೆ ಮತ್ತೆ ಹೇಳುತ್ತಿದ್ದರು.

ಅವರದ್ದು ಅಪಾರವಾದ ವಿದ್ವತ್ತು; ವಾದನದಲ್ಲಿ ವಿಶಿಷ್ಟವಾದ ಪ್ರೌಢಿಮೆ, ನಯ, ಲಾಲಿತ್ಯ, ಗಾಂಭೀರ್ಯ. ಅವರ ವ್ಯಕ್ತಿತ್ವ, ನಡೆನುಡಿಗಳು ಎಂದೂ ಗಂಭೀರವಾದುವೇ. ಸೊಗಸಾದ ಮನೋಧರ್ಮ. ಅವರದ್ದು ವಿಪುಲವಾದ ಶಿಷ್ಯವರ್ಗ. ಮಾಯೂರಂ ಗೋವಿಂದರಾಜ ಪಿಳ್ಳೆ, ಸಾವಿತ್ರಿ ಸತ್ಯಮೂರ್ತಿ, ಸಿಕ್ಕಲ್ ಭಾಸ್ಕರನ್, ಟಿ.ಎಸ್. ಸಂಬಂಧಂ ಪಿಳ್ಳೆ, ತಿರುಗೋಕರ್ಣಂ ಲೋಕನಾಥ ಪಿಳ್ಳೆ, ದಂಡಪಾಣಿ ದೇಶಿಕರ್, ಕಂದಾಡೆ ರಾಜಲಕ್ಷ್ಮಿ, ಪಾಪಾ ಸ್ವಾಮಿನಾಥನ್ ಮೊದಲಾದ ಹಲವರು ಅವರಲ್ಲಿ ಪಿಟಿಲು ವಾದನವನ್ನೂ ಗಾಯನವನ್ನು ಕಲಿತರು.

ಸಂಪ್ರದಾಯಶರಣರೇ ಆದರೂ ತಮ್ಮದೇ ವಿಶಿಷ್ಟವಾದೊಂದು ಶೈಲಿಯನ್ನು ಬೆಳೆಸಿಕೊಂಡರು. ❖

ಕುಂಭಕೋಣಂ ರಾಜಮಾಣಿಕ್ಯಂ ಪಿಳ್ಳೆ
(1898 - 1970)

ಪ್ರಸ್ತುತ ಯುಗದಲ್ಲಿ ಶಾಸ್ತ್ರೀಯ ಸಂಗೀತದ ಖಚಿತ ಜ್ಞಾನವನ್ನು ಪಡೆದುಕೊಂಡಿದ್ದು, ವಿದ್ವದ್ವಲಯದಲ್ಲಿ ಅದನ್ನು ಪ್ರಸಾರ ಪಡಿಸಲು ದುಡಿದವರು.

ಕೋನೇರಿರಾಜಪುರಂ ವೈದ್ಯನಾಥಯ್ಯರ ಶಿಷ್ಯರು, ಶಿಮಿಯಂ ಸುಂದರಮಯ್ಯರಲ್ಲೂ ಅಮ್ಮಸತ್ರಂ ಕಂದಸ್ವಾಮಿ ಪಿಳ್ಳೆಯರಲ್ಲೂ ಶಿಕ್ಷಣವನ್ನು ಪಡೆದವರು. ರಾಗ, ತಾಳ, ಲಯ ಮೂರರಲ್ಲೂ ಅದ್ಭುತವಾದ ಪರಿಣತಿಯಿದ್ದವರು. ಪಲ್ಲವಿ ಗಾಯನದಲ್ಲಿ ತಾವೇ ಅಗ್ರಗಣ್ಯರು ಮಾತ್ರವಲ್ಲದೆ, ಅದರ ಸ್ವರೂಪವನ್ನೂ ಸ್ವಾರಸ್ಯವನ್ನೂ ಉತ್ಸುಕರಿಗೆ ತಿಳಿಸಿಕೊಡುವಲ್ಲಿ ಎಂದೂ ತೊಡಗಿದ್ದವರು. ಅವರು ಪ್ರದರ್ಶನ ಮಾಡಿದ ನೂರೆಂಟು ಅಕ್ಷರ ಕಾಲದ ಸಿಂಹನಂದನ ತಾಳದ ಪಲ್ಲವಿ ಅಭೂತಪೂರ್ವವಾಗಿದ್ದಿತು.

ಎಲ್ಲ ಸಂಗೀತ ಸಮ್ಮೇಳನಗಳಲ್ಲು ಅವರ ಮಾರ್ಗದರ್ಶನವಿರುತ್ತಿದ್ದಿತು. 'ಸಂಗೀತ ಕಲಾನಿಧಿ'ಯಾಗಿದ್ದರು. ಅವರಂತೆ ಲಕ್ಷ್ಯ-ಲಕ್ಷಣ ಎರಡರಲ್ಲೂ ಎತ್ತಿದ ಕೈಯಾಗಿದ್ದ ವಿದ್ವಾಂಸರು ತೀರ ವಿರಳ.

ಸಂಗೀತ ಶಾಸ್ತ್ರವನ್ನು ಕುರಿತಂತೆ ಪ್ರೌಢ ಪ್ರಬಂಧಗಳನ್ನೂ ರಚಿಸಿದ್ದಾರೆ. ಮದ್ರಾಸು ಮ್ಯೂಸಿಕ್ ಅಕ್ಯಾಡೆಮಿಯ ಸಂಗೀತ ಶಿಕ್ಷಕರ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದವರು. ❖



ಮುಡಿಕೊಂಡಾನ್ ವೆಂಕಟರಾಮಯ್ಯರ್

(1897 - 1975)

ತಂಜಾವೂರು ಜಿಲ್ಲೆಯ ಪೊಲಹಂ ರಾಮಯ್ಯ, ಪಾಪನಾಶಕ್ಷೇತ್ರದ ವರ್ಷಾವಧಿ ಉತ್ಸವಕ್ಕೆ ತುಂಡುಬಟ್ಟೆ ಉಟ್ಟು ತಪ್ಪದೆ ಹಾಜರಾಗುತ್ತಿದ್ದರಾಗಿ ಪಾಪನಾಶಂ ಶಿವನ್ ಆದರು. ಅನಾಥಶಿಶು, ಊರೂರು ಅಂಡಲೆಯುತ್ತಿದ್ದರೂ ಭಕ್ತಿ ಬೇರೂರಿತು. ಸಾಹಿತ್ಯದಲ್ಲಿ ಒಲವು ಮೂಡಿತು. ತಿರುವನಂತಪುರದಲ್ಲಿ ಹತ್ತು ವರ್ಷ ಸಂಸ್ಕೃತ ಸಾಹಿತ್ಯ, ವ್ಯಾಕರಣಗಳ ಅಧ್ಯಯನ.

ಅಲ್ಲೇ ಭಜನೆ, ಕೀರ್ತನೆ, ಕಾಲಕ್ಷೇಪಗಳಲ್ಲಿ ತೊಡಗಿ ಸಂಗೀತವನ್ನೂ ಭಾವುಕತೆಯನ್ನೂ ಮೈಗೂಡಿಸಿಕೊಂಡರು. ನೀಲಕಂಠ ಶಿವನ್ ಭಜನಗೋಷ್ಠಿಯಲ್ಲಿ ಸೇರಿದರು. ರಾಮಲಿಂಗಸ್ವಾಮಿಗಳ ಅರಳ್‌ಪಗಳನ್ನು ಹಾಡುವುದರಲ್ಲಿ ಎತ್ತಿದ ಕೈಯಾದರು. ಓದುವರ್ ಗೋಷ್ಠಿಗಳಲ್ಲೂ ಕೂಡಿಕೊಂಡರು. ಹಾಡುವಾಗ ಭಾವಪಾರವಶ್ಯ, ಉಳಿದಂತೆ ಮೌನ.

ಗುರು ನೀಲಕಂಠಶಿವನ್ ಅವರ ಕೃತಿಗಳ ಪ್ರಚಾರಕ್ಕೆ ಟೊಂಕಕಟ್ಟಿ ನಿಂತರು. ಅರುಣಗಿರಿನಾಥರ್, ರಾಮಲಿಂಗಸ್ವಾಮಿ, ಗೋಪಾಲಕೃಷ್ಣಭಾರತಿ, ವೇದನಾಯಕಂ ಪಿಳ್ಳೆ ಇವರ ಸಾಲಿನಲ್ಲೇ ತಮಿಳು ವಾಗ್ಗೇಯಕಾರರಾದರು. ಮುಂದೆ ಮದುವೆಯಾಗಿ ಚೆನ್ನೈನಲ್ಲಿ ನೆಲೆಸಿದರು. ಚಲನಚಿತ್ರಗಳಿಗೆ, ನೃತ್ಯನಾಟಕಗಳಿಗೆ, ಸಂಗೀತವನ್ನು ಕಲ್ಪಿಸಿಕೊಟ್ಟರು. ಕೆಲವು ಚಿತ್ರಗಳಲ್ಲಿ ಪಾಲ್ಗೊಂಡದ್ದೂ ಉಂಟು.

2000ಕ್ಕೂ ಮಿಕ್ಕ ಗೇಯ ಪ್ರಬಂಧಗಳನ್ನು ಸಂಸ್ಕೃತ, ತಮಿಳು ಭಾಷೆಗಳಲ್ಲಿ ರಚಿಸಿದ್ದಾರೆ. ರಾಮಾಯಣವನ್ನು 24 ರಾಗಗಳಲ್ಲಿ ಗೇಯರೂಪಕ್ಕೆ ಇಳಿಸಿದ್ದಾರೆ. ಅವರ ಕೃತಿಗಳ ಜನಪ್ರೀತಿ ಸೋಜಿಗವನ್ನುಂಟುಮಾಡುತ್ತದೆ. ಸಂಗೀತ-ಸಾಹಿತ್ಯ ಎರಡರಲ್ಲೂ ಸಿದ್ಧಹಸ್ತರು.

ದೈವಭಕ್ತರು, ವಿರಕ್ತರು, ಭಾವುಕರು, ಉತ್ತಮ ಗಾಯಕರು, ಪ್ರತಿಭಾಶಾಲಿಗಳು, ತ್ಯಾಗರಾಜಸ್ವಾಮಿಗಳ ಭಕ್ತರು. ಉತ್ತಮ ಗಾಯಕರು, ಶ್ರೇಷ್ಠ ವಾಗ್ಗೇಯಕಾರರು. ಸಂಪ್ರದಾಯಶೀಲರು; ಸರಳರು; ಸದ್ಗುಣ ಸಂಪನ್ನರು. ಜನಾನುರಾಗವನ್ನು ಅಪಾರವಾಗಿ ಪಡೆದುಕೊಂಡು ಕೃತಾರ್ಥರಾದವರು. ❖



ಪಾಪನಾಶಂ ಶಿವನ್

(1890-1973)

ಕರ್ನಾಟಕ ಸಂಗೀತದಲ್ಲಿ ಅಜರಾಮರವಾದ ಹೆಸರು; ಸಾಕ್ಷಾತ್ ನಂದಿಕೇಶ್ವರನ ಅವತಾರವೆಂದೇ ರಸಿಕರ ಎಣಿಕೆ. ಖಂಜರಿ ಮತ್ತು ಮೃದಂಗ ವಾದ್ಯಗಳಿಗೆ ಗೌರವಾದರಗಳನ್ನು ಗಳಿಸಿಕೊಟ್ಟವರು.

ಇನ್ನೊಬ್ಬ ಪ್ರತಿಭಾಶಾಲಿ ಮಾನ್ಪುಂಡಿಯಾ ಪಿಳ್ಳೆಯವರಲ್ಲಿ ಶಿಕ್ಷಣ; ತಂಜಾವೂರು ಕೃಷ್ಣಭಾಗವತರಿಂದ ಮಾರ್ಗದರ್ಶನ; ತಂಜಾವೂರು ಪಕ್ಕಿರಿ ಮತ್ತು ನಾರಾಯಣಸ್ವಾಮಿ ಅಪ್ಪಾ ಅವರಿಂದ ಪ್ರಭಾವಿತರಾದವರು. ಅವರ ಶಿಷ್ಯರಲ್ಲಿ ಪ್ರಮುಖರು ಸುಪ್ರಸಿದ್ಧ ಪಾಲಕ್ಕಾಡು ಮಣಿಅಯ್ಯರ್, ದೇವಕೋಟೆ ಸುಂದರರಾಜ ಅಯ್ಯಂಗಾರ್, ತಂಜಾವೂರು ರಾಮದಾಸರು.

ಅವರ ನುಡಿಸಾಣಿಕೆಯಲ್ಲಿ ಮಾರ್ದವ, ಲಯಜ್ಞಾನ, ಹಿತ, ರಸಾವೇಶ ಎದ್ದು ಕಾಣುತ್ತಿದ್ದುವು. ತನಿ ನುಡಿಸುವಾಗಲಂತೂ ಅವರ ಮೇರು ಸದೃಶ ಮನೋಧರ್ಮ ಮೆರೆಯುತ್ತಿದ್ದಿತು. ಲೆಕ್ಕಾಚಾರ (ಕಣಕ್ಕು) ಅವರಿಗೆ ಮುಖ್ಯವಾಗಿರಲಿಲ್ಲ; ಶ್ರೋತೃಗಳ ಸುಖಸಂಪಾದನೆಯತ್ತಲೇ ಅವರ ಗಮನವೆಲ್ಲ. ಎಣಿಕೆ ಸ್ವಭಾವಸಿದ್ಧವಾಗಿಯೇ ಇರುತ್ತಿದ್ದಿತು.

ಬದುಕಿನಂತೆಯೇ ಅವರ ಸಂಗೀತವೂ ನಿರಾಡಂಬರ, ಉಜ್ವಲ. ಬದುಕಿನಲ್ಲಿಯೂ ಅಂತರ್ಮುಖ ಪ್ರವೃತ್ತಿ, ಆಧ್ಯಾತ್ಮಿಕತೆಯ ಒಲವು. ಮುರುಗನ ಪರಮಭಕ್ತರು. ಸಂಗೀತ ಅವರ ಪಾಲಿಗೆ ಜೀವಿಕೆಯಲ್ಲ, ಸಾಧನೆ. ಕಡೆಗಾಲದಲ್ಲಿ ತೀವ್ರ ವೈರಾಗ್ಯವನ್ನೂ ತಳೆದು ಸಂನ್ಯಾಸಿಯಾಗಿಬಿಟ್ಟರು (ಚಿನ್ಮಯಾನಂದ ಗುರು).

ಕರ್ನಾಟಕ ಸಂಗೀತದ ಆಳ-ಅಗಲಗಳನ್ನೆಲ್ಲ ಮನದಟ್ಟು ಮಾಡಿಕೊಂಡು, ತಮ್ಮ ಪ್ರತಿಭೆಯಿಂದ ಅದನ್ನು ಶ್ರೀಮಂತಗೊಳಿಸಿ ಲಕ್ಷಾಂತರ ರಸಿಕರಿಗೆ ಅದರ ಸಾರಸರ್ವಸ್ವವನ್ನೂ ಉಣಬಡಿಸಿದರು. ಅವರ ವಿನಿಕೆಯ ಎತ್ತರ ಹೆಚ್ಚೋ ಬದುಕಿನ ಎತ್ತರ ಹೆಚ್ಚೋ ಹೇಳಲಾಗದು. ❖



ಪುದುಕ್ಕೊಟ್ಟೆ ದಕ್ಷಿಣಾಮೂರ್ತಿ ಪಿಳ್ಳೆ
(1875-1937)

ನಾಗಸ್ವರ ಪ್ರಪಂಚದಲ್ಲಿ ಎರಡು ಧ್ರುವತಾರೆಗಳು - ಚಿನ್ನಪಕ್ಕಿರಿಪಿಳ್ಳೆ ಮತ್ತು ಪಕ್ಕಿರಿಪಿಳ್ಳೆ. ಇಬ್ಬರೂ ಮನ್ನಾರುಗುಡಿಯವರು; ಇಬ್ಬರದ್ದೂ ಅಸಾಧಾರಣ ಪ್ರತಿಭೆ, ಅನುಪಮ ಕಲೆಗಾರಿಕೆ. ಇಬ್ಬರೂ 'ಲಯಗಣಿ'ಗಳೇ (ಲಯಚ್ಚುರಂಗಂ).

ಚಿನ್ನಪಕ್ಕಿರಿಯ ಗುರು ನೀಡಮಂಗಲಂ ಶಿಂಗಾರಂ. ಅವರಲ್ಲಿ ಸತತವಾದ ಸಾಧನೆಯಿಂದ ಸಿದ್ಧಹಸ್ತರಾದರು. ಅವರ ನುಡಿಸಾಣಿಕೆಯಲ್ಲಿ ಸೌಖ್ಯ, ಸೊಬಗು ಎರಡೂ ಇರುತ್ತಿದ್ದುವು. ಹಲವಾರು ಇಂದಿನ ಪ್ರಸಿದ್ಧ ರಾಗಗಳಿಗೆ ಜನಪ್ರೀತಿಗಳಿಸಿಕೊಟ್ಟವರು ಇವರೇ. ರಕ್ತಿರಾಗಗಳು, ದ್ರುತನಡೆ ಇವರ ವೈಶಿಷ್ಟ್ಯ.

ಪಕ್ಕಿರಿಪಿಳ್ಳೆ ಚೊಕ್ಕಲಿಂಗಂನಟ್ಟುವನಾರರ ಮಗ. ಆದರೆ ನಟ್ಟುವನಾರನಾಗಲು ಇಷ್ಟಪಡದೆ ಸ್ವರ್ಣಂಪಿಳ್ಳೆ ಎಂಬುವರಲ್ಲಿತವಿಲ್ ಶಿಕ್ಷಣವನ್ನು ಪಡೆದುಕೊಂಡರು. ಪಳನಿ ಘಟಂ ಕೃಷ್ಣಯ್ಯರ ಬಳಿ ಹಾಡಿಕೆಯನ್ನೂ ಕಲಿತರು. ನೂರಾರು ತಿರುಪ್ಪುಗಳಿಗೆ ತಾವೇ ಛಂದತಾಳವನ್ನು ಸಂಯೋಜಿಸಿ ಪ್ರಚಾರಕ್ಕೆ ತಂದರು. ತಮ್ಮ ಇಷ್ಟದೈವವಾದ ಅರುಣಗಿರಿನಾಥರಿಗೆ ಮಠವೊಂದನ್ನು ಏರ್ಪಡಿಸಿ, ಅವರ ತಿರುಪ್ಪುಗಳಿಗೆ ಹೊಸ ಚೇತನವನ್ನು ತಂದುಕೊಟ್ಟರು.

ಅವರ ಶಿಷ್ಯರಲ್ಲಿ ಪ್ರಮುಖರಾದವರು ಅವರ ಮಗ ವೈದ್ಯಲಿಂಗಂ ಪಿಳ್ಳೆ. ಇವರು ಗಾಯಕರು, ನಾಗಸ್ವರ ವಾದನದಲ್ಲೂ ನಿಸ್ಸೀಮರು.

ಕೊನಕ್ಕೋಲು ಕಲೆಯನ್ನು ಬೆಳಕಿಗೆ ತಂದು ಉಳಿಸಿ ಬೆಳೆಸಿದವರು ಪಕ್ಕಿರಿಪಿಳ್ಳೆಯೇ. ತವಿಲ್ ವಾದನಕ್ಕೆ ಹೆಗ್ಗಳಿಕೆಯನ್ನು ತಂದುಕೊಟ್ಟವರೂ ಇವರೇ.

ಮನ್ನಾರುಗುಡಿಯ ಶಿವಾಲಯದಲ್ಲಿ ನಡೆಯುವ ಉತ್ಸವ ಸಂದರ್ಭದಲ್ಲಿ ಮುಂಜಾನೆ ನಾಲ್ಕು ಗಂಟೆ, ಸಂಜೆ ನಾಲ್ಕು ಗಂಟೆ ಎಡೆಬಿಡದೆ ನಾಗಸ್ವರವಾದನ ಚಿನ್ನಪಕ್ಕಿರಿಯದು; ತವಿಲ್ ವಾದನ ಪಕ್ಕಿರಿಪಿಳ್ಳೆಯದು. ಜನ ಕಿಕ್ಕಿರಿದು ನೆರೆದಿರುತ್ತಿದ್ದರು. ❖



ಮನ್ನಾರುಗುಡಿ ಪಕ್ಕೀರಿ ಪಿಳ್ಳೆ
(1867-1937)

ಗೊಟ್ಟುವಾದ್ಯವಾದಕರಲ್ಲಿ ಪ್ರಸಿದ್ಧರು. ಹುಟ್ಟಿದ್ದು 1896ರಲ್ಲಿ; ತಂಜಾವೂರು ಜಿಲ್ಲೆಯಲ್ಲಿರುವ ಬೂದಲೂರಿನ ಸೇತುರಾಮಶಾಸ್ತ್ರಿಯವರ ಮಗ. ತಂದೆಯಲ್ಲಿಯೇ ವೇದಾಧ್ಯಯನ, ಕಾವ್ಯಶಿಕ್ಷಣ; ತಂದೆಯಿಂದಲೇ ಸಂಗೀತದತ್ತ ಒಲವು ಕೂಡ.

ಮುಂದೆ ಮಹಾವಿದ್ವಾಂಸ ಕೋನೇರಿರಾಜಪುರಂ ವೈದ್ಯನಾಥಯ್ಯರಲ್ಲಿ ಹಾಡಿಕೆಯ ಕಲಿಕೆ, ಹರಿಕೇಶನಲ್ಲೂರು ಮುತ್ತಯ್ಯ ಭಾಗವತರಲ್ಲೂ ಶಿಕ್ಷಣ. ಅವರ ಸೂಚನೆಯಂತೆ ಗೊಟ್ಟುವಾದ್ಯವನ್ನು ಹಿಡಿದರು. ಕಾರೈಕುಡಿ ಸುಬ್ಬರಾಮಯ್ಯರ್, ಸಾಂಬಶಿವಯ್ಯರ್ ಸೋದರರ ವೀಣಾವಾದನದಿಂದ ಸ್ಫೂರ್ತಿ ಪಡೆದುಕೊಂಡರು. ತಿರುಕ್ಕೋಡಿಕಾವಲ್ ಕೃಷ್ಣಯ್ಯರ ಮಾರ್ಗದರ್ಶನ, ತಿರುಚ್ಚಿ ಗೋವಿಂದಸ್ವಾಮಿ ಪಿಳ್ಳೆ ಮತ್ತು ಅಳಗನಂಬಿ ಇವರ ನೆರವು ಇವರ ಸಂಗೀತಸಂಸ್ಕಾರವನ್ನು ಮುಗಿಲು ಮುಟ್ಟಿಸಿದುವು.

ಹಿತಮಿತವಾದ ವಾದನ; ರಾಗಭಾವ, ಸಾಹಿತ್ಯಶುದ್ಧಿ ಎರಡರ ಕಡೆ ಸಮನಾದ ಗಮನ. ವಾದನದಲ್ಲಿ ರಂಜಕತ್ವ, ಸಂಪ್ರದಾಯಶುದ್ಧಿ ಎರಡನ್ನೂ ಕಾಪಾಡಿಕೊಂಡರು. ಹಿತ-ಮಿತ ಎರಡರ ಮೇಳನ.

ಚೆನ್ನೈನ ಕೇಂದ್ರೀಯ ಕರ್ನಾಟಕ ಸಂಗೀತ ಕಾಲೇಜಿನಲ್ಲಿ ಗೊಟ್ಟುವಾದ್ಯ ಪ್ರಾಧ್ಯಾಪಕರು; ಮುಂದೆ ರುಕ್ಮಿಣಿದೇವಿ ಆರುಂಡೇಲರ ಕರೆಯನ್ನು ಮನ್ನಿಸಿ ಅಡಯಾರಿನ ಕಲಾಕ್ಷೇತ್ರದಲ್ಲಿ ನೆಲೆಸಿ ಅನೇಕರಿಗೆ ವಿದ್ಯಾದಾನ ಮಾಡಿದರು. 'ಸಂಗೀತಕಲಾನಿಧಿ'ಯೆಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡರು (1964).

ತ್ಯಾಗರಾಜಸ್ವಾಮಿಗಳ ಭಕ್ತರು. ಸುಮಧುರವಾದ ವ್ಯಕ್ತಿತ್ವ, ಸರಳವಾದ ನಡೆ-ನುಡಿ. ಇವರ ಹಲವು ಶಿಷ್ಯರಲ್ಲಿ ಈಗ ಬೆಂಗಳೂರಿನಲ್ಲಿರುವ ಗಾಯತ್ರೀ ಕ್ಯಾಸಬಾಮ್ ಪ್ರಮುಖರು. ❖



ಬೂದಲೂರು ಕೃಷ್ಣಮೂರ್ತಿಶಾಸ್ತ್ರಿ
(ಜನನ 1896)

ತಿನ್ನವೆಲ್ಲಿ ಜಿಲ್ಲೆಯ ಹರಿಕೇಶನಲ್ಲೂರಿನವರು; ತಂದೆ ಲಿಂಗಮಯ್ಯರು ವೇದವಿದ್ವಾಂಸರು, ಶ್ರೋತ್ರಿಯರು. ಮುತ್ತಯ್ಯನೂ ಮಹಾಮಹೋಪಾಧ್ಯಯ ಲಕ್ಷ್ಮಣಸೂರಿಯ ಬಳಿ ವೇದಾಧ್ಯಯನ ಮಾಡಿದರು, ತಿರುವಯ್ಯಾರಿನಲ್ಲಿ. ಆದರೆ ಸಾಂಬಶಿವಯ್ಯರು (ಸುಪ್ರಸಿದ್ಧ ಸಭೇಶಯ್ಯರ ತಂದೆ) ಇವರನ್ನು ಸಂಗೀತಕ್ಕೆ ಒಲಿಸಿದರು. ಗೊಟ್ಟುವಾದ್ಯ ನಾರಾಯಣಯ್ಯಂಗಾರರು ಮಾರ್ಗದರ್ಶಿಯಾದರು.

ಚೆನ್ನೈನಲ್ಲೇ ನೆಲೆಸಿ ಸಂಗೀತವಿನಿಕೆಗಳಿಂದ ಹೆಸರು ಗಳಿಸಿದರು. ಹರಿಕಥಾ ಕಾಲಕ್ಷೇಪವನ್ನು ಮಹಾರಾಷ್ಟ್ರ ಕೀರ್ತನಕಾರ ಕೃಷ್ಣಭಟ್ಟರಿಂದ ಕಲಿತು ಮಧುರೆಯಲ್ಲಿ ಗುರುಕುಲವೊಂದನ್ನು ಏರ್ಪಡಿಸಿಕೊಂಡರು. ಮುಂದೆ ಕರೂರಿನಲ್ಲಿ ನೆಲೆಸಿದ್ದರು. ಮೈಸೂರು ಅರಸರು ಅವರನ್ನು ಗಾಯಕ ಶಿಖಾಮಣಿಯೆಂದು ಗೌರವಿಸಿ (1928) ಆಸ್ಥಾನ ವಿದ್ವಾಂಸರಾಗಿ ಇರಿಸಿಕೊಂಡರು. 'ಸಂಗೀತಕಲಾನಿಧಿ' ಎನಿಸಿಕೊಂಡರು (1930). ಮುಂದೆ ತಿರುವಾಂಕೂರು ಅರಸರ ಆಶ್ರಯದಲ್ಲಿ ಸ್ವಾತಿ ತಿರುನಾಳರ ಮುನ್ನೂರು ಕೃತಿಗಳಿಗೆ ಸ್ವರಸಂಯೋಜನೆ ಮಾಡಿದರು (1936-38). ಮೈಸೂರಲ್ಲೇ ನೆಲೆಸಿ ಅಲ್ಲಿಯೇ ತೀರಿಕೊಂಡರು.

ಲಕ್ಷ್ಯಲಕ್ಷಣ ವಿದ್ವಾಂಸರು, ವಾಗ್ಗೇಯಕಾರರೂ ಹೌದು. ಮೈಸೂರಿನಲ್ಲಿ ದೇವೋತ್ತಮ ಜೋಯಿಸರ ನೆರವಿನಿಂದ ಕನ್ನಡದಲ್ಲಿ ಚಾಮುಂಡಾಂಬಾ ಅಷ್ಟೋತ್ತರ ಕೃತಿಗಳನ್ನು (108 ರಾಗಗಳಲ್ಲಿ) ರಚಿಸಿದರು. ಅವರ ಸಂಗೀತ ರಚನೆಗಳು ಸುಮಾರು 300 ಇವೆ. 'ಸಂಗೀತಕಲ್ಪದ್ರುಮಂ' ಎಂಬ ಗ್ರಂಥವೂ ಅವರದ್ದು.

ಗಾಯನವಲ್ಲದೆ ಗೊಟ್ಟುವಾದ್ಯದಲ್ಲೂ ಮೃದಂಗದಲ್ಲೂ ಪರಿಶ್ರಮವಿದ್ದಿತು. ಅವರ ಶಿಷ್ಯರಲ್ಲಿ ಮಧುರೆ ಮಣಿ ಅಯ್ಯರ್, ಬೂದಲೂರು ಕೃಷ್ಣಮೂರ್ತಿಶಾಸ್ತ್ರಿ (ಗೊಟ್ಟುವಾದ್ಯ), ಬೆಳಕವಾಡಿ ವರದರಾಜಯ್ಯಂಗಾರರು ಪ್ರಮುಖರು.

ತಿರುವಾಂಕೂರು ವಿಶ್ವವಿದ್ಯಾಲಯವು ಇವರಿಗೆ ಡಿ.ಲಿಟ್. ಪ್ರಶಸ್ತಿ ನೀಡಿ ಸನ್ಮಾನಿಸಿತು. ❖



ಮುತ್ತಯ್ಯ ಭಾಗವತರು
(1877-1945)

ಅವರ ತಾಯಿ ಪ್ರೀತಿಯಿಂದ ಅವರನ್ನು 'ನಾಯನಾ' (ಎಂದರೆ 'ಅಪ್ಪಾ') ಎಂದು ಕರೆಯುತ್ತಿದ್ದುದರಿಂದ ಈ ಹೆಸರೇ ವಾಡಿಕೆಯಲ್ಲಿ ನಿಂತಿತು. ಅವರ ದಿಟವಾದ ಹೆಸರು ಸುಬ್ರಹ್ಮಣ್ಯ ಪಿಳ್ಳೆ.

ಮನೆತನದಲ್ಲೇ ಸಂಗೀತ; ಅವರೂ ತಮ್ಮ ಕಾಲದಲ್ಲಿ ಸುವಿಖ್ಯಾತ ಗಾಯಕರಾದರು. ತಾಳಜ್ಞಾನದಲ್ಲಂತೂ ಅವರ ಪ್ರತಿಭೆ ಅಸಾಮಾನ್ಯವಾಗಿದ್ದಿತು. ನೂರೆಂಟು ತಾಳಗಳಲ್ಲೂ ಪಲ್ಲವಿಗಳನ್ನು ಹಾಡುತ್ತಿದ್ದರು. ತಿರುಪ್ಪುಗಳ ವಿನಿಕೆಯನ್ನು ಮೊದಲು ಮಾಡಿದವರು. ತ್ಯಾಗರಾಜರ ಅನೇಕ ಕೃತಿಗಳನ್ನು ಬಳಕೆಗೆ ತಂದವರೇ ಇವರು. ರುದ್ರಪ್ರಿಯರಾಗದ 'ಅಂಬ ಪರದೇವತೆ' (ಕೃಷ್ಣಸಾಮಿ ಅಯ್ಯರ್ ರಚನೆ) ಇವರಿಗೆ ತುಂಬ ಮೆಚ್ಚಿನದು; ಅದನ್ನು ತಮ್ಮ ಎಲ್ಲ ಕಛೇರಿಗಳಲ್ಲೂ ಹೃದ್ಯವಾಗಿ ಹಾಡುತ್ತಿದ್ದು, ತಾವೂ ಮೈಮರೆತು ಜನರನ್ನೂ ಮೈಮರೆಸುತ್ತಿದ್ದರು. ಇನ್ನೊಂದು ಅವರಿಗೆ ಪ್ರಿಯವಾದ ಕೃತಿ ಸಿಂಹನಂದನ ತಾಳದ 'ಗೌರೀನಾಯಕ' ಎಂಬ ತಿಲ್ಲಾನ.

ಸಂಗೀತದ ದಿಟವಾದ ಪ್ರಯೋಜನ ಅವರ ಹಾಡಿಕೆಯಿಂದ ದೊರೆಯುತ್ತಿದ್ದಿತು. ಅವರ ಕಚೇರಿ 'ಫುಲ್ ಬೆಂಚ್' ಎಂದೇ ಹೆಸರಾಗಿದ್ದಿತು. ಪಿಟೀಲು, ಮೃದಂಗ, ಘಟ, ಡೋಲಕ್, ಕೊನಗೋಲು, ಖಂಜೀರ, ಮೋರ್ಸಿಂಗ್ ಮುಂತಾದ ಹಲವು ಪಕ್ಕವಾದ್ಯಗಳು. ಈ ಕೋಲಾಹಲದಲ್ಲೂ ಅವರ ಹಾಡಿಕೆಯ ಸೊಗಸು ಎದ್ದು ನಿಲ್ಲುತ್ತಿತ್ತು.

ಅವರ ಶಿಷ್ಯರಲ್ಲಿ ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ ಪ್ರಮುಖರು. ಡಿ.ಕೆ. ಪಟ್ಟಮ್ಮಾಳ್ ಮೊದಲಾಗಿ ಅನೇಕ ಹಿರಿಯ ವಿದ್ವಾಂಸರು ಅವರಿಂದ ಉಪಕೃತರಾಗಿದ್ದಾರೆ. ❖



ಕಾಂಚೀಪುರಂ ನಾಯನಾಪಿಳ್ಳೈ
(1887 - 1934)

ಕೇರಳದ ಕರ್ಣಾಟಕ ಸಂಗೀತ ವಿದ್ವಾಂಸರಲ್ಲಿ ಹಿರಿಯ ತಲೆಮಾರಿನ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು ಮಂಜರಪ್ಪರದ ರಾಮಭಾಗವತರು. ಮನೆತನದಲ್ಲೇ ಇದ್ದ ಸಂಗೀತವನ್ನು ಇವರು ರೂಢಿಸಿಕೊಂಡು ತಮಿಳುನಾಡಿನಲ್ಲೆಲ್ಲ ಪ್ರಸಿದ್ಧರಾದರು. ಉಮಯಾಳ್‌ಪುರಂ ಸ್ವಾಮಿನಾಥಯ್ಯರಲ್ಲಿ ತ್ಯಾಗರಾಜರ ಕೃತಿಗಳನ್ನು ಕಲಿತು, ತ್ಯಾಗರಾಜ ಪರಂಪರೆಗೇ ಸೇರಿಕೊಂಡರು.

ಭಾವುಕರಾದ ಗಾಯಕರು. ರಾಗಭಾವ ಮಾತ್ರವಲ್ಲದೆ ಕೃತಿಭಾವವನ್ನೂ ಹೊರಸೂಸುವ ವಿನಿಕೆ ಅವರದ್ದು. ಗೋಪಾಲಕೃಷ್ಣ ಭಾರತಿಯವರ ತಮಿಳು ಭಾಷೆಯ ಮಾಂಜಿ ರಾಗದ ''ವರುಹಲಾಮೋ ಅಯ್ಯ'' ಎಂಬ ಹಾಡನ್ನು ಅವರು ಹಾಡುವಾಗ ಇಡೀ ಸಭೆಯೇ ಭಾವಪರವಶವಾಗುತ್ತಿದ್ದಿತು. ಯಾವುದೇ ಕೃತಿಯಾಗಲಿ ಅದರ ಸಾಹಿತ್ಯಭಾಗದ ಸ್ವಾರಸ್ಯವನ್ನು ಸೊಗಸಾಗಿ ನಿರೂಪಿಸುವ ಜಾಣ್ಮೆ ಅವರದ್ದು.

ಅವರ ಶಿಷ್ಯರಲ್ಲಿ ಅವರ ಮಗನೇ ಆದ ಶೇಷಮಣಿ, ಮತ್ತು ಮೈಸೂರು ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದ ಜಿ. ಎಂ. ನಟರಾಜನ್ ಇವರು ಪ್ರಮುಖರು. ಸಂಪ್ರದಾಯಶುದ್ಧವಾದ ರಾಮಭಾಗವತರ ಶೈಲಿಯನ್ನು ಉಳಿಸಿಕೊಂಡು ಬಂದವರು.

ಸುಸಂಸ್ಕೃತರಾದ ಭಾಗವತರು ದೈವಭಕ್ತರು. ಎಡೆಬಿಡದೆ ರಾಮನಾಮ ಜಪ ನಡೆಸುತ್ತಿದ್ದವರು. ಕಚೇರಿಗೆ ಕಾಯುವಾಗಲೂ ಬಾಯಲ್ಲಿ ರಾಮನಾಮವೇ; ಪಕ್ಕವಾದ್ಯಕ್ಕೆ ತನಿಬಿಟ್ಟಾಗಲೂ ರಾಮನಾಮವನ್ನೆ ಜಪಿಸುತ್ತಿದ್ದರು. ತೀರಿಕೊಳ್ಳುವ ಮೊದಲೂ ರಾಮನಾಮವೇ ! ಹಣಕ್ಕಾಗಲಿ ಹೆಸರಿಗಾಗಲಿ ಎಂದೂ ಬಾಯಿಬಿಟ್ಟವರಲ್ಲ. ಸಂಗೀತವು ಆಧ್ಯಾತ್ಮಿಕಸಾಧನೆ ಎಂದು ನಂಬಿದ್ದವರು. ❖



ಪಾಲಕ್ಕಾಡು ರಾಮಭಾಗವತರು
(1888-1957)

ಸುಪ್ರಸಿದ್ಧ ವಾಗ್ಗೇಯಕಾರರು; ಲಕ್ಷ್ಯಲಕ್ಷಣಗಳೆರಡರಲ್ಲೂ ನಿಸ್ಸೀಮರು. ಸಂಗೀತ ಕ್ಷೇತ್ರದಲ್ಲಿ ಸರ್ವಮಾನ್ಯರಾದ ಹಿರಿಯರು.

ಕೊಯಮತ್ತೂರಿನ ಚೇವೂರು ಸುಬ್ರಹ್ಮಣ್ಯಾಚಾರ್ಯರು ಮುಮ್ಮಡಿಯವರ ಆಶ್ರಯವನ್ನು ಬಯಸಿ ಮೈಸೂರಿಗೆ ಬಂದು ನೆಲೆಸಿದರು. ಅವರ ಮಗ ವಾಸುದೇವ ಮಹಾರಾಜರ ಸಂಸ್ಕೃತ ಮಹಾಪಾತಶಾಲೆಯಲ್ಲಿ ಅಧ್ಯಯನವನ್ನು ಮುಗಿಸಿ ಮಹಾರಾಜರ ಪ್ರೋತ್ಸಾಹದಿಂದ ತಿರುವಯ್ಯಾರಿಗೆ ಹೋಗಿ ತ್ಯಾಗರಾಜ ಪರಂಪರೆಯ ಪಟ್ಟಣಂ ಸುಬ್ರಹ್ಮಣ್ಯಯ್ಯರ ಬಳಿ ಸಂಗೀತ ಶಿಕ್ಷಣವನ್ನು ಪಡೆದುಕೊಂಡರು (1884-1890).

ಮೈಸೂರಿನಲ್ಲಿ ಆಸ್ಥಾನ ವಿದ್ವಾಂಸರು; 1954ರಲ್ಲಿ ರುಕ್ಮಿಣೀದೇವಿ ಆರುಂಡೇಲರ ಕರೆಯನ್ನು ಮನ್ನಿಸಿ ಅಡಯಾರು ಕಲಾಕ್ಷೇತ್ರದಲ್ಲಿ ನೆಲೆಸಿದರು. ರಾಮಾಯಣದ ನೃತ್ಯರೂಪಕವನ್ನು ಸಿದ್ಧಪಡಿಸಿದರು. ವಾಗ್ಗೇಯಕಾರರಾಗಿ, 'ವಾಸುದೇವ ಕೀರ್ತನಮಂಜರಿ' (ಎರಡು ಸಂಪುಟಗಳಲ್ಲಿ) ಅವರ ಕೀರ್ತಿಯನ್ನು ಸ್ಥಿರಗೊಳಿಸಿದೆ.

'ಸಂಗೀತ ಕಲಾನಿಧಿ', 'ಪದ್ಮಭೂಷಣ' (1954). ಗಾಯಕರಾಗಿ ಮನೋಧರ್ಮಸಂಗೀತಕ್ಕೆ ಹೆಸರಾದರು; ಮಧ್ಯಮಕಾಲ ಅವರಿಗೆ ವಿಶಿಷ್ಟವಾದದ್ದು. ತಾನಗಾಯನ, ಶ್ರುತಿಶುದ್ಧಿಗಳಿಗೆ ಅವರದ್ದು ಎತ್ತಿದ ಕೈ. ಅವರ ರಚನೆಗಳು ಸಂಸ್ಕೃತ, ತೆಲುಗು ಭಾಷೆಗಳಲ್ಲಿವೆ. 'ಕರುಣಿಸೌ ತಾಯೆ' (ಸರಸ್ವತೀಮನೋಹರಿ) ಒಂದು ಮಾತ್ರ ಕನ್ನಡ ರಚನೆ.

ಅವರ ಶಿಷ್ಯರಲ್ಲಿ ಬಿ. ಕೆ. ಪದ್ಮನಾಭರಾವ್, ಡಿ. ಪಶುಪತಿ, ನಾ. ಚೆನ್ನಕೇಶವಯ್ಯ, ಯಳಂದೂರು ರಂಗಚಾರ್ಯರು ಪ್ರಮುಖರು. ಜಯಚಾಮರಾಜ ಒಡೆಯರೂ ಅವರಲ್ಲಿ ಕಲಿತವರೇ. ❖



ಮೈಸೂರು ಕೆ. ವಾಸುದೇವಾಚಾರ್ಯರು
(1865-1961)

ಸಾತ್ವಿಕ ಸ್ವಭಾವದ ಭಾವುಕ ಗಾಯಕರಿಗೆ 'ಟೈಗರ್' ಎಂದೇನು ಹೆಸರು? ಮೈಸೂರು ಮಹಾರಾಜರು ಇಟ್ಟ ಹೆಸರಂತೆ ಅದು. ವೀಣೆ ಶೇಷಣ್ಣನವರು ಇವರ ಹಾಡಿಕೆಯನ್ನು ಕೇಳಿ ''ಹುಲಿಯಲ್ಲ, ಸಿಂಹ!'' ಎಂದರಂತೆ. ಅವರು ಹಾಡುವಾಗ ಕಲ್ಪಿಸುತ್ತಿದ್ದ ನೆನಪು ಅದು. ಕಾಡಿನಲ್ಲಿ ಸಿಂಹವೇ ರಾಜ ; ಸಂಗೀತ ಕ್ಷೇತ್ರದಲ್ಲಿ ಇವರೇ ರಾಜ.

ಲಕ್ಷ್ಯ - ಲಕ್ಷಣ ಎರಡರಲ್ಲೂ ಸಿಂಹದಂತೆಯೇ ಮೇಲ್ಮೆ. ಸಂಪ್ರದಾಯದ ಚೌಕಟ್ಟಿನಲ್ಲಿ ಸ್ವಾತಂತ್ರ್ಯಕ್ಕೆ ಎಡೆಯಿದೆ ಎಂಬುದನ್ನು ತೋರಿಸಿಕೊಟ್ಟ ಧೈರ್ಯ ಅವರದ್ದು. ಸಂಗೀತದಲ್ಲಿರಬೇಕಾದುದು ಭಾವ; ರಾಗ, ತಾಳ ಎರಡೂ ಇದನ್ನು ಅನುಸರಿಸಬೇಕು ಎಂದು ಅವರ ನಿಲುವು. ಸರ್ವಲಘುಪ್ರಸ್ತಾರದ ಸೊಗಸನ್ನು ಅವರು ಕಾಣಿಸುತ್ತಿದ್ದರು. ಶಾರೀರ ಅಹಿತವಾಗಿದ್ದರೂ ವಿಚಿತ್ರವೃತ್ತಿಗಳಿಂದ ಅದ್ಭುತವಾದ, ಆಕರ್ಷಕವಾದ ವಿನಿಕೆ ಅವರದ್ದು.

ತಿರುವೊಟ್ರಿಯೂರು ಅವರದ್ದು; ತಂದೆ ಹರಿಕಥಾ ವಿದ್ವಾಂಸರು. ಪಟ್ಟಣಂ ಸುಬ್ರಹ್ಮಣ್ಯ ಅಯ್ಯರಲ್ಲಿ ಸಂಗೀತ ಶಿಕ್ಷಣ; ತಿರುವೊಟ್ರಿಯೂರು ತ್ಯಾಗಯ್ಯರ ಮಾರ್ಗದರ್ಶನವೂ ಇದ್ದಿತು. ಅಸಾಧಾರಣವಾದ ವಿದ್ವತ್ತು, ಉತ್ತಮಮಟ್ಟದ ಸಂಗೀತ, ಅತ್ಯಂತ ಭಾವುಕತೆ, ಪ್ರಯೋಗಶೀಲತೆ, ಪ್ರತಿಭೆ, ಪ್ರೌಢಿಮೆ, ಕಲ್ಪನಾವಿಲಾಸ ಇವು ವರದಾಚಾರ್ಯರ ಜನಪ್ರೀತಿಗೆ ಕಾರಣವಾದುವು.

ಚೆನ್ನೈ ಸಂಗೀತ ಅಕ್ಯಾಡಮಿಯವರು ಸಂಗೀತ ಶಿಕ್ಷಕರ ತರಬೇತಿಗೆ ನಡೆಸುತ್ತಿದ್ದ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು; ಅನಂತರ ಚಿದಂಬರದ ಅಣ್ಣಾಮಲೆ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನ ಮುಖ್ಯಸ್ಥರಾದರು. ಚೆನ್ನೈನ ಕಲಾಕ್ಷೇತ್ರಕ್ಕೆ ಬಂದು ಅಲ್ಲಿ ಅನೇಕ ವರ್ಷಗಳು ಸೇವೆ ಸಲ್ಲಿಸಿದರು.

ವಾಗ್ಗೇಯಕಾರರೂ ಹೌದು. ಆಶುರಚನೆಗಳೇ ಅವರ ವೈಶಿಷ್ಟ್ಯ. ಹೀಗೆ ಸುಮಾರು ನೂರರವರೆಗೆ ಅವರ ಕೃತಿಗಳಿವೆ. ವರ್ಣಗಳು (ತಾನ ಮತ್ತು ಪದ) ಅವರ ರಚನೆಗಳಲ್ಲಿ ತುಂಬ ಮನೋಜ್ಞವಾದುವು. 'ಸಂಗೀತ ಕಲಾನಿಧಿ' ಯಾದದ್ದಲ್ಲದೆ ಅಕ್ಯಾಡಮಿಯ ತಜ್ಞರ ಸಭೆಗಳಲ್ಲಿ ತಪ್ಪದೆ ಪಾಲ್ಗೊಂಡು ಗಹನವಾದ ವಿಷಯಗಳನ್ನು ಸರಳವಾಗಿ ವಿವರಿಸುತ್ತಿದ್ದರು. ಅವರ ಹಾಸ್ಯಪ್ರಜ್ಞೆ, ಸರಳಸ್ವಭಾವ, ಪ್ರಾಮಾಣಿಕತೆಗಳು ಎಲ್ಲರನ್ನೂ ಅವರತ್ತ ಸೆಳೆಯುತ್ತಿದ್ದುವು.

ಅವರ ಶಿಷ್ಯರಲ್ಲಿ ಎಂ. ಡಿ. ರಾಮನಾಥನ್ ಪ್ರಮುಖರು. ❖



ಟೈಗರ್ ವರದಾಚಾರ್ಯರು
(1876-1950)

ನಾಗಸ್ವರ ಪ್ರಪಂಚದಲ್ಲಿ ಬೆಳಗಿದ ಒಂದು ಧ್ರುವತಾರೆ. ಅವರ ವಾದನದ ವೈಖರಿ, ಅವರ ವಾದ್ಯದಿಂದ ಹೊರಬರುತ್ತಿದ್ದ ನಾದಸೌಖ್ಯ, ಅವರ ವಿಚಿತ್ರ ಅದ್ಭುತ ಕಲ್ಪನೆಗಳು ರಸಿಕರನ್ನು ಬೇರೊಂದು ಲೋಕಕ್ಕೆ ಒಯ್ಯುತ್ತಿದ್ದುವು. ರಾಗಾಲಾಪನೆಯಂತೂ ಮೋಹಕವೇ. ಲಯದ ನೆಮ್ಮದಿಯನ್ನು ಧಾರಾಳವಾಗಿ ಉಣಬಡಿಸುತ್ತಿದ್ದರು.

ತಂದೆ ಸ್ವಾಮಿನಾಥಪಿಳ್ಳೆಯವರಲ್ಲೇ ಮೊದಲ ಶಿಕ್ಷಣ. ಮುಂದೆ ಶೆಂಪನ್ನಾರ್ ಕೋಇಲ್ ರಾಮಸ್ವಾಮಿ ಪಿಳ್ಳೆಯವರಲ್ಲಿ ವಿದ್ಯಾಭ್ಯಾಸಮಾಡಿದರು. ಸಂಗೀತಕ್ಕೇ ಮೀಸಲಾದ ವ್ಯಕ್ತಿತ್ವ. ವಿನಿಕೆಗಳು ಅಸಂಖ್ಯಾತವಾಗಿ ನಡೆದುವು; ಉಳಿದ ವೇಳೆಯೆಲ್ಲ ಅಭ್ಯಾಸಕ್ಕೇ ಅರ್ಪಿತ. ಬದುಕಿನಲ್ಲಿ ಬೇರೊಂದು ಹವ್ಯಾಸವನ್ನೇ ಅರಿಯರು; ಮತ್ತೊಂದು ಆಸಕ್ತಿಯೂ ಇರದು !

ಪರಮಧಾರ್ಮಿಕರು, ದೈವಭಕ್ತರು. ತಮಿಳುನಾಡಿನ ಶೈವಪರಂಪರೆಯ ಧರ್ಮಪುರಿ ಮತ್ತು ತಿರುವಾವಡುತ್ತುರೈ ಅಧೀನಂಗಳಲ್ಲಿ ಆಸ್ಥಾನ ವಿದ್ವಾಂಸರಾಗಿ ಸೇವೆ ಸಲ್ಲಿಸಿದರು. ಅಲ್ಲಿನ ಉತ್ಸವಾದಿ ಸಂದರ್ಭಗಳಲ್ಲಿ ಇವರ ವಿನಿಕೆ ಮನೋಜ್ಞವಾಗಿ, ಹೃದ್ಯವಾಗಿ, ಭಾವುಕವಾಗಿ ಇರುತ್ತಿದ್ದಿತು. ಅಧ್ಯಾತ್ಮದಲ್ಲೂ ಶ್ರದ್ಧೆ, ಸಂಗೀತದಲ್ಲೂ ಶ್ರದ್ಧೆ, ಬದುಕು ಎರಡರ ಸಂಗಮವಾಗಿದ್ದ ಮಹಾಪುರುಷರಲ್ಲೊಬ್ಬರು. ❖



ತಿರುವಿಯಮಿಮಲ್ಲೈ ಸುಬ್ರಹ್ಮಣ್ಯ ಪಿಳ್ಳೈ
(1893-1984)

ಕಾಂಚೀಪುರಂ ನಾಯನಾಪಿಳ್ಳೆಯ ಪಟ್ಟಶಿಷ್ಯ. ತೆಲುಗು ಮೂಲದವರಾದರೂ ತಮಿಳುನಾಡಿನಲ್ಲಿ ದಿಗ್ವಿಜಯ ಸಾಧಿಸಿದ ಧೀರ. 'ಸಂಗೀತ ಕಲಾನಿಧಿ'. ಅರವತ್ತು ವರ್ಷಗಳು ಶ್ರೇಷ್ಠಗಾಯಕರಾಗಿ, ಸಂಗೀತಶಿಕ್ಷಕರಾಗಿ ಮೆರೆದವರು. ಗಾಯನದಲ್ಲಿ ಗಾಂಭೀರ್ಯ; ಲಯಜ್ಞಾನ. ಪಲ್ಲವಿ ನಿರೂಪಣೆಯಲ್ಲಿ ನಿಃಸೀಮರು. ಕಂಚಿನ ಕಂಠ. ಸ್ವಚ್ಛಂದವಾಗಿ ಸ್ವರಸಂಚಾರ, ಶುದ್ಧವಾದ ಸಂಪ್ರದಾಯ.

ತಂದೆ ಚಿತ್ತೂರು ಪ್ರಾಂತ್ಯಕ್ಕೆ ಸೇರಿದ್ದ ಪುಂಗನೂರು ಸಂಸ್ಥಾನದ ಹರಿಕಥೆ ಮತ್ತು ಪಿಟೀಲು ವಿದ್ವಾಂಸರಾಗಿದ್ದ ಪೇರಯ್ಯ; ತಾಯಿ ಕಲಾವಂತುಲು ಪಂಗಡಕ್ಕೆ ಸೇರಿದ್ದ ಗಾಯಕಿ, ಮೊಗಿಲೇಶ್ವರಮ್ಮ. ಮೊದಲು ತಂದೆ-ತಾಯಿಯರಿಂದಲೇ ಪಾಠ; ಆನಂತರ ಕಾಂಚೀಪುರಂ ನಾಯನಾ ಪಿಳ್ಳೆಯವರಲ್ಲಿ ಹದಿನೈದು ವರ್ಷಗಳ ಗುರುಕುಲವಾಸ. ಆಗಲೇ ಸುಬ್ರಹ್ಮಣ್ಯ ನಾಯುಡು ಗುರುಗಳ ಅಣತಿಯಂತೆ ಸುಬ್ರಹ್ಮಣ್ಯ ಪಿಳ್ಳೆ ಆದದ್ದು!

ಬಹುವರ್ಷಗಳು ಪ್ರತಿದಿನವೂ ಅವರಿಗೆ ಕಛೇರಿ ಇರುತ್ತಿದ್ದಿತು; ಅಷ್ಟು ಜನಪ್ರೀತಿಯನ್ನು ಗಳಿಸಿದ್ದರು. ಅವರ ಕಚೇರಿಯಲ್ಲಿ ಹಲವು ಲಯವಾದ್ಯಗಳು; ಗುರುವಿನಂತೆಯೆ ಇವರದ್ದೂ 'ಫುಲ್‌ಬೆಂಚ್'. ತ್ಯಾಗರಾಜರ ಅನೇಕ ಕೃತಿಗಳನ್ನು ಜನಪ್ರಿಯವಾಗಿಸಿದರು. ಜಾವಳಿ, ತಿರುಪ್ಪುಗಳು ಹಾಡುವುದರಲ್ಲಿ ಎತ್ತಿದ ಕೈ. ಅಣ್ಣಾಮಲೆ, ತಿರುಪತಿ, ಚೆನ್ನೈಗಳಲ್ಲಿ ಸಂಗೀತ ಕಾಲೇಜುಗಳಲ್ಲಿ ಶಿಕ್ಷಕರಾಗಿ, ಪ್ರಾಂಶುಪಾಲರಾಗಿ ದುಡಿದರು.

ರಸಿಕರ ಮೆಚ್ಚಿನ ಹಾಡುಗಳಾದ 'ಮಧುರಾನಗರಿಲೊ' (ಆನಂದಭೈರವಿ) 'ಮಾವಲ್ಲಗಾದಮ್ಮ' (ಮಾಂಡ್), 'ಕುಲಮುಲೋನ ಗೊಲ್ಲದಾನ' (ಸಿಂಧುಭೈರವಿ) 'ಅಮ್ಮ ಯಶೋದ' ಇವು ಇವರ ರಚನೆಗಳೇ. ಇವರ ಶಿಷ್ಯರಲ್ಲಿ ಪ್ರಮುಖರೆಂದರೆ ಮಧುರೆ ಸೋಮು, ತಾಡೆಪಲ್ಲಿ ಲೋಕನಾಥಶರ್ಮ, ರೇವತಿ ರತ್ನಸ್ವಾಮಿ (ಮಗಳು).

ಸರಳಸ್ವಭಾವ, ಉದಾರಿ, ಮುಗ್ಧವಾದ ಮನೋವೃತ್ತಿ. ಶಿಷ್ಯರಲ್ಲಿ ತುಂಬು ವಾತ್ಸಲ್ಯ, ಶಿಕ್ಷಣದಲ್ಲಿ ಏನೊಂದು ಮುಚ್ಚುಮರೆಯಿಲ್ಲ. ಅಜಾತಶತ್ರು; ಎಲ್ಲರಿಗೂ ಅಚ್ಚುಮೆಚ್ಚು. ❖



ಚಿತ್ತೂರು ಸುಬ್ರಹ್ಮಣ್ಯ ಪಿಳ್ಳೆ

ಗೊಟ್ಟುವಾದ್ಯದ ಹಿರಿಮೆಗೆ, ಬಳಕೆಗೆ, ಸೊಗಸಿಗೆ ಕಾರಣರಾದವರು; ತಂಜಾವೂರು ಸಖಾರಾಮರಾಯರ ಶಿಷ್ಯರಾಗಿ ಅವರ ವಾದನ ಶೈಲಿಯನ್ನು ಮುಂದರಿಸಿದವರು.

ರಘುನಾಥನಾಯಕನ ಕಾಲದಲ್ಲಿ (ಹದಿನೇಳನೆ ಶತಮಾನ) ಮೈದಳೆದ ವಾದ್ಯ ಇದು. ಅವನ 'ಶೃಂಗಾರ ಸಾವಿತ್ರಿ'ಯೆಂಬ ತೆಲುಗು ನಾಟಕದಲ್ಲಿ ಇದರ ಉಲ್ಲೇಖ ಮೊಟ್ಟಮೊದಲಿಗೆ ಬಂದಿದೆ. ವೀಣೆಯನ್ನು ಮಾರ್ಪಡಿಸಿ ರೂಪುಗೊಂಡ ವಾದ್ಯ. ವೀಣೆಯಲ್ಲಿರುವಂತೆ ಮೆಟ್ಟಲುಗಳಿಲ್ಲ; ಮರದ ತುಂಡಿನಿಂದ (ಗೋಟು, ತಮಿಳಿನಲ್ಲಿ ಕೋಡು) ನುಡಿಸುವರು.

ಇದನ್ನು ಸಭಾವಾದ್ಯವನ್ನಾಗಿ ಮಾಡಿದವರು ಸಖಾರಾಮರಾಯರು. ಅವರ ನಂತರ ತಿರುನೆಲ್ವೇಲಿಯ ಕಡೆಯವರಾದ ನಾರಾಯಣ ಅಯ್ಯಂಗಾರ್ಯರು ಹಲವು ವರ್ಷಗಳ ಪ್ರಯೋಗದಿಂದ ಇಪ್ಪತ್ತೆರಡು ತಂತಿಗಳ ಗೊಟ್ಟುವಾದ್ಯವನ್ನು ನಿರ್ಮಾಣ ಮಾಡಿದರು; ಇದರ ವ್ಯಾಪ್ತಿ ನಾಲ್ಕೂ ಸ್ಥಾಯಿಗಳಲ್ಲಿದೆ. ಪ್ರಧಾನ ತಂತಿಗಳು ಏಳು, ಉಳಿದವು ಅನುರಣನಕ್ಕಾಗಿ. 1928ರಲ್ಲಿ ಮೈಸೂರಿಗೆ ಬಂದು ಆಸ್ಥಾನ ವಿದ್ವಾಂಸರಾದ ಮೇಲೆ ಅರಸರ ಕೋರಿಕೆಯಂತೆ ಸಿದ್ಧಪಡಿಸಿದ ವಾದ್ಯ ಇದು (1935-36ರ ಸುಮಾರಿಗೆ). ಉತ್ತಮ ಗಾಯಕರೂ ಹೌದು. ಕೋಡಗನೆಲ್ಲೂರು ಸುಬ್ಬಯ್ಯ ಭಾಗವತರಲ್ಲಿ ಹಾಡಿಕೆ ಕಲಿತವರು. ತಂದೆಯಿಂದಲೇ ಪಿಟೀಲು ವಾದ್ಯದಲ್ಲಿ ಪರಿಣತಿ ಪಡೆದರು.

ಅವರ ಗೊಟ್ಟುವಾದ್ಯದ ನುಡಿಸಾಣಿಕೆ ತುಂಬ ಜನಪ್ರಿಯವಾಯಿತು. ಅವರ ಶಿಷ್ಯರಲ್ಲಿ ಮೇಲುಕೋಟೆ ಶ್ರೀನಿವಾಯ್ಯಂಗಾರ್ ಮುಖ್ಯರಾದವರು. ಇವರ ಶಿಷ್ಯರೇ ನಮ್ಮ ಕಾಲದಲ್ಲಿ ಹೆಸರಾದ ಎಂ. ವಿ. ವರಾಹಸ್ವಾಮಿ. ಅವರ ಮಗ ನರಸಿಂಹನ್ ಕೂಡ ಅವರ ಶಿಷ್ಯನೇ; ಅವರ ಮಗನೇ ಈಗ ಪ್ರಖ್ಯಾತನಾದ ರವಿಕಿರಣ್.

ನಾರಾಯಣಯ್ಯಂಗರ್ಯರ ವಾದನದಲ್ಲಿ ಸಂಪ್ರದಾಯ ಶುದ್ಧಿ, ಪ್ರತಿಭೆ, ಗಾಂಭೀರ್ಯ, ರಂಜನೆ ಎಲ್ಲವೂ ಇರುತ್ತಿದ್ದವು. ಶಾಸ್ತ್ರವೇತ್ತರೂ, ಸಂಶೋಧಕರೂ ಆಗಿದ್ದ ರಸಿಕರು ಅವರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇವರ ಮೇಲೆ ತುಂಬ ಅಭಿಮಾನ. ಕಡೆಯ ದಿನಗಳನ್ನು ಶ್ರೀರಂಗಪಟ್ಟಣದಲ್ಲಿ ಕಳೆದು ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಗೊಟ್ಟುವಾದ್ಯ ನುಡಿಸುತ್ತಲೆ ತೀರಿಕೊಂಡರು. ❖



ದೇವಕೋಟ್ಟೈ ನಾರಾಯಣಯ್ಯಂಗಾರ್
(1903 - 1959)

ಘಟವಾದ್ಯದಲ್ಲಿ ಅಸಾಧಾರಣಪ್ರತಿಭಾಶಾಲಿ - ಲಯ ಜ್ಞಾನದಲ್ಲಿ ನಂದಿಕೇಶ್ವರನೇ. ತಂದೆ ಸುಬ್ರಹ್ಮಣ್ಯಯ್ಯರು ಮಲಬಾರಿನಲ್ಲೆಲ್ಲ ಚೆಂಡೆವಾದಕರಾಗಿ ಪ್ರಸಿದ್ಧರು; ಕಥಕ್ಕಳಿ ನೃತ್ಯಪದ್ಧತಿಯ ಹಲವಾರು ವಾದ್ಯಗಳಲ್ಲೂ ಸಿದ್ಧಹಸ್ತರು. ಬಿಲ್ವಾದ್ರಿಯ ಮೊದಲ ಪಾಠ ಹಿರಿಯ ಸೋದರ ಪಲಕ್ಕಡಲಿ ಪರಮೇಶ್ವರಯ್ಯರಿಂದ. ಮುಂದೆ ತಂಜಾವೂರು ವೈದ್ಯನಾಥ ಅಯ್ಯರಲ್ಲಿ ಕಲಿಕೆ; ಪಾಲಕ್ಕಾಡು ಮಣಿ ಅಯ್ಯರ ಸಹಪಾಠಿ. ಇಬ್ಬರೂ ತೀರ ಹತ್ತಿರದ ಸ್ನೇಹಿತರು.

1936ರಲ್ಲಿ ವೇದಿಕೆ ಹತ್ತಿದವರು ಮೂವತ್ತೈದು ವರ್ಷಗಳ ಕಾಲ ಘಟವಾದ್ಯದಲ್ಲಿ ನಿಃಸೀಮರಾಗಿ ಅಜರಾಮರವಾದ ಕೀರ್ತಿಗೆ ಭಾಜನರಾದರು. ಕಡೆಗಾಲದಲ್ಲೂ ಘಟವನ್ನು ನುಡಿಸುತ್ತಲೆ ಇದ್ದರು. ಹಲವಾರು ಸುವಿಖ್ಯಾತ ಗಾಯಕರಿಗೆ ಪಾಲಕ್ಕಾಡು ಮಣಿ ಅಯ್ಯರ ಮೃದಂಗದೊಂದಿಗೆ ಇವರ ಘಟವೆಂದರೆ ಸ್ಫೂರ್ತಿದಾಯಕವಾದ ಪಕ್ಕವಾದ್ಯಗಳು. ಅವರದ್ದು ಅನುಪಮ ಜೋಡಿ.

ಅತಿಸೌಮ್ಯಸ್ವಭಾವದವರು; ದೈವಭಕ್ತರು, ಸಂಪ್ರದಾಯಶೀಲರು. ಸಭಾಮರ್ಯಾದೆಯನ್ನು ಕಾಯ್ದುಕೊಳ್ಳುವವರಲ್ಲಿ ಅಗ್ರಗಣ್ಯರು. ಯಾರಿಗೂ ಯಾವ ಬಗೆಯ ತ್ರಾಸವನ್ನೂ ಕೊಡಲಾರದವರು. ಮನೋಧರ್ಮದಲ್ಲಿ ಅತ್ಯುತ್ತಮ ರಸಿಕರಾದರೂ ಪ್ರವೃತ್ತಿಯಲ್ಲಿ ವಿರಕ್ತರು. ❖



ತಿರುವಿಲ್ವಾಮಲೆ ಬಿಲ್ವಾದ್ರಿ ಅಯ್ಯರ್
(1901-1974)

ವೀಣಾವಾದನ ಬೇರೆ ಅಲ್ಲ, ಉಸಿರಾಟ ಬೇರೆ ಅಲ್ಲ. ವೀಣೆ ಎಂದರೆ ಅವರೇ, ಅವರೆಂದರೆ ವೀಣೆಯೇ. ತಾನದ ವಿಸ್ತಾರ, ಪಲ್ಲವಿಯ ಸೊಗಸು, ಸ್ವರಪ್ರಸ್ತಾರದ ಸ್ವಾರಸ್ಯ, ಘನರಾಗ ಪಂಚಕದ ನಿರೂಪಣೆ ಅವರದ್ದೇ ಸ್ವತ್ತು.

ಎಂಟು ತಲೆಮಾರುಗಳಿಂದ ವೈಣಿಕರು. ತಂದೆ ಸುಬ್ಬಯ್ಯನವರು ಪುದುಕ್ಕೋಟೆಯ ಆಸ್ಥಾನ ವಿದ್ವಾಂಸರು. ಸೋದರ ಸುಬ್ಬರಾಮಯ್ಯನವರಿಗೂ (1886-1936) ಇವರಿಗೂ ತಂದೆಯಿಂದಲೇ ಪಾಠ. ಐದನೆಯ ವಯಸ್ಸಿಗೇ ವಿಣಾವಾದನದ ಆರಂಭ. ಹನ್ನೆರಡನೆಯ ವಯಸ್ಸಿನಲ್ಲೇ ಕಚೇರಿ. ದಿನಕ್ಕೆ ಹದಿಮೂರು, ಹದಿನಾಲ್ಕು ಗಂಟೆಗಳ ಸಾಧಕ. ವೀಣೆಯೆಂದರೆ ತಮ್ಮ ಆರಾಧ್ಯದೈವವೆಂದೇ ಎಣಿಕೆ. ಪೂಜೆಯ ಕಾಲದಲ್ಲೂ ವೀಣಾ ವಾದನವೇ.

ಸೋದರರಿಬ್ಬರೂ ಸೇರಿಯೇ ವೀಣೆಯ ಕಚೇರಿಗಳನ್ನು ನೀಡುತ್ತಿದ್ದರು. ಸುಬ್ಬರಾಮಯ್ಯನವರದ್ದು ಊರ್ಧ್ವವೀಣೆ, ನಿಲ್ಲಿಸಿಕೊಂಡು ನುಡಿಸುವರು. ಇವರದ್ದು ತೀರ್ಯಕ್ ವೀಣೆ, ವಾಡಿಕೆಯಂತೆ ಅಡ್ಡಲಾಗಿರಿಸಿಕೊಂಡು ನುಡಿಸುತ್ತಿದ್ದರು. ಅವರದ್ದು ತಾಂಡವವಾದರೆ, ಇವರದ್ದು ಲಾಸ್ಯ. ಅದು ಗಂಡು, ಇದು ಹೆಣ್ಣು. ಈ ಜೋಡಿ ಮೂವತ್ತು ವರ್ಷಗಳಿಗೂ ಮೀರಿ (1903-1936) ಸಂಗೀತ ಪ್ರಪಂಚದಲ್ಲಿ ಮೆರೆಯಿತು.

ಸುಬ್ಬರಾಮಯ್ಯರು ತೀರಿಕೊಂಡ ಮೇಲೆ ಆರು ವರ್ಷ ಸಾಂಬಶಿವಯ್ಯರವರು ವೀಣೆಯ ಕಚೇರಿಗಳನ್ನು ನಿಲ್ಲಿಸಿಬಿಟ್ಟರು. ಮಿತ್ರರ ಬಲವಂತಕ್ಕೆ ಕಟ್ಟುಬಿದ್ದು 1948ರಲ್ಲಿ ಚೆನ್ನೈನ ಪೆರಂಬೂರಿಗೆ ಬಂದು ಅಲ್ಲಿ ನೆಲೆಸಿ, ಪೆರೆಂಬೂರು ಸಂಗೀತ ಸಭೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. 1954ರಲ್ಲಿ ರುಕ್ಮಿಣಿದೇವಿ ಅಡಯಾರಿನ ಕಲಾಕ್ಷೇತ್ರಕ್ಕೆ ಕರೆಸಿಕೊಂಡರು. ಆರು ವರ್ಷಗಳು ಇಲ್ಲಿ ವೀಣಾ ಶಿಕ್ಷಣದ ಹೊರೆಯನ್ನು ಹೊತ್ತರು. ಗಂಟಲ ಕ್ಯಾನ್ಸರ್ ಬೇನೆಯಿಂದ ತೀರಿಕೊಂಡರು.

ಸಂಪ್ರದಾಯಶೀಲರು, ದೈವಭಕ್ತರು, ವಿವಿಕ್ತವಾಸಿಗಳು, ಸರಳ ಸ್ವಭಾವದವರು, ಸಂಗೀತಕಲಾನಿಧಿಯೇ ಮೊದಲಾಗಿ ಅನೇಕ ಪುರಸ್ಕಾರಗಳು ಅವರನ್ನರಸಿಕೊಂಡುಬಂದವು.

ಶಿಷ್ಯರಲ್ಲಿ ದೇವಕೊಟ್ಟೈ ನಾರಾಯಣಯ್ಯಂಗಾರ್, ರಾಜೇಶ್ವರಿ ಪದ್ಮನಾಭನ್ (ಅಣ್ಣನ ಮೊಮ್ಮಗಳು), ರಂಗನಾಯಕಿ ರಾಜಗೋಪಾಲ್, ರಾಮಶಾಸ್ತ್ರಿ, ಕೆ. ಎಸ್. ಸುಬ್ರಹ್ಮಣ್ಯಂ (ಸ್ವೀಕೃತ ಪುತ್ರ, ಅಣ್ಣನ ಮೊಮ್ಮಗ) ಪ್ರಮುಖರು. ❖



ಕಾರೈಕುಡಿ ಸಾಂಬಶಿವ ಅಯ್ಯರ್

(1888-1958)

ಪ್ರತಿಭೆಗೆ ಇನ್ನೊಂದು ಹೆಸರು ಮಾಲಿ (ಮಹಾಲಿಂಗಂ). ಕೊಳಲುವಾದನಕ್ಕೆ ವಿಶಿಷ್ಟವಾದ ಚೇತನ ಅದು. ವಾದನದ ವೈಖರಿಯಲ್ಲಿ ಕ್ಷಣಕ್ಷಣಕ್ಕೂ ನವ್ಯ ಪ್ರಯೋಗಶೀಲತೆ. ಶುದ್ಧಾಂಗವಾಗಿ ಮನೋಧರ್ಮ ಸಂಗೀತವೇ; ಅದರ ಅತಿರೇಕವೂ ಅಭಿವ್ಯಕ್ತಿಗೆ ಬರುತ್ತಿದ್ದುದುಂಟು.

ಹುಟ್ಟೂರು ತಿರುವಡಮರದೂರು (ಟಿ); ತಂದೆ ರಾಮಸ್ವಾಮಿ ಅಯ್ಯರ್ (ಆರ್), ಸಂಗೀತ ಉಪಾಧ್ಯಾಯರು. ಇವರ ಸೋದರ ರಾಜಗೋಪಾಲಯ್ಯರ ಸಂಗೀತಶಾಲೆಯಲ್ಲಿ ಮೊದಲ ಶಿಕ್ಷಣ; ಪಿಟೀಲು ವಿದ್ವಾಂಸರಾದ ಪಾಪಾ ವಂಕಟರಾಮಯ್ಯನವರ ಮಾರ್ಗದರ್ಶನ. ಹನ್ನೊಂದನೆಯ ಹರೆಯದಲ್ಲೇ ಮೊದಲ ಕಚೇರಿ. ವಿಸ್ಮಯಗೊಂಡವರಲ್ಲಿ ದಕ್ಷಿಣಮೂರ್ತಿಪಿಳ್ಳೆ ಒಬ್ಬರು. ಅವರ ಲಯಜ್ಞಾನ ಎಂಥವರನ್ನಾದರೂ ಬೆರಗುಗೊಳಿಸುತ್ತಿದ್ದಿತು. ವಾದನದಲ್ಲಿ ಲಾಲಿತ್ಯ, ಸೌಖ್ಯ. ಪಾಲಕ್ಕಾಡು ಮಣಿಯವರ ಪ್ರೋತ್ಸಾಹವಿದ್ದಿತು.

ಅಸಾಧಾರಣವಾದ ಪ್ರತಿಭೆ. ರಾಷ್ಟ್ರಪ್ರಶಸ್ತಿ (1965), ಪದ್ಮಶ್ರೀ ಪ್ರಶಸ್ತಿ ವಿಜೇತರು. ಬದುಕಿನಲ್ಲಿ ನೆಲೆಗಂಡವರಲ್ಲ; ಊರೂರು ಅಲೆದು ವಿದೇಶದಲ್ಲೇ ನೆಲೆಸಿದರು. ಬದುಕಿನುದ್ದಕ್ಕೂ ಪ್ರತಿಭೆಯೇನು ಅವರ ಕೈಬಿಡಲಿಲ್ಲ.

ಶಿಷ್ಯರಲ್ಲಿ ಎನ್. ರಮಣಿ, ದಿಂಡಿಗಲ್ಲು ನಟರಾಜನ್ ಮತ್ತು ಸಿ. ಎಂ. ಮಧುರಾನಾಥ ಇವರು ಪ್ರಸಿದ್ಧರು. ಸಂಗೀತವನ್ನು ಕುರಿತಂತೆ ಕೆಲವು ಪ್ರಬಂಧಗಳನ್ನೂ ರಚಿಸಿದ್ದಾರೆ. ❖



ಟಿ. ಆರ್. ಮಹಾಲಿಂಗಂ
(1926-1986)

ವಾಸುದೇವಾಚಾರ್ಯರ ಶಿಷ್ಯರಲ್ಲಿ ಅಗ್ರಗಣ್ಯರು: ಅವರ ಕೃತಿರಚನೆಯಲ್ಲಿ ನೆರವಾದವರು. ''ವಾಸುದೇವಕೀರ್ತನ ಮಂಜರಿ''ಯಲ್ಲಿ ಪಾಲ್ಗೊಂಡವರು (1928). ಮೈಸೂರು ಸದಾಶಿವರಾಯರ ಕೃತಿಗಳ ಪ್ರಕಾಶನಕ್ಕೆ ಕಾರಣರಾದವರು. ತಾವೇ ''ಹರಿದಾಸಕೀರ್ತನಸುಧಾಸಾಗರ'' (1960-1968)ದ ಮೂರು ಸಂಪುಟಗಳನ್ನು ಹೊರತಂದರು.

ಮೊದಲ ಸಂಗೀತಶಿಕ್ಷಣ ತಂದೆ ಸಂಗೀತದ ಸಣ್ಣಪ್ಪನವರಲ್ಲಿಯೇ. ಮೈಸೂರಿಗೆ ಬಂದು ವೀಣೆ ಶಿವರಾಮಯ್ಯನವರಲ್ಲಿ ಶಿಕ್ಷಣ, ಅನಂತರ ವಾಸುದೇವಾಚಾರ್ಯರಲ್ಲಿ. ಅರಮನೆಯಲ್ಲಿ ಆಸ್ಥಾನವಿದ್ವಾಂಸರಾದರು (1944). ಜಯಚಾಮರಾಜ ಒಡೆಯರ್ ಅವರ 94 ರಚನೆಗಳಿಗೆ ಸ್ವರಸಂಯೋಜನೆ ಮಾಡುವುದರಲ್ಲಿ ನೆರವಾದರು. ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಕನ್ನಡ, ಹಿಂದಿ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿದರು. ಚಿತ್ರಕಲೆಯಲ್ಲೂ ಪರಿಣತರು.

ಸಂಪ್ರದಾಯಶುದ್ಧವಾದ ಗಾಯನ ಅವರದ್ದು. ತಂಬುನಾದ, ಗಂಭೀರವಾದ ವಿನಿಕೆ, ಸಾಹಿತ್ಯದ ಕಡೆ ಗಮನ, ಲಕ್ಷ್ಯ-ಲಕ್ಷಣ ಎರಡರಲ್ಲೂ ಎತ್ತಿದ ಕೈ. ರಾಗಾಲಾಪನ ಪದ್ಧತಿ, ತಾನಗಾನ, ಪಲ್ಲವಿ ನಿರೂಪಣೆಗಳನ್ನು ಕುರಿತು ಅವರ ಕೈಪಿಡಿಗಳಿವೆ. ಸುಮಾರು ನೂರಐವತ್ತು ಪಲ್ಲವಿಗಳ ಸಾಹಿತ್ಯವನ್ನು ಹೊರತಂದರು.

ತಾವೇ ವಾಗ್ಗೇಯಕಾರರೂ ಹೌದು. 'ಕಮಲಾರಮಣ' ಎಂಬ ಅವರ ರಾಮಪ್ರಿಯರಾಗದ ವರ್ಣ ಜನಪ್ರಿಯವಾಯಿತು. ರಾಗಮಾಲಿಕೆಗಳನ್ನೂ ಜತಿಸ್ವರ-ಪದವರ್ಣಗಳನ್ನೂ ರಚಿಸಿದ್ದಾರೆ. 'ಕೇಶವ' ಎಂಬುದು ಕೃತಿಗಳ ಅಂಕಿತ.

ಪರಿಶುದ್ಧವಾದ ಜೀವನ: ಸಂಗೀತ ಸಾಧನೆಗೇ ಮುಡಿಪಾಗಿದ್ದುದು. ಆಸೆ-ಆಡಂಬರಗಳಿಂದ ತುಂಬ ದೂರವಾಗಿದ್ದರು. ಸುಸಂಸ್ಕೃತರು, ಸಭ್ಯರು, ಸದಾಚಾರ ಸಂಪನ್ನರು. ಸಾಹಿತ್ಯದತ್ತ ಆಳವಾದ ಒಲವು. ❖



ನಾಟನಹಳ್ಳಿ ಚೆನ್ನಕೇಶವಯ್ಯ
(1895-1986)

ಈ ತಲೆಮಾರಿನ ಅತ್ಯಂತ ಜನಪ್ರಿಯ ಗಾಯಕರಲ್ಲಿ ಅಗ್ರಗಣ್ಯರು. ಅವರ ವಿನಿಕೆಯೆಂದರೆ ರಸಿಕರಿಗೆ ಸಮೃದ್ಧವಾದ ಔತಣ. ರಾಗಾಲಾಪನೆಯಲ್ಲಿ ಅಸಾಧಾರಣವಾದ ಕೌಶಲ; ಸ್ವರಕಲ್ಪನೆಯಲ್ಲಿ ಅನುಪಮವಾದ ಪ್ರತಿಭೆ. ಅವರ ಮನೋಧರ್ಮ ಎಲ್ಲರಿಗೂ ಆಕರ್ಷಕವಾಗಿರುತ್ತಿದ್ದಿತು.

ಹೀಗೆಯೇ ಜನಪ್ರೀತಿಯನ್ನು ಗಳಿಸಿಕೊಂಡಿದ್ದ ಮಧುರೆ ಪುಷ್ಪವನಂ ಅಯ್ಯರು (1885-1917) ಅವರ ಚಿಕ್ಕಪ್ಪ. ಎಟ್ಟಿಯಾಪುರದ ರಾಮಚಂದ್ರ ಭಾಗವತರ ಶಿಷ್ಯರು ಅವರು. ಮಣಿಯ ತಂದೆ ರಾಮಸ್ವಾಮಿ ಅಯ್ಯರೂ ಸಂಗೀತವನ್ನು ಬಲ್ಲವರೇ.

ಮಣಿ ಮೊದಲು ಸಂಗೀತವನ್ನು ಕಲಿತದ್ದು ಮಧುರೆ ರಾಜಂ ಭಾಗವತರಿಂದ. ಅನಂತರ ಸುಪ್ರಸಿದ್ಧರೂ ತಮ್ಮ ನಂಟರೂ ಆಗಿದ್ದ ಹರಿಕೇಶ ನಲ್ಲೂರು ಮುತ್ತಯ್ಯ ಭಾಗವತರ ಬಳಿ ಪ್ರೌಢ ಶಿಕ್ಷಣ.

ತಮ್ಮ ಹನ್ನೆರಡನೆಯ ವಯಸ್ಸಿನಲ್ಲೇ ಮೊದಲ ವಿನಿಕೆ; ಪಂಡಿತ ಪಾಮರರೆಲ್ಲರೂ ಮೆಚ್ಚಿಕೊಂಡರು. ಮುಂದೆ ಜನಪ್ರೀತಿ ಧಾರಾಳವಾಗಿ ಒದಗಿಬಂದಿತು. ಶ್ರುತಿಶುದ್ಧವಾದ ಗಾಯನ, ಲವಲವಿಕೆಯ ಮನೋಧರ್ಮ, ಎಲ್ಲರೂ ಅಚ್ಚರಿಪಡುವಂತೆ ಕಲ್ಪನೆಯ ಪ್ರವಾಹ. ಅವರ ವಿನಿಕೆಯಲ್ಲಿ ಎಲ್ಲಿಲ್ಲದ ಸಂಭ್ರಮ. ಅಪರಿಮಿತವಾದ ಉತ್ಸಾಹ. ಸರ್ವಲಘುವಿನ ಸಾರ್ವಭೌಮ.

ಕುಷ್ಠರೋಗದಿಂದ ಬಳಲಿ ಕಂಗಾಲಾಗಿದ್ದರೂ ಬದುಕಿನುದ್ದಕ್ಕೂ ಸಂಗೀತದ ರಸವನ್ನು ಉಣಬಡಿಸಿ ಕೃತಾರ್ಥರಾದರು. ಅವರ ಶಿಷ್ಯರಲ್ಲಿ ವೆಂಬು ಅಯ್ಯರ್, ವಾಂಜಿಯಂ ಮಣಿ ಅಯ್ಯರ್ ಮತ್ತು ಟಿ.ವಿ. ಶಂಕರನಾರಾಯಣ ಇವರು ಪ್ರಮುಖರು. ❖

ಮಧುರೆ ಮಣಿ ಅಯ್ಯರ್

(1912-1968)

ದಾಸಪ್ಪ ತಂದೆಯ ಹೆಸರು, ಆದರೆ ಡಿ. ಎನ್ನುವುದು ದೇವರನಾಮದ ಸುಬ್ಬರಾಮಯ್ಯ ಎನ್ನುವುದಕ್ಕೆ ಅನುವಾಯಿತು. 1926ರ ಸುಮಾರಿಗೆ ಅವರು ನೀಡಿದ ಇಪ್ಪತ್ತು ಗ್ರಾಮೋಫೋನ್ ರೆಕಾರ್ಡುಗಳಲ್ಲಿ ಕನ್ನಡ ದೇವರನಾಮಗಳು ಜನಪ್ರಿಯವಾದವು. ತಮ್ಮ ವಿನಿಕೆಗಳಲ್ಲೂ ದೇವರನಾಮಗಳನ್ನೇ ಹೆಚ್ಚಾಗಿ ಹಾಡುತ್ತಿದ್ದರು.

ತುಮಕೂರು ಜಿಲ್ಲೆಯ ಕೊರಟಗೆರೆಯವರು; ತಂದೆ ಪಿಟೀಲು ವಾದಕರು. ಅವರ ಬಳಿಯೇ ಪಾಠ. ಹದಿಮೂರನೆಯ ವಯಸ್ಸಿನಲ್ಲೇ ಮೊದಲ ಕಚೇರಿ, ಶಿವಗಂಗೆ ಮಠದಲ್ಲಿ, ಮುಂದೆ ನಾಡಿನಲ್ಲೆಲ್ಲ ಪ್ರಸಿದ್ಧ ಗಾಯಕರು. ಸೊಗಸಾದ ಶಾರೀರ; ಉತ್ತಮವಾದ ಮನೋಧರ್ಮ. ಬೇಗಡೆ ರಾಗದಲ್ಲಿ ಎತ್ತಿದ ಕೈ. ಬೇಗಡೆ ಸುಬ್ಬರಾಮಯ್ಯ ಎಂದೇ ಹೆಸರಾದರು.

ಲಕ್ಷ್ಯ-ಲಕ್ಷಣ ಎರಡರಲ್ಲೂ ನಿಸ್ಸೀಮರು. ಸಂಸ್ಕೃತವನ್ನು ಚೆನ್ನಾಗಿ ಬಲ್ಲವರು. ಸಂಗೀತಪಾಠದ ಜೊತೆಗೆ ಸಂಸ್ಕೃತವನ್ನೂ ಕಲಿಸುತ್ತಿದ್ದರು. ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ತಾತ್ತ್ವಿಕ ತಾತ್ಪರ್ಯಗಳೊಂದಿಗೆ ಪಾಠ ಹೇಳುತ್ತಿದ್ದುದು ಅವರ ವೈಶಿಷ್ಟ್ಯ. ಸಾಹಿತ್ಯದ ಸ್ವಾರಸ್ಯವನ್ನೂ ತಿಳಿಸುತ್ತಿದ್ದರು.

ಸಂಗೀತ ಪಾಠಕ್ಕೆ ಹೆಚ್ಚಾಗಿ ಒಲಿದವರು. ಅವರು ಕಲಿಸುತ್ತಿದ್ದ ರೀತಿಯೂ ಶಿಷ್ಯರಿಗೆ ತುಂಬ ಪ್ರಿಯವಾಯಿತು. ಸಂಗೀತದ ಕಾಲೇಜನ್ನು ಬೆಂಗಳೂರಿನಲ್ಲಿ ಆರಂಭಿಸಿ ಬಹುವರ್ಷಗಳು ನಡೆಸಿದರು. ನೂರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಗಾಯನ ವಾದನಗಳಲ್ಲಿ ತಯಾರು ಮಾಡಿದರು. ಐವತ್ತು ವರ್ಷಗಳಷ್ಟು ಕಾಲ ಅವರ ಸಂಗೀತ ಸೇವೆ ನಡೆಯಿತು.

ಪತ್ನೀ ವಿಯೋಗದ ನಂತರ ವೇದಾಂತದಲ್ಲಿ ಆಸಕ್ತರಾಗಿ ಅವಧೂತರಂತೆ, ಯೋಗಿಯಂತೆ ಇದ್ದುಬಿಟ್ಟರು. ತತ್ತ್ವಶಾಸ್ತ್ರದಲ್ಲಿ ಮೊದಲಿಂದ ಅನುರಕ್ತಿಯಿದ್ದಿತು. ಕಡೆಕಡೆಗೆ ಅದೇ ಬದುಕಿನ ಪ್ರಧಾನ ಹವ್ಯಾಸವಾಗಿ ಬಿಟ್ಟಿತು. ಶಾಸ್ತ್ರಜ್ಞಾನ ಆಳವಾಗಿದ್ದಿತು. ಚಿಂತನೆ ಎಡೆಬಿಡದೆ ಜರುಗುತ್ತಿದ್ದಿತು.

ಗಾನಕಲಾಸಿಂಧು, ನಾದಸುಧಾನಿಧಿ ಸುಬ್ಬರಾಮಯ್ಯನವರು ತಮ್ಮ ಸುದೀರ್ಘ ಜೀವಿತವನ್ನು ಸಂಗೀತಕ್ಕೆ ಮುಡಿಪಾಗಿಟ್ಟ ಮಹನೀಯರು. ❖



ಡಿ. ಸುಬ್ಬರಾಮಯ್ಯ
(1903-1986)

ಪಲ್ಲವಿ ನರಸಿಂಹಯ್ಯಂಗಾರ್ಯರೆಂದೇ ಪ್ರಖ್ಯಾತರಾದವರು. ಸಣ್ಣವರಾಗಿದ್ದಾಗ ತ್ಯಾಗರಾಜಸ್ವಾಮಿಗಳನ್ನು ಕಂಡಿದ್ದವರು; ತ್ಯಾಗರಾಜರ ಶಿಷ್ಯರಾದ ಮಾನಂಬುಚಾವಡಿ ವೆಂಕಟಸುಬ್ಬಯ್ಯರಲ್ಲಿ ಶಿಷ್ಯವೃತ್ತಿ ಮಾಡಿದರು.

ಸೊಗಸಾದ ಶಾರೀರ; ಸಾಧಕದಿಂದ ಮೈಗೂಡಿಸಿಕೊಂಡ ಗಾಯನ ಸಾಮರ್ಥ್ಯ. ತ್ಯಾಗರಾಜರ ಕೃತಿಗಳನ್ನು ಹಾಡುವುದರಲ್ಲಿ ಎತ್ತಿದ ಕೈ. ಕೇದಾರಗೌಳ ರಾಗಾಲಾಪನೆಯಲ್ಲಿ ಅವರ ವಿಶೇಷ ಪ್ರತಿಭೆ ತೋರಿಕೊಳ್ಳುತ್ತಿತ್ತು. ತಮ್ಮ 82ನೆಯ ವಯಸ್ಸಿನಲ್ಲೂ ಸಭೆಗಳಲ್ಲಿ ಹಾಡುತ್ತಿದ್ದರು.

ಸದಾಚಾರ ಸಂಪನ್ನರು, ಶ್ರೀರಂಗದಲ್ಲಿ 24 ವರ್ಷಗಳು ನೆಲೆಸಿದ್ದು ಸಂಗೀತ ಗುರುಕುಲವನ್ನು ನಡೆಸಿದರು. ಇವರ ಶಿಷ್ಯರಲ್ಲಿ ಅರಿಯಕ್ಕುಡಿ ರಾಮಾನುಜಯ್ಯಂಗಾರ್ಯರು, ಸಾತ್ತೂರು ಕೃಷ್ಣಯ್ಯರು, ನೆರೂರು ರಂಗಾಚಾರ್ಯರು ಮೊದಲಾದವರು ಪ್ರಮುಖರು.

ಅವರ ವಿನಿಕೆಗಳಿಗೆ ತಿರುಕ್ಕೋಡಿಕಾವಲ್ ಕೃಷ್ಣಯ್ಯರ ಪಿಟೀಲು, ತಂಜಾವೂರು ನಾರಾಯಣಸ್ವಾಮಿ ಅಪ್ಪಾ ಅವರ ಮೃದಂಗ ಇರುತ್ತಿದ್ದವು. ಪಟ್ಟಣಂ ಸುಬ್ರಹ್ಮಣ್ಯಯ್ಯರು, ಮೈಸೂರು ವೀಣೆ ಶೇಷಣ್ಣನವರು ಅವರ ಸ್ನೇಹಿತರಾಗಿದ್ದವರು. ❖



ನಾಮಕ್ಕಲ್ ನರಸಿಂಹ ಅಯ್ಯಂಗಾರ್
(1836-1924)

ಅರ್ಧಶತಮಾನಕ್ಕೂ ಮಿಕ್ಕು ಕರ್ನಾಟಕ ಸಂಗೀತ ಪ್ರಪಂಚದಲ್ಲಿ ಮಿಗಿಲಿಲ್ಲದಂತೆ ಎಣೆಯಿಲ್ಲದಂತೆ ವಿರಾಜಿಸಿದವರು. ವಿದ್ವಾಂಸರಿಗೂ ಸಾಮಾನ್ಯರಸಿಕರಿಗೂ ಅವರ ವಿನಿಕೆಯೆಂದರೆ ಎಂದೂ ಆಕರ್ಷಣೆಯೇ. ಅವರಂತೆ ಪ್ರಸಿದ್ಧರಾದವರು ಮತ್ತೊಬ್ಬ ವಿದ್ವಾಂಸರಿಲ್ಲ. ವಿನಿಕೆಗೆ ಹೊಸದೊಂದು ಆಯಾಮವನ್ನೇ ಏರ್ಪಡಿದರು.

ತಂದೆ ತಿರುವೆಂಕಟಾಚಾರ್ಯರು ಜ್ಯೋತಿಷಿ, ಸಂಗೀತರಸಿಕರಲ್ಲ. ಆದರೆ ಮಗನಿಗೆ ಪುದುಕೋಟೆ ಮಲಯಪ್ಪಯ್ಯರು, ನಾಮಕ್ಕಲ್ ನರಸಿಂಹಾಚಾರ್ಯರಲ್ಲಿ ಸಂಗೀತ ಶಿಕ್ಷಣ, ಪಟ್ಟಣಂ ಸುಬ್ರಹ್ಮಣ್ಯಯ್ಯರ ಪಟ್ಟಶಿಷ್ಯ ರಾಮನಾಡು ಪೂಚಿ ಶ್ರೀನಿವಾಸ ಅಯ್ಯಂಗಾರರಲ್ಲಿ ಪ್ರೌಢಶಿಕ್ಷಣ (12 ವರ್ಷಕಾಲ). ಸಂಪ್ರದಾಯ ಸಂಗೀತದ ಮೇಲೆ ಮೇರೆಯಿಲ್ಲದ ಹಿಡಿತ. ತಮ್ಮ 20ನೆಯ ವಯಸ್ಸಿನಲ್ಲಿ ಮೊದಲ ಕಚೇರಿಯಲ್ಲೇ ಎಲ್ಲರ ಒಲವನ್ನು ಸೂರೆಗೊಂಡರು. ಅಂದಿನಿಂದಲೇ ಇವರ ಯಶಸ್ಸು ನೆಲೆಗೊಂಡಿತು.

ಚೌಕಟ್ಟು ಶುದ್ಧಸಂಪ್ರದಾಯ; ಆದರೆ ವಿನಿಕೆಯಲ್ಲಿ ನವನವೋನ್ಮೇಷದ ಪ್ರತಿಭೆ. ರಾಗನಿರೂಪಣೆಯಲ್ಲಂತೂ ಸಂಗ್ರಹವಾಗಿ, ಸಮಗ್ರವಾಗಿ, ಸುಮಧುರವಾಗಿ, ಸ್ವತಂತ್ರವಾಗಿ ಅವರ ಅಭಿವ್ಯಕ್ತಿ. ಅಚ್ಚುಕಟ್ಟು, ಹಿತ-ಮಿತ, ಕ್ರಮವರಿತ ಸಂಗೀತ ಅವರದ್ದು. ಒಂದಿನಿತೂ ಆಯಾಸವಿಲ್ಲದೆ ನಾಲ್ಕೈದು ಗಂಟೆ ಹಾಡುವ ಸಾಮರ್ಥ್ಯ; ಕೇಳುವವರ ಕುತೂಹಲವನ್ನು ನಿಮಿಷನಿಮಿಷವೂ ಕೆರಳಿಸುವ ವಿನಿಕೆ ತಾರಸ್ಥಾಯಿಯಲ್ಲಿ ಪಂಚಮವನ್ನು ಹಿಡಿದು ಹಾಡುತ್ತಿದ್ದರೆ ರಸಿಕರಿಗೆ ರಸದೂಟ. ಕಾಂಬೋಜಿರಾಗವೆಂದರೆ ದೇವಲೋಕವೇ ಸಿದ್ಧವಾಗುತ್ತಿದ್ದಿತು.

ತ್ಯಾಗರಾಜರ ಪರಂಪರೆಗೇ ಸೇರಿದವರಾಗಿ ತ್ಯಾಗರಾಜರ ಕೃತಿಗಳಿಗೆ ಜೀವತುಂಬಿದರು. ಅರುಣಾಚಲ ಕವಿರಾಯರ ರಾಮನಾಟಕವೆಂಬ ಗೇಯ ನಾಟಕಕ್ಕೆ ಸ್ವರಸಂಯೋಜನೆ ಮಾಡಿ ಬೆಳಕಿಗೆ ತಂದರು; ಗೋದಾದೇವಿಯ ತಿರುಪ್ಪಾವೈ ಪದಗಳನ್ನೂ ಹಾಡಿ ಪ್ರಾಚುರ್ಯವನ್ನೊದಗಿಸಿದರು. ಹಾಡುವಾಗ ಅವರ ನೆಮ್ಮದಿ, ಉತ್ಸಾಹ, ಶಿಸ್ತು, ಎದ್ದು ಕಾಣುತ್ತಿದ್ದುವು. ಪಕ್ಕವಾದ್ಯಗಳ ಗುದ್ದಾಟ, ಗದ್ದಲ, ಗೊಂದಲಗಳಿಗೆ ಎಡೆಮಾಡಿ ಕೊಡುತ್ತಿರಲಿಲ್ಲ. ಇವರದ್ದು ಹೇಳಿ ಕೇಳಿ ಮನೋಧರ್ಮ ಸಂಗೀತ; ಲೆಕ್ಕಾಚಾರಕ್ಕೆ ಒಲಿದವರಲ್ಲ ಅವರು.

'ಸಂಗೀತಕಲಾನಿಧಿ' (1939); 'ಪದ್ಮಭೂಷಣ' (1958). ಶಿಷ್ಯರಲ್ಲಿ ಪಾಲಕ್ಕಾಡು ಕೆ.ವಿ. ನಾರಾಯಣಸ್ವಾಮಿ, ಮಧುರೆ ಕೃಷ್ಣನ್, ಬಿ. ರಾಜಂ ಅಯ್ಯರ್ ಮೊದಲಾದವರು ಪ್ರಮುಖರು. ಅವರ ಪ್ರಭಾವವನ್ನು ಒಡಮೂಡಿಸಿಕೊಂಡವರು ನೂರಾರು ಮಂದಿ ವಿದ್ವಾಂಸರು. ❖



ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್

(1890-1967)

'ಅಭಿನವನಂದಿ'ಯೆನಿಸಿಕೊಂಡು ಮೃದಂಗವಾದನದಲ್ಲಿ ಅಪೂರ್ವ, ಅದ್ಭುತ ಪ್ರತಿಭೆ-ಪ್ರೌಢಿಮೆಗಳ ಪುತ್ಥಳಿಯಂತಿದ್ದವರು. ಪಾಯನೂರು ಗ್ರಾಮದಲ್ಲಿದ್ದ ತಿರುವಿಲ್ವಾಮಲೆ ಶೇಷಭಾಗವತರ ಮಗ. ಸಾತನೂರು ಸುಬ್ಬಯ್ಯರ್, ವಿಶ್ವನಾಥಯ್ಯರ್, ತಂಜಾವೂರು ವೈದ್ಯನಾಥಯ್ಯರಲ್ಲಿ ಶಿಕ್ಷಣ. ತಂದೆಯವರಿಗೆ ಹರಿಕಥಾವಿನಿಕೆಯಲ್ಲಿ ಮೃದಂಗದ ಸಹಯೋಗ. ಪಾಲಕ್ಕಾಡು ರಾಮಭಾಗವತರು, ಚೆಂಬೈ ವೈದ್ಯನಾಥ ಭಾಗವತರಿಂದ ಪ್ರೋತ್ಸಾಹ, ಮಾರ್ಗದರ್ಶನ. ದಕ್ಷಿಣಾಮೂರ್ತಿ ಪಿಳ್ಳೆ, ಅಳಗನಂಬಿ ಪಿಳ್ಳೆಯವರಿಂದ ಉತ್ತೇಜನ.

ವಾದನದಲ್ಲಿ ಇಂಪು, ಸೊಂಪು, ಕಂಪು. ಲಾಲಿತ್ಯಕ್ಕೆ ಗಾಂಭೀರ್ಯಕ್ಕೆ ಹೆಚ್ಚಿನ ಒತ್ತು. ಪಲ್ಲವಿ ನುಡಿಸಾಣಿಕೆಯಲ್ಲಂತೂ ದೈವಿಕವಾದ ಕಳೆ. ಲಯದ ಸಿದ್ಧಿಗೆ ಇವರ ಪ್ರಸಿದ್ಧಿ. ಲಯವೆಂದರೆ ಮಣಿ, ಮಣಿಯೆಂದರೆ ಲಯ ಎಂದು ಚೆಂಬೈ ಹೇಳುತ್ತಿದ್ದರು. ಅವರ ತನಿ ಆವರ್ತನದಲ್ಲಿ ಪ್ರತಿಭೆ, ಪ್ರಯೋಗ ಎರಡೂ ಸಮನಾಗಿಯೆ ಮಿಂಚಿ ಮೆರೆಯುತ್ತಿದ್ದುವು. ತನಿಗೊಂದು ಸ್ವಾರಸ್ಯವನ್ನೂ, ಮೇಲ್ಮೆಯನ್ನೂ ತಂದುಕೊಟ್ಟವರು ಇವರೇ.

ಚೆನ್ನಾಗಿ ಹಾಡುತ್ತಿದ್ದರು. ಇವರ ವಾದನದಲ್ಲಿ ಗಾಯಕಮನೋಧರ್ಮವಿರುತ್ತಿದ್ದಿತು. ಶ್ರುತಿಶುದ್ಧಿ, ಲಯಾಭಿನಿವೇಶ ನವನವೋನ್ಮೇಷಶಾಲಿಯಾದ ಪ್ರತಿಭೆ. ಶೊಲ್ಕಟ್ಟುಗಳನ್ನು ವಿಳಂಬಕಾಲದಲ್ಲಿ ನುಡಿಸುವಾಗ ಇವರ ಮನೋಧರ್ಮ ಸ್ಪಷ್ಟವಾಗುತ್ತಿತ್ತು. ಇವರ ಪಕ್ಕವಾದ್ಯಕ್ಕಾಗಿ ಹಿರಿಯ ವಿದ್ವಾಂಸರೆಲ್ಲ ತವಕಪಡುತ್ತಿದ್ದರು. ಅವರ ಹೆಸರು ಸಂಗೀತ ಕ್ಷೇತ್ರದಲ್ಲಿ ಚಿರಕಾಲ ಉಳಿಯುವಂಥದು.

ಸರಳಸ್ವಭಾವದ ಇವರು ಗಂಭೀರಪ್ರಕೃತಿಯವರು. ಸಂಗೀತವನ್ನು ಬಿಟ್ಟು ಬೇರೊಂದು ಆಸಕ್ತಿಯಿರದು, ಹವ್ಯಾಸವಿರದು. ಅವರ ಔದಾರ್ಯವಂತೂ ಮನೆಮಾತು. ಹಲವು ಮಂದಿ ಅಜ್ಞಾತರಾಗಿದ್ದವರ ಪ್ರತಿಭೆಯನ್ನು ಗುರುತಿಸಿ ಅವರನ್ನು ಪ್ರಸಿದ್ಧಿಗೆ ತಂದವರು ಇವರು. ಆಲತ್ತೂರು ಶ್ರೀನಿವಾಸಯ್ಯರು, ಎಸ್. ರಾಮನಾಥನ್ ಮೊದಲಾದವರು ನಿದರ್ಶನ.

ರಾಷ್ಟ್ರಾಧ್ಯಕ್ಷ ಪ್ರಶಸ್ತಿ (1957), 'ಪದ್ಮಶ್ರೀ' ಕೊನೆಯ ದಿನಗಳಲ್ಲಿ ಋಷಿಕಣಿವೆಯ ಸಂಗೀತ ವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ಶಿಷ್ಯರಲ್ಲಿ ಅವರ ಸೋದರಳಿಯ ಪಾಲಕ್ಕಾಡು ರಘುರಾಮ್ ಮತ್ತು ಉಮಯಾಳ್‌ಪುರಂ ಶಿವರಾಮನ್ ಪ್ರಸಿದ್ಧರು. ಅವರ ಸ್ನೇಹಿತರಲ್ಲಿ ಟಿ. ಚೌಡಯ್ಯನವರು ಪ್ರಮುಖರು. ಅಧ್ಯಾತ್ಮದಲ್ಲಿ ಆಸಕ್ತಿಯಿದ್ದವರು. ❖



ಪಾಲಕ್ಕಾಡು ಮಣಿ ಅಯ್ಯರ್
(1912 - 1981)

ಹಿಂದಿನ ತಲೆಮಾರಿನಲ್ಲಿ ಸಂಗೀತಸಾಮ್ರಾಜ್ಯದ ಸಾರ್ವಭೌಮರಂತೆ ಮೆರೆದವರು. ಅವರ ಶಾರೀರದ ಅಸಾಧಾರಣ ಸೊಬಗು, ಮನೋಧರ್ಮದ ಸೊಗಸು, ಸರಸವಾದ ವ್ಯಕ್ತಿತ್ವದ ಮೆರಗು ಅವರ ಜನಪ್ರೀತಿಯ ಹಿನ್ನೆಲೆ. ದೈವಭಕ್ತಿ, ಸದಾಚಾರ ಮತ್ತು ಸರಳಸುಂದರ ಬದುಕು ಎಲ್ಲರ ಗೌರವವನ್ನೂ ಸೂರೆಗೊಂಡವು. ಪರಿಶುದ್ಧವಾದ ಚಾರಿತ್ರ, ಸಂಪ್ರದಾಯ ಶುದ್ಧವಾದ ಗಾಯನ, ರಸಿಕಮನೋರಂಜನೆಗೆ ಹೇಳಿ ಮಾಡಿಸಿದ ಶೈಲಿ.

ಬಾಲ್ಯದಲ್ಲಿ ತೊಂದಕ್ಕುಳದಿ ಅನಂತರಾಮಭಾಗವತರಲ್ಲಿ ಶಿಕ್ಷಣ, ಶಾರೀರವು ಆರನೆಯ ವರ್ಷದಲ್ಲೇ ತೊಂದರೆ ಕೊಟ್ಟಿತಾಗಿ ಪಿಟೀಲು ವಾದನದ ಕಡೆ ಒಲವು. ಆ ವಾದ್ಯದಲ್ಲೂ ಸಮರ್ಥರಾದರು. ಮೂರು ವರ್ಷಗಳನಂತರ ಶಾರೀರ ಹತೋಟಿಗೆ ಬಂದಿತು. ಅಲ್ಲಿಂದ ಮುಂದೆ ಅವರು ತೀರಿಕೊಳ್ಳುವವರೆಗೂ ಏಕಪ್ರಕಾರವಾಗಿ ಆಕರ್ಷಕವಾದ ಕಂಠಶ್ರೀ.

ಅವರ ಗಾಯನದಲ್ಲಿ ಲಯಕ್ಕೆ ಅಗ್ರಪಟ್ಟ, ಧೀರ ಗಂಭೀರವಾದ ವಿನಿಕೆ; ಭಾವಕ್ಕೆ ಹೆಚ್ಚಿನ ಒತ್ತು. ಎಷ್ಟು ಗಂಟೆಗಳಾದರೂ ಅನಾಯಾಸವಾಗಿ ಹಾಡುವರು; ರಸಿಕರಿಗೆ ಅಷ್ಟೂ ಕಾಲ ಆಹ್ಲಾದದ ಪ್ರವಾಹದಲ್ಲಿ ಮಿಂದ ಅನುಭವ. ಹಾಡಿಕೆಯಲ್ಲಿ ಅಚ್ಚುಕಟ್ಟು , ಶಿಸ್ತು , ಸೊಗಸು ಎಂದೂ ತಪ್ಪಿದ್ದಲ್ಲ.

ಪಕ್ಕವಾದ್ಯದವರನ್ನು ಹುರಿದುಂಬಿಸುವುದರಲ್ಲಿ ಎತ್ತಿದ ಕೈ. ಪ್ರತಿಭಾಶಾಲಿಗಳನ್ನು ಜನರೆದುರು ತರುವುದರಲ್ಲೂ ಮುಂದಾಳು. ಅದರಲ್ಲೂ ಎಷ್ಟೋ ಎಳೆಯ ಗಾಯಕರನ್ನೂ ವಾದಕರನ್ನೂ ಪ್ರಸಿದ್ಧಿಗೆ ತಂದವರು. ಚೌಡಯ್ಯನವರ ಪರಮ ಮಿತ್ರರು; ಅವರ ಒತ್ತಾಯಕ್ಕೆ ಮಣಿದು ಚಲಚ್ಚಿತ್ರದಲ್ಲೂ ಒಮ್ಮೆ ಕಾಣಿಸಿಕೊಂಡರು.

ಗುರುವಾಯೂರಪ್ಪನ ನಿಃಸೀಮ ಭಕ್ತರು. ಕೃಷ್ಣನ ಗುಡಿಯಲ್ಲಿ ರಾತ್ರಿ ಸಂಗೀತ ವಿನಿಕೆಯನ್ನು ಸಂತೋಷದಿಂದ ನಡೆಸಿ, ನೆರೆದವರನ್ನು ಸಂತೋಷಗೊಳಿಸಿ, ಅದೇ ರಾತ್ರಿ ತೀರಿಕೊಂಡರು. ❖



ಚೆಂಬೈ ವೈದ್ಯನಾಥ ಭಾಗವತರು
(1896 - 1975)

‘ಸುಶ್ರುತಿಗಾನವಲ್ಲಭ’, ‘ಸಂಗೀತ ಶಿಖಾಮಣಿ’ ತಾಂಡಾಳಂ ಕೃಷ್ಣಮಾಚಾರಿ ರಂಗಾಚಾರಿ.

ಹುಟ್ಟಿದ್ದು ತಿರುಚಿಯ ನೆರೆಯ ವರಗನೇರಿ ಎಂಬಲ್ಲಿ. ಎಳವೆಯಲ್ಲಿ ಕೋಡಗನಲ್ಲೂರು ಸುಬ್ಬಯ್ಯ ಭಾಗವತರಲ್ಲಿ ಶಿಕ್ಷಣ; ನಾಗಸ್ವರದ ತವಿಲ್‌ವಾದ್ಯ ಎಳೆತನದಿಂದಲೂ ಇವರಿಗೆ ಪ್ರಿಯ, ‘ತವಿಲ್‌ರಂಗ’ ಎಂದೇ ಮನೆಯಲ್ಲಿ ಹೆಸರು. ಅಣ್ಣಾಮಲೈ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನಲ್ಲಿ ಸಭೇಶಯ್ಯರ್ ಮತ್ತು ಪೊನ್ನಯ್ಯ ಪಿಳ್ಳೆಯವರ ಶಿಷ್ಯರು.

ಅದೇ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ. ಮದ್ರಾಸಿನ ಸಂಗೀತ ಕಾಲೇಜಿನಲ್ಲೂ ಅಧ್ಯಾಪಕರಾಗಿದ್ದರು.

ಸಂಪ್ರದಾಯ ಶುದ್ಧ ಸಂಗೀತ; ಮನೋಧರ್ಮದ ಒಲವು ಹೆಚ್ಚು. ಮಾಂಜಿ, ಆಹಿರಿ, ಮಧ್ಯಮಾವತಿ, ಕಲ್ಯಾಣವಸಂತ, ದೇವಗಾಂಧಾರಿ ರಾಗಗಳಿಗೆ ಜೀವತುಂಬುವುದರಲ್ಲಿ ಅಗ್ರಗಣ್ಯರು. ಶ್ಯಾಮಶಾಸ್ತ್ರಿಗಳು ‘ಬ್ರೋವವಮ್ಮ’ ಎಂಬ ಕೃತಿಯನ್ನು ಇವರಿಗಾಗಿಯೇ ರಚಿಸಿದ್ದರೋ ಏನೋ ಎನಿಸುತ್ತಿತ್ತು.

ಶಾಸ್ತ್ರದಲ್ಲಿಯೂ ನುರಿತವರು; ಬದುಕಿನಲ್ಲೂ ವೃತ್ತಿಯಲ್ಲೂ, ವಿನಿಕೆಯಲ್ಲೂ ಎಡೆಸಡದೆ ಗಾಂಭೀರ್ಯವನ್ನು ಕಾಪಾಡಿಕೊಂಡವರು. ಶಿಷ್ಯರಲ್ಲಿ ವೈರಮಂಗಲಂ ಲಕ್ಷ್ಮೀನಾರಾಯಣನ್ ಪ್ರಮುಖರು; ನಮ್ಮ ಎಂ. ಎ. ನರಸಿಂಹಾಚಾರ್ಯರೂ ಇವರಲ್ಲಿ ಕೊಂಚಕಾಲ ಸಂಗೀತವನ್ನು ಕಲಿತರು. ❖



ಟಿ. ಕೆ. ರಂಗಾಚಾರಿ
(1912-1979)

ತ್ಯಾಗರಾಜ ಸ್ವಾಮಿಗಳ ನೇರವಾದ ಶಿಷ್ಯಪರಂಪರೆಗೆ ಸೇರಿದವರು, ಪಲ್ಲವಿ ರಾಮಯ್ಯರ್ (1807-1867). ಮೈಸೂರು ಮುಮ್ಮಡಿಯವರ ಆಸ್ಥಾನಕ್ಕೆ ಬಂದಿದ್ದವರು. ಅವರ ಮಗ ರಾಧಾಕೃಷ್ಣಯ್ಯರು ಪಿಟೀಲುವಾದನವನ್ನು ಹಿಡಿದರು; ರಾಮನಾಥಪುರದ ಸೇತುಪತಿ ಆಸ್ಥಾನದಲ್ಲಿದ್ದರು. ಅವರ ಮಗ (ಸಂತಾನ ಗೋಪಾಲಯ್ಯರು - ಮರಣ 1979) ಬಹುಮುಖ ಪ್ರತಿಭಾವಂತರು ; ಸಂಗೀತದಲ್ಲಂತೂ ಸಿದ್ಧಹಸ್ತರು. ಇವರ ಮಗನೇ ಜಯರಾಮನ್.

ಮೊದಲ ಶಿಕ್ಷಣ ದೊಡ್ಡಪ್ಪನಲ್ಲೆ ; ಅನಂತರ ತಂದೆಯವರಲ್ಲಿ. ಮೊದಲ ವೇದಿಕೆ ಹತ್ತಿದ್ದು ಹನ್ನೆರಡು ವರ್ಷದವರಿದ್ದಾಗ. ತಂದೆ ಆರಂಭಮಾಡಿದ ಶಾರದಾ ಸಂಗೀತವಿದ್ಯಾಶಾಲೆ (ಚೆನ್ನೈ)ಯಲ್ಲಿ ಪಾಠವನ್ನೂ ಹೇಳುತ್ತಿದ್ದರು, ಏಕಸಂಧಿಗ್ರಾಹಿ; ಸ್ವಪ್ರತಿಭೆಯೂ ಇದ್ದಿತಾಗಿ ಬಹುಬೇಗ ಪ್ರಸಿದ್ಧರಾದರು. ಎಲ್ಲ ಪ್ರಮುಖ ಗಾಯಕರಿಗೂ ಪಕ್ಕವಾದ್ಯಕ್ಕೆ ಬೇಕಾದವರಾದರು.

ಪಿಟೀಲು ವಾದನದಲ್ಲಿ ಹೊಸದೊಂದು ದಾರಿಯನ್ನೇ ತೋರಿಸಿದವರು. ತಂದೆ ಹಲವರು ಹಿರಿಯ ವಿದ್ವಾಂಸರ (ತಿರುಕ್ಕೋಡಿಕ್ಕಾವಲ್ ಕೃಷ್ಣಯ್ಯರ್, ಮಲೈಕ್ಕೋಟೈ ಗೋವಿಂದಸ್ವಾಮಿ ಪಿಳ್ಳೆ, ದ್ವಾರಂ, ಚೌಡಯ್ಯ ಮೊದಲಾದವರ) ವಾದನ ವೈಶಿಷ್ಟ್ಯಗಳನ್ನು ಅಳವಡಿಸಿಕೊಂಡಿದ್ದರು; ಇವೆಲ್ಲವೂ ಮಗನಿಗೆ ಮುಟ್ಟಿದುವು. ಇದರ ಆಧಾರದ ಮೇಲೆ ಜಯರಾಮನ್ ಸಂಶೋಧನೆ ಮಾಡಿ, ಪ್ರಯೋಗಗಳನ್ನು ನಡೆಸಿ ತಮ್ಮ 'ಬಾಣಿ'ಯನ್ನು ಸಿದ್ಧಪಡಿಸಿದರು.

ಸ್ವರಪ್ರಸ್ತಾರದಲ್ಲಿ ಲಯದ ಸೂಕ್ಷ್ಮತೆ, ಪೊರುತ್ತಂ ಎಂಬ ವಿಧಾನ, ಸಾಹಿತ್ಯಪ್ರಧಾನವಾದ ಪಲ್ಲವಿ, ಅಪ್ರಸಿದ್ಧ ಕೃತಿಗಳ ಪ್ರಚಾರ, ರಾಗಭಾವ ಪ್ರಕಟಣೆಗೆ ಅನುಕೂಲವಾದ ಕೃತಿಗಳ ಆಯ್ಕೆ. ರಸಾಲಿ, ಬಿಂದುಮಾಲಿನಿ, ಕಲ್ಯಾಣವಸಂತ ಮೊದಲಾದ ರಾಗಗಳಲ್ಲಿ ವಿಸ್ತಾರವಾದ ಆಲಾಪನಾ ಪದ್ಧತಿ ಇವು ಲಾಲ್ಗುಡಿಯ ವಿನಿಕೆಯಲ್ಲಿ ವಿಶೇಷಗಳು.

ವಿಶ್ವವಿಖ್ಯಾತಿಯನ್ನು ಗಳಿಸಿದರಾದರೂ ಸರಳ ಸ್ವಭಾವವನ್ನಾಗಲಿ ವಿನಯವಂತಿಗೆಯನ್ನಾಗಲಿ ಕೈಬಿಡಲಿಲ್ಲ. ಎಡೆಬಿಡದೆ ಸಾಧನೆಮಾಡುವ ಪ್ರವೃತ್ತಿಯೂ ಮರೆಯಾಗಲಿಲ್ಲ. ಮೊದಲಿಗೆ ಪಕ್ಕವಾದ್ಯಗಾರರಾಗಿಯೇ ಯಶಸ್ವಿಯಾದರು; ಅನಂತರ ತನಿವಾದಕರಾಗಿ ಪ್ರಸಿದ್ಧರಾದರು. ಮಗ ಕೃಷ್ಣನ್, ಮಗಳು ವಿಜಯಲಕ್ಷ್ಮಿ ಇಬ್ಬರೂ ಪ್ರತಿಭಾವಂತ ಪಿಟೀಲು ವಾದಕರೇ; ಇಬ್ಬರಿಗೂ ಗುರು ತಾತ ಗೋಪಾಲಯ್ಯರೇ, ತಂದೆಯ ಶಿಕ್ಷಣವಂತೂ ಸರಿಯೇ ಸರಿ. ಮೂವರೂ ಕೂಡಿ ನುಡಿಸುವ ವಿನಿಕೆಗಳು ಜನಪ್ರಿಯವಾದುವು.

ಅನೇಕ ವರ್ಣ, ತಿಲ್ಲಾನ, ಪಲ್ಲವಿಗಳನ್ನು ತಾವೇ ರಚಿಸಿದ್ದಾರೆ. ❖



ಲಾಲ್ಗುಡಿ ಜಯರಾಮನ್
(ಜನನ 1930)

ಮೂಗಯ್ಯನೆಂದು ಎಲ್ಲರಿಗೂ ಪರಿಚಿತರಾದ ಇವರು ಹುಟ್ಟಿದ್ದು 1912ರಲ್ಲಿ ನಂಜನಗೂಡು ತಾಲ್ಲೂಕಿನ ತಗಡೂರಿನಲ್ಲಿ. ತಂದೆ ಮರೇಗೌಡರೇ ಮೊದಲ ಗುರು. ತಬಲಾ ಕಲಿತರು.

ಮೈಸೂರಿಗೆ ಬಂದು ರಂಗಾಚಾರ್ಯರಲ್ಲಿ (ವಾಸುದೇವಾಚಾರ್ಯರ ಶಿಷ್ಯ) ಸಂಗೀತಾಭ್ಯಾಸ ಮಾಡಿದರು; ಬೆಂಗಳೂರಿನ ಅನಂತಶಾಸ್ತ್ರಿಗಳಲ್ಲೂ ಶಿಕ್ಷಣ. ಪ್ರೌಢಶಿಕ್ಷಣ ಬಿಡಾರಂ ಕೃಷ್ಣಪ್ಪನವರ ಬಳಿ; ಅವರ ಸೂಚನೆಯಂತೆ ಮುತ್ತುಸ್ವಾಮಿ ತೇವರರಲ್ಲಿ ಮೃದಂಗ ಕಲಿತರು.

ಹದಿನೆಂಟನೆಯ ವಯಸ್ಸಿನಿಂದಲೇ ವೇದಿಕೆಯ ಪರಿಶ್ರಮ. ಬಿಡಾರಂ ಅವರಿಗೇ ಪಕ್ಕವಾದ್ಯ.

ಮೃದಂಗವಾದಕರೆಂದೇ ಪ್ರಸಿದ್ಧರಾದರೂ ಒಳ್ಳೆಯ ಗಾಯಕರು. ಅದರಲ್ಲೂ ಗಮಕಕ್ಕೆ ಎತ್ತಿದ ಕೈ. ಕುಮಾರವ್ಯಾಸಭಾರತ, ಜೈಮಿನಿ ಭಾರತಗಳ ವಾಚನ ಮಾಡುತ್ತ ಸರಳವಾದ ವಿವರಣೆಯನ್ನು ನೀಡುವ ಕೌಶಲವಿದ್ದಿತು. ಪಲ್ಲವಿಗಾಯನದಲ್ಲಿ ನಿಸ್ಸೀಮರು. ಕನ್ನಡ ಜಾವಳಿಗಳನ್ನು ಸೊಗಸಾಗಿ ಹಾಡುತ್ತಿದ್ದರು. ದೇವರನಾಮಗಳನ್ನು ಹಾಡುವುದರಲ್ಲೂ ಗಟ್ಟಿಗರು.

ಸರಸಸ್ವಭಾವದವರು; ಒಂದಿಷ್ಟೂ ಗರ್ವದವರಲ್ಲ. ❖



ಟಿ. ಎಂ. ಪುಟ್ಟಸ್ವಾಮಯ್ಯ
(1912 - 1982)

ವಯೊಲಿನ್ ವಾದನಕ್ಕೆ ವಿಶೇಷವಾದ ಕಳೆಯನ್ನು ತೊಡಿಸಿ ಸಂಗೀತ ಸಾಮ್ರಾಜ್ಯದಲ್ಲಿ ಸ್ವಾರಸ್ಯವನ್ನು ಮೂಡಿಸಿದವರು. ಕಾವೇರಿದಂಡೆಯ ಮೇಲೆ ತಿರುಮಕೂಡಲು ತಮ್ಮ ತೌರೂರೆಂದು ಅದಕ್ಕೊಂದು ಮಾನ್ಯತೆಯನ್ನು ತಂದುಕೊಟ್ಟವರು. ತಾಯಿ ಸುಂದರಮ್ಮನಿಂದಲೇ ಸಂಗೀತದ ಮೇಲಣ ಒಲವನ್ನು ಗಳಿಸಿಕೊಂಡವರು.

ಹದಿನಾಲ್ಕು ಹದಿನೈದರ ಎಳೆತನದಲ್ಲೇ ಮೈಸೂರಿಗೆ ಬಂದು ಬಿಡಾರಂ ಕೃಷ್ಣಪ್ಪನವರ ಬಳಿ ಸಂಗೀತವನ್ನು ಕಲಿತು, ಎಂಟು ವರ್ಷಗಳಲ್ಲೇ ಈ ಅಸಾಧ್ಯ ಗುರುವಿಗೆ ಕಛೇರಿಯಲ್ಲಿ ಪಕ್ಕವಾದ್ಯ ನುಡಿಸುವ ಎದೆಗಾರಿಕೆ ಅವರದ್ದು. ಅಲ್ಲಿಂದ ಮುಂದೆ ಕಾಲಿಟ್ಟಲ್ಲೆಲ್ಲ ಜಯಭೇರಿಯೆ; ಹತ್ತಿದ ವೇದಿಕೆಯಲ್ಲೆಲ್ಲ ಕೊಂಡಾಟವೇ.

ಮತ್ತೆ ಅದೇನು ಸಾಧಕ! ಅದೇನು ಪ್ರತಿಭೆ! ಅದೇನು ಧೈರ್ಯ! ದಕ್ಷಿಣ ದೇಶದಲ್ಲೆಲ್ಲ ಅವರದ್ದೇ ನುಡಿಸಾಣಿಕೆಗೆ ಅಗ್ರಪಟ್ಟ. ಎಂ. ಎಸ್. ಸುಬ್ಬುಲಕ್ಷ್ಮಿಗೂ ಅವರದ್ದೇ ಪಕ್ಕವಾದ್ಯದ ಬಯಕೆ! ನಾಡಿನ ಹಿರಿಯ ವಿದ್ವಾಂಸರೆಲ್ಲ ಇವರನ್ನು ಆದರಿಸುವವರೇ.

ನುಡಿಸುವಾಗ ತನ್ಮಯತೆ, ಏಕಾಗ್ರತೆ, ನಾದಪೋಷಣೆ. ಸಂಶೋಧನೆಗೂ ಸೈ! ಏಳು ತಂತಿ ಪಿಟೀಲು (1927), ಹತ್ತೊಂಬತ್ತು ತಂತಿ ಪಿಟೀಲು. ಪಕ್ಕವಾದ್ಯವಾದರೂ ಸರಿ, ತನಿಯಾದರೂ ಸರಿ ಅವರೇ ನಾಯಕರು. ಅರುಣಾಚಲಪ್ಪನವರ ಹಾರ್ಮೋನಿಯಂ ಜೊತೆಗೆ ನುಡಿಸುತ್ತಿದ್ದರು. ಕಡೆಯ ಎಂಟು ಹತ್ತು ವರ್ಷಗಳು ದೊರೆಸ್ವಾಮಿ ಅಯ್ಯಂಗಾರರ ವೀಣೆಯೊಂದಿಗೆ.

'ತ್ರಿಮಕುಟ' ಎಂಬ ಅಂಕಿತದಿಂದ ಕಾಣಿಸಿಕೊಳ್ಳುವ ಸಂಗೀತರಚನೆಗಳು ಅವರವೇ. ಅಯ್ಯನಾರ್ ಕಲಾಶಾಲೆಯನ್ನು ರೂಪಿಸಿದವರು ಅವರೇ. ಚಲನಚಿತ್ರಗಳನ್ನೂ ತಯಾರಿಸಿ ಕೈಸುಟ್ಟುಕೊಂಡರು. ಸಂಗೀತಕ್ಕೆ ಚಿಕಿತ್ಸಕ ಗುಣವಿದೆಯೆಂದು ಸಾಧಿಸಿರು. ಸಂಗೀತಗಾರರಿಗೆ ಆತ್ಮವಿಶ್ವಾಸ ಮುಖ್ಯವೆಂಬುದನ್ನು ಮನವರಿಕೆಮಾಡಿಕೊಟ್ಟರು.

ಶಿಷ್ಯರಲ್ಲಿ ಸೇತುರಾಮನ್, ಆರ್.ಕೆ. ವೆಂಕಟರಾಮಶಾಸ್ತ್ರಿ ಕಂಡದೇವಿ ಅಳಗಿರಿಸ್ವಾಮಿ, ರಾಮರತ್ನಂ ಪ್ರಮುಖರು. ಕಡೆಯ ಗಳಿಗೆಯವರೆಗೂ ಸಂಗೀತದ ಗೀಳೇ. ನಾಡಿನ ಹೆಮ್ಮೆಯೆನಿಸಿದರು. ❖

ಟಿ. ಚೌಡಯ್ಯ
(1895-1967)

ಹಾಡ್ಯಾಳು ಪುಟ್ಟಾಚಾರ್ ಮೃದಂಗವಾದನದಲ್ಲಿ ಎತ್ತಿದ ಕೈ; 'ಲಯವಾದ್ಯ ಧುರೀಣ'. ಹಾಡುಗಾರಿಕೆ, ಪಿಟೀಲು ನುಡಿಸಾಣಿಕೆ, ಹಾರ್ಮೋನಿಯಂ, ತಬಲ, ಮೃದಂಗ, ಖಂಜೀರ ಎಲ್ಲದರಲ್ಲೂ ಸಿದ್ಧಹಸ್ತರೇ. ಮನೆತನವೇ ಯಕ್ಷಗಾನ- ಬಯಲಾಟಗಳಿಗೆ ಹೆಸರಾದದ್ದು. ತಂದೆ ಹೊನ್ನಾಚಾರರು ವೇದಿಕೆಗೆ ಬಂದಾಗ ಮಗನದೇ ಮದ್ದಳೆ. ಮುಂದೆ ಕಂಚೀಪುರದ ಪುಟ್ಟಾಚಾರ್ ಎಂಬ ವಿದ್ವಾಂಸರಲ್ಲಿ ತಬಲಾಪಾಠ. ಮನಸ್ಸು ಮೃದಂಗದ ಕಡೆ ಒಲಿದು, ಪಾಲಕ್ಕಾಡು ಕುಂಜುಮಣಿ, ಕರ್ನೂಲು ವೆಂಕಟಾಚಲಯ್ಯ ಇವರಲ್ಲಿ ಶಿಕ್ಷಣ ಪಡೆದರು. ಸುಪ್ರಸಿದ್ಧ ಭೈರವಿ ಕೆಂಪೇಗೌಡರ ಶಿಷ್ಯ ಹೊಸೂರು ಕೃಷ್ಣಮೂರ್ತಿಯವರಲ್ಲೂ ಪಾಠಮಾಡಿದರು.

ಪುಟ್ಟಾಚಾರರ ಪಕ್ಕವಾದ್ಯದೊಂದಿಗೆ ಹಲವು ಪ್ರಖ್ಯಾತಗಾಯಕರ ವಿನಿಕೆಗಳು ನಡೆದುವು. ಸಂಗೀತ ನಾಟಕ ಅಕ್ಯಾಡಮಿಯು 1971ರಲ್ಲಿ ಇವರನ್ನು ಸನ್ಮಾನಿಸಿತು. ಕಡೆಗಾಲದಲ್ಲಿ ಅನಾರೋಗ್ಯದಿಂದ ಸಂಚಾರ ಕಡಮೆಯಾದಾಗಲೂ ಅನೇಕ ಮಂದಿಗೆ ಮನೆಯಲ್ಲೇ ಪಾಠ ಹೇಳಿ ವೇದಿಕೆಗೆ ತಯಾರುಮಾಡಿದರು. ಅವರ ಬೋಧನಾಕ್ರಮ ವಿಶಿಷ್ಟವಾದುದು.

ಅವರ ಶಿಷ್ಯರಲ್ಲಿ ಅವರ ಮಗ ಎಚ್.ಪಿ. ರಾಮಾಚಾರ್ ಪ್ರಮುಖರು. ಇವರು ಮೃದಂಗವಾದನ, ಖಂಜೀರಾ ನುಡಿಸಾಣಿಕೆ ಎರಡರಲ್ಲೂ ಹೆಸರಾದವರು. ಖಂಜೀರಾ ವಾದ್ಯವನ್ನು ಕುರಿತಂತೆ ಸಂಶೋಧನೆಯನ್ನೂ ನಡೆಸುತ್ತಿದ್ದಾರೆ. ಪುಟ್ಟಾಚಾರರ ಇನ್ನೊಬ್ಬ ಹೆಸರಾಂತ ಶಿಷ್ಯ ಎಂ. ವಾಸುದೇವರಾಯರು; ಇವರು ಡೋಲಕ್‌ವಾದನದಲ್ಲೂ ನುರಿತವರು. ❖



ಎಚ್. ಪುಟ್ಟಾಚಾರ್

ವೇದಿಕೆಯ ವಿದ್ವಾಂಸರಾಗಿ ಅಷ್ಟು ಪ್ರಸಿದ್ಧಿಯನ್ನು ಪಡೆದುಕೊಳ್ಳದಿದ್ದರೂ, ಪ್ರಸಿದ್ಧರಾದ ಎಲ್ಲ ವಿದ್ವಾಂಸರ ಗೌರವಾದರಗಳಿಗೆ ಪಾತ್ರರಾದ ವೈಣಿಕರು ಕೊಡುವಾಯೂರ್ ಶಿವರಾಮಯ್ಯರ್ ನಾರಾಯಣ ಸ್ವಾಮಿ. ಸಂಪ್ರದಾಯನಿಷ್ಠರಾದ ಇವರು ಸ್ವರಜ್ಞಾನಕ್ಕೆ, ರಾಗಲಕ್ಷಣಕ್ಕೆ ಇನ್ನೊಂದು ಹೆಸರು ಎಂದೇ ಖ್ಯಾತರು. ರಾಗವನ್ನು ಹಲವಾರು ಮುಖಗಳಿಂದ ಕಾಣಿಸುವ ಪ್ರತಿಭೆ ಅವರದ್ದು. ವಿನಿಕೆಯಲ್ಲಂತೂ ಸುಖಭಾವವನ್ನು ಸೂಸುವುದರಲ್ಲಿ ಎತ್ತಿದ ಕೈ. ಗಂಭೀರವಾದ ಆದರೆ ಅತಿ ದೀರ್ಘವಲ್ಲದ ಗಮಕಗಳು, ಔಚಿತ್ಯ ಪ್ರಜ್ಞೆ ಅವರಿಗೆ ವಿಶಿಷ್ಟವಾದವು. ಅವರು ವೀಣೆ ನುಡಿಸುತ್ತಿದ್ದ ರೀತಿ ಗಾಯನ ಶೈಲಿಯಲ್ಲಿತ್ತು.

ವೈಣಿಕ ಮನೆತನದವರೇ ಆಗಿದ್ದ ಅವರಿಗೆ ಮೊದಲ ಪಾಠ ಪ್ರಾರಂಭವಾದದ್ದು ತಂದೆ ಕೇರಳದ ಕೊಡುವಾಯೂರಿನಲ್ಲಿರುತ್ತಿದ್ದ ಶಿವರಾಮಯ್ಯರ್ ಮತ್ತು ತಾಯಿ ನಾರಾಯಣಿ ಅಮ್ಮಾಳ್ ಅವರಿಂದ. ಅನಂತರ ಅಣ್ಣ ಕೃಷ್ಣಯ್ಯರಲ್ಲಿಯೇ ಶಿಕ್ಷಣ. ಮುಂದೆ ಚಿದಂಬರದ ಅಣ್ಣಾಮಲೆ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನಲ್ಲಿ ಕಲಿಕೆ. ಅಲ್ಲಿ ಸಭೇಶಯ್ಯರ್ ಮತ್ತು ತಂಜಾವೂರು ಪೊನ್ನಯ್ಯ ಪಿಳ್ಳೆಯವರಲ್ಲಿ ಹಾಡಿಕೆ, ದೇಶಮಂಗಲಂ ಸುಬ್ರಹ್ಮಣ್ಯಯ್ಯರಲ್ಲಿ ವೀಣೆ, ಪೊನ್ನಯಪಿಳ್ಳೆಯೆಂಬುವರಲ್ಲಿ ಮೃದಂಗ ಕಲಿತರು. ಅದೇ ಕಾಲೇಜಿನಲ್ಲಿ ಅಧ್ಯಾಪಕರಾದರು (1937-1946). ಮುಂದೆ ತಿರುವನಂತಪುರದ ಸ್ವಾತಿತಿರುನಾಳ್ ಸಂಗೀತ ಅಕಾಡೆಮಿಯಲ್ಲಿ ವೀಣಾಧ್ಯಾಪಕರಾಗಿ ಸೇರಿ, ಆಗ ಪ್ರಿನ್ಸಿಪಾಲರಾಗಿದ್ದ ಶೆಮ್ಮಂಗುಡಿ ಶ್ರೀನಿವಾಸಯ್ಯರಿಗೆ, ಸ್ವಾತಿ ತಿರುನಾಳರ ಕೃತಿಗಳಿಗೆ ಸ್ವರಸಂಯೋಜನೆ ಮಾಡುವ ಕೆಲಸದಲ್ಲಿ ನೆರವಾದರು. ಶೆಮ್ಮಂಗುಡಿ ನಿವೃತ್ತರಾದ ಮೇಲೆ ಇವರೇ ಪ್ರಿನ್ಸಿಪಾಲರಾದರು. 1970ರಲ್ಲಿ ಅಲ್ಲಿಂದ ನಿವೃತ್ತರಾಗಿ ಮುಂಬಯಿಯ ಷಣ್ಮುಗಾನಂದ ಕಲಾಸಂಸ್ಥೆಯವರು ನಡೆಸುತ್ತಿದ್ದ ಸಂಗೀತ ವಿದ್ಯಾಲಯದ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. 1997ರಲ್ಲಿ ಇವರಿಗೆ ಪದ್ಮಭೂಷಣ ಪ್ರಶಸ್ತಿ ದೊರಕಿತು.

ಗೋಪಾಲಕೃಷ್ಣಭಾರತಿ, ನೀಲಕಂಠಶಿವನ್ ಮತ್ತು ಅರುಣಾಚಲ ಕವಿರಾಯರ ತಮಿಳು ಸಂಗೀತ ಕೃತಿಗಳು ಬೆಳಕನ್ನು ಕಂಡದ್ದು ಇವರ ಉದ್ಯಮದ ಫಲವಾಗಿಯೇ. ದೀಕ್ಷಿತರ ಕೃತಿಗಳನ್ನು ವೀಣೆಯಲ್ಲಿ ನುಡಿಸುವುದರಲ್ಲಿ ಇವರು ನಿಸ್ಸೀಮರು. ಇವರ ಉಪನ್ಯಾಸ-ಪ್ರಾತ್ಯಕ್ಷಿಕೆಗಳು ವಿದ್ಯಾರ್ಥಿಗಳ, ವಿದ್ವಾಂಸರ ವಲಯದಲ್ಲಿ ಪ್ರಸಿದ್ಧವಾಗಿದ್ದವು. ಇವರು ಎರಡರಲ್ಲೂ ಪರಿಣತರಾಗಿದ್ದರು. ❖



ಕೆ. ಎಸ್. ನಾರಾಯಣ ಸ್ವಾಮಿ
(1914-1999)

ಸಂಪ್ರದಾಯ ಸಂಗೀತಕ್ಕೆ ಬಹುಮುಖವಾದ ಸೇವೆ ಸಲ್ಲಿಸಿದವರು. ತಂದೆ ಮಹದೇವಶಾಸ್ತ್ರಿಗಳು ಸಂಗೀತ ವಿದ್ವಾಂಸರು, ಸಂಸ್ಕೃತ ಶಾಸ್ತ್ರ ಕಲಾವಿದರು; ತುರೈಯೂರನ್ನು ಬಿಟ್ಟು ಶ್ರೀರಂಗಕ್ಕೆ ಬಂದು ನೆಲೆಸಿದರು.

ಅಲ್ಲಿ ನಾಮಕ್ಕಲ್ ನರಸಿಂಹಯ್ಯಂಗಾರ್ಯರಲ್ಲಿ ಮಗನ ಶಿಷ್ಯವೃತ್ತಿ. ತಂದೆಯೊಂದಿಗೆ ಹರಿಕಥಾಕಾಲಕ್ಷೇಪದಲ್ಲಿ ಭಾಗವತರು; ಮುಂದೆ ಟೈಗರ್ ವರದಾಚಾರ್ಯರಲ್ಲಿ ಶಿಕ್ಷಣ.

ಗ್ರಾಮೋಫೋನ್ ಕಂಪೆನಿಯಲ್ಲಿ ಉದ್ಯೋಗ; ಶಾಸ್ತ್ರೀಯ ಸಂಗೀತದ ಧ್ವನಿಮುದ್ರಣವನ್ನು ಆರಂಭಿಸಿದರು. ರಾಮಾಯಣವನ್ನು ಹತ್ತು ರೆಕಾರ್ಡುಗಳಲ್ಲಿ ತಾವೇ ಹಾಡಿದರು. ಹಲವಾರು ಚಲನಚಿತ್ರಗಳಿಗೆ ಸಂಗೀತವನ್ನು ಅಳವಡಿಸಿದರು.

ಮದ್ರಾಸಿನ ಕಲಾಕ್ಷೇತ್ರದಲ್ಲಿ ಸಂಗೀತವನ್ನು ಮೂವತ್ತು ವರ್ಷಗಳ ಕಾಲ ಬೋಧಿಸಿದರು. ಸಂಪ್ರದಾಯ ಸಂಗೀತವನ್ನು ಕುರಿತಂತೆ, ತ್ಯಾಗರಾಜರ ಕೃತಿಗಳನ್ನು ಕುರಿತಂತೆ ನೂರಾರು ಲೇಖನಗಳನ್ನು ತಮಿಳಿನಲ್ಲಿ ರಚಿಸಿದರು.

ಪದವರ್ಣಗಳನ್ನೂ ಜಾವಳಿಗಳನ್ನೂ ರಚಿಸಿದ್ದಾರೆ. ಪಾಪನಾಶಂ ಶಿವನ್ ಅವರೊಂದಿಗೆ ಹಲವು ಚಲನಚಿತ್ರಗಳಿಗೆ ಸಂಗೀತ ನಿರ್ದೇಶಕರಾಗಿಯೂ ಕೆಲಸ ಮಾಡಿದರು.

ವೇದಿಕೆಯ ಮೇಲೆ ಅಷ್ಟಾಗಿ ಕಾಣಿಸಿಕೊಳ್ಳದಿದ್ದರೂ ಶಾಸ್ತ್ರೀಯ ಸಂಗೀತದ ಸ್ವಾರಸ್ಯವನ್ನು ಜನರಿಗೆ ಮನಗಾಣಿಸಲು ಬದುಕಿನುದ್ದಕ್ಕೂ ದುಡಿದರು. ❖



ತುರೈಯೂರು ರಾಜಗೋಪಾಲ ಶರ್ಮ

(ಜನನ : 1905)

ಹುಟ್ಟಿದ ವರ್ಷ 1899. ತಂದೆ ಶಂಕರಯ್ಯರ್ ಸಂಸ್ಕೃತ, ಸಂಗೀತ ಎರಡರಲ್ಲೂ ನಿಷ್ಣಾತರು. ಶಾಲಾಕಾಲೇಜು ವ್ಯಾಸಂಗ ಮುಗಿಸಿದ ಮೇಲೆ, ಸುಬ್ರಹ್ಮಣ್ಯಯ್ಯರು ಪ್ರಸಿದ್ಧರಾಗಿದ್ದ ಸಭೇಶಯ್ಯರೆಂಬ ಮಹಾವಿದ್ವಾಂಸರ ಬಳಿ ಸಂಗೀತ ಶಿಕ್ಷಣವನ್ನು ಪಡೆದುಕೊಂಡರು. ಸಭೇಶಯ್ಯರ ಪ್ರೀತ್ಯಾದರಗಳನ್ನು ಗಳಿಸಿ ಅವರ ಅಳಿಯನೂ ಆದರು.

ಅದಕ್ಕೂ ಮೊದಲೇ ಸೂಲಮಂಗಲಂ ನಾರಾಯಣಸ್ವಾಮಿ, ನಾಮಕ್ಕಲ್ ನರಸಿಂಹಯ್ಯಂಗಾರ್ ಮತ್ತು ಕರೂರು ಚಿನ್ನಸ್ವಾಮಯ್ಯರ ಬಳಿ ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿತಿದ್ದರು.

ಭಾವಪೂರ್ಣವಾದ ವಿನಿಕೆಯಲ್ಲಿ ಪ್ರಸಿದ್ಧರು. ಸ್ಫುಟವಾದ ಗಮಕಗಳು; ರಾಗಭಾವದೊಂದಿಗೆ ಸಾಹಿತ್ಯದ ರಸವನ್ನೂ ಮೇಳವಿಸಿ ಹಾಡುವುದರಲ್ಲಿ ಎತ್ತಿದ ಕೈ. ರಕ್ತಿರಾಗಗಳ ಗಾಯನಕ್ಕೆ ಅವರಿಗೆ ಸರಿಸಾಟಿಯಿರರು.

ಚೆನ್ನೈನ ಸೆಂಟ್ರಲ್ ಕಾಲೇಜ್ ಆಫ್ ಮ್ಯೂಸಿಕ್‌ನ ಮೊದಲ ಪ್ರಾಂಶುಪಾಲರು. ರಾಷ್ಟ್ರಪ್ರಶಸ್ತಿಯನ್ನು ಪಡೆದುಕೊಂಡವರು; 'ಸಂಗೀತ ಕಲಾನಿಧಿ' (1939). ತಿರುವಯ್ಯಾರಿನ ತ್ಯಾಗಬ್ರಹ್ಮ ಮಹೋತ್ಸವ ಸಭೆಗೆ ಹಲವು ವರ್ಷ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

ಚಲಚ್ಚಿತ್ರಗಳಲ್ಲೂ ನಟರಾಗಿ, ಗಾಯಕರಾಗಿ ಹೆಸರು ಗಳಿಸಿದರು; ಗ್ರಾಮೋಫೋನ್‌ನಲ್ಲಿ ಶಾಸ್ತ್ರೀಯ ಸಂಗೀತದ ಧ್ವನಿಮುದ್ರಿಕೆಯನ್ನು ಮೂಡಿಸಿದವರಲ್ಲಿ ಮೊದಲಿಗರು (1932). ಆಭೇರಿರಾಗದ 'ನಗುಮೋಮು'ವನ್ನು ಯಾರೂ ಎಂದಿಗೂ ಮರೆಯುವಂತಿಲ್ಲ.

ಅವರ 'ಎಂತವೇಡುಕೊಂದು', 'ತಿರುವಡಿ ಶರಣಂ', 'ರಾಮಚಂದ್ರ ರಾಘವ', 'ನೀರಜಾಕ್ಷಿ ಕಾಮಾಕ್ಷಿ', 'ಪಾಲಿಂಚು ಕಾಮಾಕ್ಷಿ' ಮೊದಲಾದ ಹಾಡುಗಳ ವಿನಿಕೆ 'ನ ಭೂತೋ ನ ಭವಿಷ್ಯತಿ' ಎನ್ನುವಂಥವು.

ಲಕ್ಷ್ಯ-ಲಕ್ಷಣಗಳೆರಡರಲ್ಲೂ ನಿಃಸ್ಸೀಮರು. ಚೆನ್ನೈನ ಮ್ಯೂಸಿಕ್ ಅಕ್ಯಾಡೆಮಿಗೆ ಆಧಾರಸ್ತಂಭವಾಗಿದ್ದವರು. ಸಂಪ್ರದಾಯ ಶುದ್ಧಿಯೊಂದಿಗೆ ಮನೋಧರ್ಮವನ್ನೂ ಧಾರಾಳವಾಗಿ ಸೇರಿಸಿದ ಕೀರ್ತಿ ಅವರದ್ದು. ❖



ಮುಸಿರಿ ಸುಬ್ರಹ್ಮಣ್ಯಯ್ಯರ್
(ಜನನ 1899)

ಸಂಗೀತ ಸಾಮ್ರಾಜ್ಯದಲ್ಲಿ ಇಂದು ಅನಭಿಷಿಕ್ತ ಚಕ್ರವರ್ತಿ. ಅತ್ಯಂತ ಪ್ರತಿಭಾನ್ವಿತ, ಜನಪ್ರಿಯ ಗಾಯಕ. ಹುಟ್ಟಿದ್ದು ಸೋದರಮಾವ ಸುವಿಖ್ಯಾತ ತಿರುಕ್ಕೋಡಿಕ್ಕಾವಲು ಕೃಷ್ಣಯ್ಯರ ಮನೆಯಲ್ಲೇ. ಎಂಟನೆಯ ವಯಸ್ಸಿನಲ್ಲೇ ಸಂಗೀತದ ಕಲಿಕೆ ಆರಂಭ. ಗೋಟ್ಟುವಾದ್ಯಂ ಸಖಾರಾಮರಾಯರಲ್ಲಿ ಹಾಡುಗಾರಿಕೆ ಶಿಕ್ಷಣ. ತಿರುಪ್ಪಾಂಬರಂ ಸೋದರರ ಸ್ಫೂರ್ತಿಯಿಂದ ನಾಗಸ್ವರ ಪದ್ಧತಿಯ ರಾಗಾಲಾಪನೆಯ ಮೇಲೆ ಒಲವು. ಮಹಾರಾಜಪುರಂ ವಿಶ್ವನಾಥಯ್ಯರಲ್ಲಿ ಕೆಲವು ವರ್ಷಗಳ ಶಿಕ್ಷಣ. ಉಮಯಾಳ್‌ಪುರಂ ಸ್ವಾಮಿನಾಥಯ್ಯರ ಮಾರ್ಗದರ್ಶನ.

ತ್ಯಾಗರಾಜರ ಪರಂಪರೆಯಲ್ಲೇ ಬಂದವರು. ಮೊದಲ ಕಚೇರಿ ಹತ್ತೊಂಬತ್ತನೆಯ ವಯಸ್ಸಿನಲ್ಲಿ, ಕುಂಭಕೋಣದ ನಾಗೇಶ್ವರಸ್ವಾಮಿ ಸನ್ನಿಧಿಯಲ್ಲಿ. ಅಲ್ಲಿಂದ ಮುಂದೆ ಎಲ್ಲೆಲ್ಲೂ ಜಯಭೇರಿ.

1939ರಲ್ಲಿ ತಿರುವಾಂಕೂರು ಆಸ್ಥಾನವಿದ್ವಾಂಸರು. ಮರುವರ್ಷ ಸ್ವಾತಿ ತಿರುನಾಳ್ ಅಕ್ಯಾಡಮಿಯ ಪ್ರಾಂಶುಪಾಲರು. ಇಪ್ಪತ್ತುಮೂರು ವರ್ಷಗಳ ಸೇವೆಯ ಅವಧಿಯಲ್ಲಿ ಮುತ್ತಯ್ಯಭಾಗವತರೊಡಗೂಡಿ ಸ್ವಾತಿತಿರುನಾಳರ ನೂರೊಂದು ಕೃತಿಗಳಿಗೆ ಸ್ವರರಚನೆ; ಪ್ರಕಟಣೆ. 1957 ರಿಂದ 1960ರವರೆಗೆ ಆಕಾಶವಾಣಿಯಲ್ಲಿ ಸಂಗೀತ ನಿರ್ದೇಶಕರಾಗಿ ಕೆಲಸ.

ಮನೋಧರ್ಮ ಸಂಗೀತ; ಸಂಪ್ರದಾಯ ಶುದ್ಧಿ; ಲಯದ ಬಿಕ್ಕಟ್ಟು, ಶಾರೀರದಲ್ಲಿ ಕೊಂಚ ತೊಂದರೆಯುಂಟಾಯಿತಾದರೂ, ಗಾಯನದ ಸ್ವಾರಸ್ಯ ಏನೇನೂ ಕುಂದಲಿಲ್ಲ. ಅವರ ವಿನಿಕೆಯಲ್ಲಿನ ಸೊಗಸು, ಉತ್ಸಾಹ, ಭಾವಪರವಶತೆಗಳು ಜನಪ್ರೀತಿಯನ್ನು ಒದಗಿಸಿಕೊಟ್ಟವು. ವೈದಿಕ ಸಂಪ್ರದಾಯಕ್ಕೆ ಸೇರಿ, ಆದರಲ್ಲೇ ಉಳಿದುಕೊಂಡವರು. ಹಲವಾರು ಶಿಷ್ಯರನ್ನು ತಯಾರುಮಾಡಿದ್ದಾರೆ. ಚೆನ್ನೈ ಮ್ಯೂಸಿಕ್ ಅಕ್ಯಾಡಮಿಯ ಕಾರ್ಯಕಲಾಪಗಳಲ್ಲಿ ಮಾರ್ಗದರ್ಶಿ. ''ಸಂಗೀತ ಕಲಾನಿಧಿ.'' ❖



ಶೆಮ್ಮಂಗುಡಿ ಶ್ರೀನಿವಾಸಯ್ಯರ್

(ಜನನ 1908)

ಅಜ್ಜ ಬೆಂಗಳೂರಿನಲ್ಲಿದ್ದರಾಗಿ, ಈ ಸಂಗೀತ ಸಾಮ್ರಾಟರು ಹುಟ್ಟಿದ್ದು ಬೆಂಗಳೂರಿನಲ್ಲೇ. ಅಣ್ಣ ವೆಂಕಟಕೃಷ್ಣಯ್ಯನಿಂದಲೇ ಸಂಗೀತ ಶಿಕ್ಷಣ (ಪಿಟೀಲು). ಎಳೆವೆಯಲ್ಲೇ ನಂದಿಗಾನ ವೆಂಕನ್ನ, ತುಮುರಾಡ ಸಂಗಮೇಶ್ವರ ಶಾಸ್ತ್ರಿಮೊದಲಾದ ಹಿರಿಯರಿಂದ ಮಾರ್ಗದರ್ಶನ. ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನೀ ಸಂಗೀತ, ಐರೋಪ್ಯ ಪದ್ಧತಿಯ ಸಂಗೀತ ಮೂರರಲ್ಲೂ ಆಳವಾದ ಅಭ್ಯಾಸ.

ವಿಜಯನಗರದ ಮಹಾರಾಜನು ಸ್ಥಾಪಿಸಿದ್ದ ಸಂಗೀತ ಮಹಾ ವಿದ್ಯಾಲಯಕ್ಕೆ ವಿದ್ಯಾರ್ಥಿಯಾಗಿ ಸೇರಲು ಹೋದವರನ್ನು (ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ) ವ್ಯವಸ್ಥಾಪಕರು ಅವರ ಪ್ರತಿಭೆಗೆ ಮಾರುಹೋಗಿ ಪ್ರಾಧ್ಯಾಪಕರನ್ನಾಗಿ ನೇಮಿಸಿಕೊಂಡರು.! ಹತ್ತು ವರ್ಷಗಳಲ್ಲಿ ಅದೇ ಕಾಲೇಜಿನ ಪ್ರಾಂಶುಪಾಲರೂ ಆಗಿದ್ದು , 1954ರಲ್ಲಿ ನಿವೃತ್ತರಾದರು.

ಅವರ ವಿನಿಕೆಯ ಸೊಗಸು, ಗಾಂಭೀರ್ಯ, ರಸವಂತಿಕೆ, ಮನೋಧರ್ಮಗಳು 1936ರ ವೇಳೆಗೇ ನಾಡಿನಲ್ಲೆಲ್ಲ ಹೆಸರಾದವು. ಮೊದಲು ಅರಿಯಕ್ಕುಡಿ, ಚೆಂಬೈ, ಮುಸಿರಿ, ಕಾಂಚೀಪುರ ನಾಯನಾಪಿಳ್ಳೆ, ಪಲ್ಲಡಂ ಮೊದಲಾದ ಹಿರಿಯರಿಗೆ ಪಕ್ಕವಾದ್ಯ ನುಡಿಸುತ್ತಿದ್ದವರು, ತನಿವಿನಿಕೆಗಳಲ್ಲಿ ತಮ್ಮ ನೆಮ್ಮದಿಯನ್ನು ಕಂಡುಕೊಂಡರು.

ಸಂಗೀತವೇ ಅವರ ಬಾಳ ಬೆಳಕು. ಬಹುಮಟ್ಟಿಗೆ ಕುರುಡರಾಗಿಯೇ ಇದ್ದರಾಗಿ, ಸಭೆಗಳಲ್ಲೂ ತಮಗಾಗಿ ಪಿಟೀಲನ್ನು ನುಡಿಸಿಕೊಳ್ಳುತ್ತಿದ್ದರೇ ವಿನಾ ಸಭಾಸದರಿಗಾಗಿ ಅಲ್ಲ. ಮನೆಯಲ್ಲಿ ಯಾವಾಗಲೂ ಸಾಧನೆಯೇ ; ಬೇರೆ ಹವ್ಯಾಸವೇ ಇಲ್ಲ. ವರ್ಷಕ್ಕೊಮ್ಮೆ ಮೂರುವರೆತಿಂಗಳು ಪ್ರತಿದಿನವೂ ವೆಯ್ಯಿ (ಒಂದು ಸಾವಿರ) ತ್ರಿಸ್ಥಾಯಿ ಸಾಧನೆ ಮಾಡಿ, ಒಂದು ಲಕ್ಷ ಆವೃತ್ತಿ ಮುಗಿಸುವ ವ್ರತವನ್ನಿಟ್ಟುಕೊಂಡಿದ್ದರು. ಪಿಟೀಲು ವಾದನದಲ್ಲಿ ಹೊಸ ಪ್ರಯೋಗಗಳನ್ನು ನಡೆಸುತ್ತಲೇ ಇದ್ದರು.

ಅವರಿಗೆ ಕೃತಿಯ ಸಾಹಿತ್ಯದ ಮೇಲೆ ಗೌರವ. ಪಿಟೀಲಿನ ಮೇಲೆ ಕಮಾನು ಹಾಕುವಾಗ ಸ್ವರ ನುಡಿದರೆ ಸಾಲದು, ಸಾಹಿತ್ಯವೂ ನುಡಿಯ ಬೇಕು ಎನ್ನುತ್ತಿದ್ದರು. ಅವರದ್ದು 'ಸಾಹಿತ್ಯ ಕಮಾನು' ಎಂದೇ ಪ್ರಸಿದ್ಧವಾಯಿತು.

ಅವರನ್ನು ಮೆಚ್ಚಿಕೊಳ್ಳದಿದ್ದ ಹಿರಿಯ-ಕಿರಿಯ ಸಂಗೀತ ರಸಿಕರೇ ಇರಲಿಲ್ಲ. ಇಷ್ಟಾದರೂ ಅವರ ವಿನಯ ಇನಿತೂ ಸಡಿಲವಾಗಲಿಲ್ಲ. ಸರಳ-ಮುಗ್ಧ ಸ್ವಭಾವ ಬದಲಿಸಲಿಲ್ಲ. ಕಡೆಯವರೆಗೂ ತಾನೊಬ್ಬ ಸಂಗೀತ ವಿದ್ಯಾರ್ಥಿಯೆಂದೇ ಬಗೆದಿದ್ದರು. ❖



ದ್ವಾರಂ ವೆಂಕಟಸ್ವಾಮಿ ನಾಯ್ಡು
(1893-1964)

ಖಂಜರಿ ವಾದನದಲ್ಲಿ ನಂದಿಕೇಶ್ವರನ ಅಪರಾವತಾರವೇ. ಈ ವಾದ್ಯವನ್ನು ನಿರ್ಮಿಸಿದವರೂ ಅವರೇ ಎಂದು ಹೇಳುವುದಿದೆ. ಲಯಬ್ರಹ್ಮನೆಂದು ಹೆಸರಾದ ಪುದಕ್ಕೋಟೆ ದಕ್ಷಿಣಾಮೂರ್ತಿ ಪಿಳ್ಳೆ (1875-1936) ಅವರ ಶಿಷ್ಯರೆಂದು ಹೇಳಿದರೆ ಸಾಕು; ಗುರುವಿನ ಮಹತಿಗೆ ಇನ್ನೊಂದು ಸಮರ್ಥನೆ ಬೇಕಿರದು.

ಪುದುಕ್ಕೋಟೆಯ ಅರಮನೆಯಲ್ಲಿ ನಾಗಸ್ವರ ನುಡಿಸುವ ಹಿನ್ನೆಲೆ. ತಿರುಗೋಕರ್ಣದ ಮರಿಯಪ್ಪ ತವಿಲ್‌ಕಾರರ್ ಎಂಬುವರಲ್ಲಿ ಶಿಷ್ಯವೃತ್ತಿ ಮಾಡಿ, ಲಯದ ಮೇಲೆ ಅನುಪಮ ಹಿಡಿತವನ್ನು ಪಡೆದುಕೊಂಡರು.

ಖಂಜರಿ ವಾದ್ಯದಲ್ಲಿ ಮೊಹರಾ ಮತ್ತು ಕೊರವೆ ನುಡಿಸುವ ವೈಖರಿ ಅವರಿಗೆ ವಿಶಿಷ್ಟವಾಗಿದ್ದಿತು; ತನಿ ಆವರ್ತವನ್ನು ಕೊನೆಗಾಣಿಸುವಲ್ಲಿ ಈ ವೈಖರಿಯ ಬೆಡಗು ಬಿನ್ನಾಣಗಳನ್ನು ಕೇಳಿಯೇ ಅನುಭವಿಸಬೇಕು; ಮಾತುಗಳಿಂದ ಹೇಳುವುದಾಗದು. ಲಯಜ್ಞಾನದಲ್ಲಿ ಅವರನ್ನು ಮೀರಿಸುವವರೇ ಇಲ್ಲವೆಂದು ಆ ಕಾಲದ ಮೃದಂಗ ಸಿಂಹವಾಗಿದ್ದ ನಾರಾಯಣಸ್ವಾಮಿ ಅಪ್ಪಾ ಅವರೇ ಹೇಳುತ್ತಿದ್ದರು.

ಅವರ ಶಿಷ್ಯಕೋಟಿ ದೊಡ್ಡದು. ಮೇಲೆ ಹೇಳಿದ ದಕ್ಷಿಣಾಮೂರ್ತಿಯಲ್ಲದೆ ಪಳನಿ ಮುತ್ತಯ್ಯ ಪಿಳ್ಳೆ, ಮಧುರೆ ಘಟಂ ಮಣಿ ಅಯ್ಯರ್, ತಿರುಚ್ಚೆಂದೂರು ರಾಮಯ್ಯ ಪಿಳ್ಳೆ ಮೊದಲಾದವರು ಅವರ ಶಿಷ್ಯರೇ.

ಮೊದಲಿಂದ ವಿರಕ್ತರು, ಆಧ್ಯಾತ್ಮಿಕ ಸಾಧಕರು, ಸರಳಜೀವಿಗಳು, ಸತ್ಪುರುಷರು. ಕಡೆಗಾಲದಲ್ಲಿ ಸಂನ್ಯಾಸಿಗಳಾಗಿ ಮುರುಗಾನಂದ ಸ್ವಾಮಿಗಳೆಂದು ಹೆಸರಾದರು. ತಮ್ಮ ಬದುಕಿಗೇ ಲಯಜ್ಞಾನವನ್ನು ಅನ್ವಯಿಸಿಕೊಂಡ ಹಿರಿಯರು. ❖



ಮಾಮುಂಡಿಯಾ ಪಿಳ್ಳೆ

ವೀಣೆ ಶೇಷಣ್ಣನವರ ಶಿಷ್ಯರಲ್ಲಿ ಅಗ್ರಗಣ್ಯರು; ಹತ್ತು ವರ್ಷಗಳ ಕಾಲ ಪೈಣಕ ಶಿಖಾಮಣಿಯವರಲ್ಲಿ ಶಿಷ್ಯವೃತ್ತಿ. ಆಗಲೇ ಎಂಟುವರ್ಷಗಳು ಮಹಾರಾಜ ಸಂಸ್ಕೃತಪಾಠಶಾಲೆಯಲ್ಲಿ ವ್ಯಾಕರಣ ಓದಿದರು. ಐವತ್ತು ವರ್ಷಗಳಿಗೂ ಮಿಕ್ಕು ಸಂಗೀತ ಕ್ಷೇತ್ರದಲ್ಲಿ ಸೇವೆ. ವೀಣಾವಾದನದಲ್ಲಿ ಲಕ್ಷಣನಿಯಮಗಳನ್ನು ಚಾಚು ತಪ್ಪದೆ ನುಡಿಸುವುದರಲ್ಲಿ ಅವರಿಗೆ ಎಣೆಯೇ ಇರಲಿಲ್ಲ. ತುಂಬಿದ ಪಾಂಡಿತ್ಯ, ನಯ, ಕಲ್ಪನೆ, ರಾಗವಿಸ್ತಾರ ಇವುಗಳಿಗೆ ಹೆಸರಾದವರು.

ಶರ್ಮಾದೇವಿ (ಚೇರನ್ ಮಹಾದೇವಿ) ಮನೆತನದಲ್ಲೇ ಸಂಗೀತ. ತಂದೆ ಕೈಲಾಸಪುರಂ ಲಕ್ಷ್ಮಣಯ್ಯರಿಂದಲೇ ಮೊದಲ ಪಾಠ. ಏಳನೆಯ ವಯಸ್ಸಿನಲ್ಲಿ ಸೈತೂರು ಸಂಸ್ಥಾನದ ಮುತ್ತಯ್ಯ ಭಾಗವತರ ಬಳಿ, ಅನಂತರ ಎಟ್ಟಿಯಾಪುರಂ ಸುಬ್ಬರಾಮ ದೀಕ್ಷಿತರಲ್ಲಿ ಹಾಡುಗಾರಿಕೆ ಮತ್ತು ವೀಣೆ ಎರಡನ್ನೂ ಕಲಿತು, ದೀಕ್ಷಿತರ ಸಲಹೆಯಂತೆ ಮೈಸೂರಿಗೆ ಬಂದು ಶೇಷಣ್ಣನವರಲ್ಲಿ ಪಾಠ ಮಾಡಿದರು (1909ರಲ್ಲಿ ಆರಂಭ). ಇಪ್ಪತ್ತೇಳನೆಯ ವಯಸ್ಸಿನಲ್ಲಿ ಬೆಂಗಳೂರಿನಲ್ಲೇ ಮೊದಲ ಕಚೇರಿ. ಎರಡು ವರ್ಷಗಳ ನಂತರ ಎಟ್ಟಿಯಾಪುರದ ಅರಸರ ಮುಂದೆ ವಿನಿಕೆ; ತಿರುವನಂತಪುರದ ಅರಮನೆಯಲ್ಲೂ ಸನ್ಮಾನ.

ಅವರ ವೀಣಾವಾದನದಲ್ಲಿ ಲಕ್ಷಣ-ಲಕ್ಷ್ಯ ಎರಡರ ಸಂಪೂರ್ಣ ಸಮನ್ವಯ ಎದ್ದು ಕಾಣುತ್ತಿತ್ತು. ತಾನ ನುಡಿಸುವುದರಲ್ಲಿ ಎತ್ತಿದ ಕೈ. ದೀಕ್ಷಿತರ ಕೃತಿಗಳನ್ನೂ, ತಮ್ಮ ಗುರು ಶೇಷಣ್ಣನವರ ರಚನೆಗಳನ್ನೂ ವಿಶೇಷವಾಗಿ, ತಮ್ಮದೇ ಆದ ವೈಖರಿಯಿಂದ, ನುಡಿಸುವರು. ದೀಕ್ಷಿತರನ್ನು ಮೆಚ್ಚಿಕೊಂಡು ಧರ್ಮವತಿ ರಾಗದಲ್ಲಿ 'ದೀಕ್ಷಿತೇಂದ್ರಂ' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಹರದತ್ತಾಚಾರ್ಯ ಸ್ವಾಮಿಗಳಲ್ಲಿ ಸೇವೆಮಾಡಿ ಅವರ ಮೇಲೂ ಒಂದು ಕೃತಿ ರಚಿಸಿದ್ದಾರೆ. (ಕಿರಣಾವಳಿ ರಾಗದಲ್ಲಿ).

ಅವರ ಮಗ ವೆಂಕಟರಾಮನ್ ಅವರಲ್ಲಿ ಹನ್ನೆರಡು ವರ್ಷಗಳು ಶಿಷ್ಯವೃತ್ತಿಮಾಡಿ, ಅವರೊಂದಿಗೇ ಜೋಡಿಪಟ್ಟು ವೀಣೆ ನುಡಿಸುತ್ತಿದ್ದರು. ಈ ಯುಗಳ ವೀಣಾವಿನಿಕೆ ಇಪ್ಪತ್ತೈದು ವರ್ಷಗಳ ಕಾಲ ಸಾಗಿತು. ಅನೇಕ ಸಂಘ ಸಂಸ್ಥೆಗಳಿಂದ ಶಾಸ್ತ್ರಿಗಳಿಗೆ ಪುರಸ್ಕಾರ ದೊರಕಿತು. ಅಷ್ಟಾಗಿ ಪ್ರಸಿದ್ಧಿಗೆ ಬರದಿದ್ದರೂ ವಿಪುಲವಾದ ಜನಾನುರಾಗವನ್ನು ಗಳಿಸಿಕೊಂಡರು. 'ವೀಣೆಯೇ ನನ್ನ ಸ್ವಧರ್ಮ' ಎಂದು ಹೇಳುತ್ತಿದ್ದರು. ❖



ಶರ್ಮಾದೇವಿ ಸುಬ್ರಹ್ಮಣ್ಯ ಶಾಸ್ತ್ರಿ
(1893-1970)

ಮೃದಂಗವಾದನದಲ್ಲಿ ಎಂದಿಗೂ ಮರೆಯಲಾಗದ ವ್ಯಕ್ತಿ. ಅವರ ನುಡಿಸಾಣಿಕೆಯಲ್ಲಿ ನಯ, ಹಿತ, ಲಯ, ಗಾಂಭೀರ್ಯ, ಕಲ್ಪನೆ ಇವೆಲ್ಲ ಪುರಾಣಪ್ರಸಿದ್ಧವಾದುವು. ಮಹಾವೈದ್ಯನಾಥಯ್ಯರ, ಪಟ್ಟಣಂ ಸುಬ್ರಹ್ಮಣ್ಯಅಯ್ಯರ ಹಾಡುಗಾರಿಕೆಯಾಗಲಿ, ಶರಭ ಶಾಸ್ತ್ರಿಗಳ ಕೊಳಲಾಗಲಿ, ಶೇಷಣ್ಣನವರ ವೀಣೆಯಾಗಲಿ, ವೆಂಕೋಬರಾಯರ ಜಲತರಂಗವಾಗಲಿ, ಕೃಷ್ಣಭಾಗವತರ ಹರಿಕಥೆಯಾಗಲಿ ಇವರದ್ದೇ ಪಕ್ಕವಾದ್ಯ ಕಳೆಕಟ್ಟುತ್ತಿತ್ತು. ಭರತನಾಟ್ಯದ ಜತಿಗಳು ಎದ್ದು ಕಾಣುತ್ತಿದ್ದುವು.

ಮಹಾರಾಷ್ಟ್ರದ ಕ್ಷತ್ರಿಯ ಮನೆತನ; ತಂಜಾವೂರಿನಲ್ಲಿ ಮರಾಠಿಗರ ಆಳ್ವಿಕೆ ಮೊದಲಾದಾಗ ಅಲ್ಲಿಗೆ ವಲಸೆ ಬಂದದ್ದು. ತಂಜಾವೂರಿನಲ್ಲೆ ಜನ್ಮ, ಶಿವಸ್ವಾಮಿ ಅಪ್ಪಾ ಬಳಿ ಮೃದಂಗ ವಿದ್ಯಾಭ್ಯಾಸ; ಮನ್ನಾರ್ಗುಡಿ ಮಾರುತಿ ಗುಡಿಯಲ್ಲಿ ಸಾಧನೆ. ಆಂಜನೇಯನ ಭಕ್ತರು. ಅವರ ಮನೆಯಲ್ಲಿ ಶನಿವಾರ ಭಜನೆ ಪ್ರಸಿದ್ಧವಾಗಿದ್ದಿತು.

ಎರಡು ತಂಬೂರಿಗಳ ಜೊತೆ (ಒಂದು ಪಂಚಮ, ಮೂರು ಷಡ್ಜ ಒಂದರ ಶ್ರುತಿ; ಒಂದು ಷಡ್ಜ, ಮೂರು ಪಂಚಮ ಇನ್ನೊಂದರದ್ದು) ಮೃದಂಗ ನುಡಿಸಿಕೊಂಡು ಹಾಡುತ್ತಿದ್ದರು. ಸೇತುಭವಸ್ವಾಮಿಮಠದ ಆಸ್ಥಾನ ವಿದ್ವಾಂಸರು. ಪರಿಶುದ್ಧವಾದ ಜೀವನ. ಎಲ್ಲದರಲ್ಲೂ ಗಾಂಭೀರ್ಯ, ಔಚಿತ್ಯ, ಪ್ರೌಢಿಮೆ. ಮೃದಂಗ ಸಾಧನೆಯೋ, ಕಛೇರಿಯ ವಿನಿಕೆಯೋ ಇಲ್ಲದಿದ್ದಾಗ ಧ್ಯಾನ, ಭಜನೆ, ಜಪ. ಬೇರೊಂದು ಹವ್ಯಾಸವಿಲ್ಲ.

ಇವರ ಶಿಷ್ಯರಲ್ಲಿ ತಂಜಾವೂರು ಬಾಬುರಾವ್, ಮೈಲಮ್ಮಾರು ಕೃಷ್ಣಯ್ಯರ್, ಢೋಲಕ್ ವಿಠಲರಾವ್ ಪ್ರಮುಖರು. ಭಜನೆ ಗೋಷ್ಠಿಗಳಲ್ಲಿ ಭೋಗನಾಥ, ಸ್ವಾಮಿನಾಥ ಎಂಬಿಬ್ಬರು ಶಿಷ್ಯರು ತಂಬೂರಿ ಮೀಟುವರು. ಅಪ್ಪಾ ನಡುವೆ ಕುಳಿತು ಹಾಡುವರು; ಮಧುರವಾದ ಶಾರೀರ, ಭಕ್ತಿಯ ಭಾವ. ತಮ್ಮದೇ ರಚನೆಗಳೂ ಆಗಾಗ ಮಿರಿಮಿರಿ ಮಿಂಚುವುವು. ❖



ನಾರಾಯಣಸ್ವಾಮಿ ಅಪ್ಪಾ

ಕೊಲ್ಲೆಂಗೋಡೆ ವಿಶ್ವನಾಥಭಾಗತರ್ ನಾರಾಯಣಸ್ವಾಮಿ ಅರಿಯಕ್ಕುಡಿಯವರ ಪಟ್ಟ ಶಿಷ್ಯರು; ಐವತ್ತು ವರ್ಷಗಳ ಕಾಲ ಸಂಗೀತ ಸಾಮ್ರಾಜ್ಯದ ಸಾರ್ವಭೌಮರಾಗಿ ಮೆರೆದವರು. ಐದಾರು ತಲೆಮಾರುಗಳಿಂದ ಸಂಗೀತಕ್ಕೆ ಒಲಿದ ಮನೆತನ. ಮೊದಲ ಪಾಠ ಅಜ್ಜ ನಾರಾಯಣ ಭಾಗವತರಿಂದಲೇ; ತಂದೆಯಿಂದಲೂ ಕಲಿಕೆ. ಮೃದಂಗದಲ್ಲಿ ನಂದಿಕೇಶ್ವರನಾಗಿದ್ದ ಪಾಲಕ್ಕಾಡು ಮಣಿ ಅಯ್ಯರಿಂದ ಹಾಡಿಕೆಯ ಶಿಕ್ಷಣ. ಅವರಿಂದಲೇ ಅರಿಯಕ್ಕುಡಿಯವರ ಗುರುಕುಲವನ್ನು ಸೇರಿದ್ದು; 19ನೆಯ ವಯಸ್ಸಿನಲ್ಲಿ ಪಿಟೀಲು ವಿದ್ವಾಂಸ ಪಾಪಾ ವೆಂಕಟರಾಮಅಯ್ಯರಿಂದ ಮಾರ್ಗದರ್ಶನ.

ಚೆನ್ನೈನ ಸಂಗೀತ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ (1982-1994). ಅಮೆರಿಕದ ವೆಸ್ಲೆಯನ್ ವಿಶ್ವವಿದ್ಯಾನಿಲಯದಲ್ಲಿ ಎರಡು ವರ್ಷ ಸಂಗೀತ ಶಿಕ್ಷಕರು; ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ. 'ಪದ್ಮಶ್ರೀ'; 'ಸಂಗೀತ-ಕಲಾನಿಧಿ' ಮೊದಲಾಗಿ ಹಲವು ಪ್ರಶಸ್ತಿಗಳು.

ತಮ್ಮದೇ ವಿಶಿಷ್ಟವಾದೊಂದು ಶೈಲಿಯನ್ನು ಬೆಳಗಿದರು. ತಮ್ಮ ಗುರುಗಳ ಕೊಡುಗೆಯನ್ನೆ ಆಧಾರವಾಗಿರಿಸಿಕೊಂಡು ರಾಗಾಲಾಪನ ಪದ್ಧತಿ, ಸೃಜನಾತ್ಮಕ ಸ್ವರಪ್ರಸ್ತಾರ, ಕೃತಿಯ ಮನೋಜ್ಞ ನಿರೂಪಣೆಗಳಲ್ಲಿ ಸಿದ್ಧಹಸ್ತರೆನಿಸಿದರು. ಸಂಪ್ರದಾಯವನ್ನು ಎಳ್ಳಷ್ಟೂ ಬಿಡದೆ, ನಿತ್ಯನೂತನವೆನಿಸುವ ಗಾಯನ ಅವರದ್ದು. ಭಾವಪೂರ್ಣವಾಗಿ ಹಾಡುವುದರಲ್ಲಿ ಎತ್ತಿದ ಕೈ.

ಗುರುಗಳಂತೆಯೇ, ಸಂಗೀತವಿನಿಕೆಯಲ್ಲಿ ಉತ್ಸಾಹವನ್ನು ತುಂಬಿ, ರಸವನ್ನು ಸೂಸುವುದರಲ್ಲಿ ಅವರಿಗೆ ಸರಿಸಮರಿರಲಿಲ್ಲ. ಸಂಗೀತವನ್ನು ಬಿಟ್ಟು ಬೇರೊಂದು ಆಸಕ್ತಿ ಅವರಿಗಿರಲಿಲ್ಲ. ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಬಹುಕಾಲ ನೆನಪಿನಲ್ಲಿ ನಿಲ್ಲುವ ಸಂಗೀತ ಅವರದ್ದು.

ತ್ಯಾಗರಾಜರು, ಮಾನಂಬುಚಾವಡಿ ವೆಂಕಟಸುಬ್ಬಯ್ಯರ್, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ರಾಮನಾಡು ಶ್ರೀನಿವಾಸಯ್ಯಂಗಾರ್, ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಪಾಲಕ್ಕಾಡು ನಾರಾಯಣಸ್ವಾಮಿ ಇದೊಂದು ಮರೆಯಲಾಗದ ಪರಂಪರೆ. ❖

ಪಾಲಕ್ಕಾಡು ನಾರಾಯಣಸ್ವಾಮಿ

(1923 - 2002)

ಸಂಪ್ರದಾಯ ಉಳಿಯಬೇಕು, ಆದರೆ ನಿಂತ ನೀರಾಗಬಾರದು, ನವ್ಯಪ್ರಯೋಗಗಳು ನಡೆಯಬೇಕು. ಇದಕ್ಕೆ ನಿದರ್ಶನ ಎಸ್. ರಾಮನಾಥನ್. ಅವರ ಗಾಯನದಲ್ಲಿ, ವೀಣಾ ವಾದನದಲ್ಲಿ ರಸಿಕರು ಗಮನಿಸುತ್ತಿದ್ದುದು ಸಂಪ್ರದಾಯ ಶುದ್ಧಿ, ಗಂಭೀರವಾದ ಮನೋಧರ್ಮ, ವಿನೂತನ ಕಲ್ಪನೆಗಳು, ಮೇಲ್ಮಟ್ಟದ ಭಾವುಕತೆಗಳನ್ನು. ಅಗಾಧಪಾಂಡಿತ್ಯ.

ಹುಟ್ಟಿದ್ದು ತಿರುಕೋವಿಲೂರು. ಎಳನೆಯ ವಯಸ್ಸಿಗೇ ಸಂಗೀತದಲ್ಲಿ ಪ್ರವೇಶ; ರಾಮುಡು ಭಾಗವತರಲ್ಲಿ. ಮುಂದೆ ಮನವಾರಪೇಟೆ ಸುಬ್ರಹ್ಮಣ್ಯ ದೀಕ್ಷಿತರು ಗುರುಗಳು. ಅಣ್ಣಾಮಲೆ ವಿಶ್ವವಿದ್ಯಾಲಯದಿಂದ ಸಂಗೀತಭೂಷಣ. ಪೊನ್ನಯ್ಯಪಿಳ್ಳೆ, ತಿರುವಯ್ಯಾರು ಸಭೇಶ ಅಯ್ಯರ್, ಟೈಗರ್ ವರದಾಚಾರ್ಯರಲ್ಲಿ ಕಲಿಕೆ. ಕಾರೈಕ್ಕುಡಿ ಸಾಂಬಶಿವಯ್ಯರಲ್ಲಿ ವೀಣಾಶಿಕ್ಷಣ. ವಾಲಾಡಿ ಕೃಷ್ಣಯ್ಯರ್, ದೇವಕೋಟೆ ನಾರಾಯಣ ಅಯ್ಯಂಗಾರರಿಂದ ಮಾರ್ಗದರ್ಶನ.

ಅಮೇರಿಕದಲ್ಲಿ ಪ್ರಾಧ್ಯಾಪಕರು; ವೆಸ್ಲೆಯನ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪ್ರಶಸ್ತಿ. ಮದ್ರಾಸು, ಮಧುರೆಗಳಲ್ಲಿ ಸಂಗೀತ ಕಾಲೇಜಿನಲ್ಲಿ ಶಿಕ್ಷಕರು. ಲಕ್ಷ್ಯ-ಲಕ್ಷಣ ಪಾರಂಗತರು.

ಸಂಗೀತವೆಂದರೆ ಮೋಹ, ಅದೇ ಬದುಕಿನ ಉಸಿರು, ಸರ್ವಸ್ವ. ಮಕ್ಕಳಿಗೆ ಸಂಗೀತ ಕಲಿಸುವುದೆಂದರೆ ಉತ್ಸಾಹ. ಸರಳತೆ, ವಿನಯ, ನಿರಹಂಕಾರ, ನಿಸರ್ಗಪ್ರೇಮ. ಪಾಠಕಲಿಸುವುದರಲ್ಲಿ ಶ್ರದ್ಧೆ, ವಿದ್ಯಾರ್ಥಿಗಳಲ್ಲಿ ವಾತ್ಸಲ್ಯ, ನಿರಾಡಂಬರ ಇವು ರಾಮನಾಥನ್ ಅವರ ಗುಣಗಳು. ಅವರ ಹಿರಿಮೆಯನ್ನು ಅರಿತುಕೊಂಡು ಅವರನ್ನು ಹೊರಗೆ ತಂದು ವೇದಿಕೆ ಹತ್ತಿಸಿದವರು ಪಾಲಕ್ಕಾಡು ಮಣಿ ಅಯ್ಯರ್.

ಅವರು ಸಾಯುವ ಮುನ್ನ ಮನೆಯವರಿಗೆ 'ನನ್ನ ದೇವರೊಂದಿಗೆ ಸಂಪರ್ಕ ಪಡೆದಿದ್ದೇನೆ. ವೈದ್ಯರು, ಮದ್ದು ಇವನ್ನೆಲ್ಲ ಹತ್ತಿರ ಬರಗೊಡಬೇಡಿ. ಬೇಕಾದರೆ ನನ್ನ ಪಕ್ಕದಲ್ಲಿ ಕೂತು ಹಾಡಿ. ಸಂಗೀತದೊಂದಿಗೆ ಬೆರೆತು ಮರೆಯಾಗುತ್ತೇನೆ' ಎಂದರಂತೆ. ❖



ಡಾ। ಎಸ್. ರಾಮನಾಥನ್
(1917-1988)

ಕೇರಳದ ಮಂಜಪರದಲ್ಲಿರುತ್ತಿದ್ದ ಸಂಗೀತ ವಿದ್ವಾಂಸರು ದೇವೇಶ ಭಾಗವತರ ಮಗ; ನೆರೆಯ ಪಾಲಕ್ಕಾಡಿನಲ್ಲಿ ಶಿಕ್ಷಣ. ಬಿ.ಎಸ್.ಸಿ. ಮತ್ತು ಬಿ.ಇ. ಎರಡೂ ಪದವಿಗಳನ್ನೂ ಪಡೆದರೂ, ತಂದೆಯಿಂದ ಬಂದ ಸಂಗೀತ ಇವರನ್ನು ಬಲವಾಗಿ ಸೆಳೆಯಿತು.

ಯಾವ ಉದ್ಯೋಗಕ್ಕೂ ಆಸೆಪಡದೆ ಟೈಗರ್ ವರದಾಚಾರ್ಯರಲ್ಲಿ ಸಂಗೀತ ಶಿಕ್ಷಣವನ್ನು ಪಡೆದುಕೊಳ್ಳಲು ಮದರಾಸಿನ ಕಲಾಕ್ಷೇತ್ರವನ್ನು ಸೇರಿದರು; ವರದಾಚಾರ್ಯರ ಪಟ್ಟಶಿಷ್ಯರಾದರು.

ಘನವಾದ ಶಾರೀರ, ವಿಳಂಬ ಗಾಯನಕ್ಕೆ ಹೇಳಿ ಮಾಡಿಸಿದ್ದು. ಲಕ್ಷ್ಯ ಲಕ್ಷಣ ಎರಡರಲ್ಲೂ ನಿಸ್ಸೀಮರು. ಹಾಡುವಾಗ ತಾವು ಆನಂದವನ್ನನುಭವಿಸಿ, ಇತರರಿಗೆ ಅದನ್ನು ಉಣಬಡಿಸುತ್ತಿದ್ದರು. ಅವರ ಕಛೇರಿಗಳಲ್ಲಿ ನೆಮ್ಮದಿಗೆ ಅಗ್ರಪಟ್ಟ. ಸಂಗೀತದ ಪ್ರಯೋಜನವಿರುವುದೇ ಪ್ರಶಾಂತಿಯಲ್ಲಿ, ಪ್ರಸನ್ನತೆಯಲ್ಲಿ ಎಂದು ನಂಬಿದ್ದರು.

ರಕ್ತಿರಾಗಗಳೇ ಇವರ ಭಂಡಾರ. ರಾಗಾಲಾಪನೆಯಲ್ಲಿ ರಾಗದ ಸೊಬಗನ್ನು ಕಾಣಿಸುವುದೇ ಅವರ ಉದ್ದೇಶ. ಯದುಕುಲ ಕಾಂಬೋದಿಯೋ, ಮೋಹನವೋ, ಶ್ರೀ ರಾಗವೋ, ಕೇದಾರವೋ, ಅದರ ಜೀವವನ್ನೇ ಹಿಡಿದು ಭಾವವನ್ನು ಹಿಂಡಿ, ಕೇಳುವವರೆದುರು ತೋರಿಸುವುದು ಅವರಿಗೆ ತೃಪ್ತಿಯನ್ನು ತರುತ್ತಿದ್ದಿತು; ಕೇಳುವವರಿಗೂ ಅದೊಂದು ಆನಂದವನ್ನು ತರುತ್ತಿದ್ದಿತು. ಒಂದೊಂದು ರಾಗದಲ್ಲೂ ಅವರ ಜ್ಞಾನ ಅಪಾರವಾಗಿದ್ದು ಅದರ ಭಾವವನ್ನು ಪೋಷಣೆ ಮಾಡುವ ಶಕ್ತಿ ಅವರಿಗಿದ್ದಿತು.

ವಾಗ್ಗೇಯಕಾರರೂ ಆಗಿದ್ದರು; ಮುನ್ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ತಮ್ಮ ಗುರು ವರದಾಚಾರ್ಯರಿಗೆ ಅಂಕಿತ ಮಾಡಿದ್ದಾರೆ ('ವರದದಾಸ') ಸಂಗೀತದಿಂದ ತಮ್ಮ ಅಂತರಂಗವನ್ನು ಶುದ್ಧ ಮಾಡಿಕೊಂಡು ಭಗವದ್ಭಕ್ತಿಯ ನೆಲೆಯಲ್ಲಿ ನಿಂತವರು. ❖



ಎಂ. ಡಿ. ರಾಮನಾಥನ್
(1923-1984)

ಕರ್ನಾಟಕದಲ್ಲಿ ಕರ್ನಾಟಕಸಂಗೀತದ ಸ್ವಾರಸ್ಯವನ್ನು ಜನರಿಗೆ ಮನಗಾಣಿಸಿದ ಹಿರಿಯರಲ್ಲಿ ಒಬ್ಬರು. ತಂದೆ ಕೃಷ್ಣಸ್ವಾಮಿ ಅಯ್ಯಂಗಾರ್ಯರು ಸಂಗೀತರಸಿಕರು. ಮೈಸೂರಿನಲ್ಲಿ ಬಿಡಾರಂ ಕೃಷ್ಣಪ್ಪನವರ ರಾಮಮಂದಿರದ ಮೊದಲ ಕಾರ್ಯದರ್ಶಿ. ಮಗನು ಶಾಸ್ತ್ರೀಯ ಸಂಗೀತದಲ್ಲಿ ಶಿಕ್ಷಣ ಪಡೆದುಕೊಂಡದ್ದು ಇಲ್ಲಿಯೇ. ಮುಂದೆ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ಕೃಷ್ಣಗಾಯನ ಪಾಠಶಾಲೆ ಇವರಿಗೆ ಆಸರೆಯಾಗಿ ಆರಂಭವಾಯಿತು.

ದೂರದ ಚಿದಂಬರಂನ ಸಂಗೀತ ಮಹಾವಿದ್ಯಾಲಯದಲ್ಲಿ ದಿಗ್ಗಜರಾಗಿದ್ದ ಸಭೇಶಯ್ಯರ್, ಪೊನ್ನಯ್ಯ ಪಿಳ್ಳೆ, ಟೈಗರ್ ವರದಾಚಾರ್ಯರಲ್ಲಿ ಪ್ರೌಢ ಶಿಕ್ಷಣ ಪಡೆದುಕೊಂಡು ಸಂಗೀತಭೂಷಣ ಆದರು (1940); ಟಿ.ಕೆ. ರಂಗಚಾರಿಯವರೊಡನೆ ಕಲಿಕೆ. ಮೈಸೂರಿಗೆ ಹಿಂದಿರುಗಿ 1943ರಲ್ಲಿ 'ಗಾನಕಲಾಮಂದಿರ'ವನ್ನು ಸ್ಥಾಪಿಸಿ ಮಕ್ಕಳಿಗೆ ಸಂಗೀತ ಶಿಕ್ಷಣ ಒದಗಿಸತೊಡಗಿದರು. ಮೈಸೂರಿನ ಮಹಾರಾಣಿಕಾಲೇಜಿನಲ್ಲೂ ಸಂಗೀತ ಕಲಿಸಿದರು.

ಬೆಂಗಳೂರಿಗೆ ಬಂದು ಇಲ್ಲಿ ನೆಲೆಸಿ 'ಗಾನಕಲಾಮಂದಿರ'ದ ಕೆಲಸವನ್ನು ಮುಂದುವರಿಸಿದರು. ತಿರುವಯ್ಯಾರಿನಲ್ಲಿ ತ್ಯಾಗರಾಜರ ಕೃತಿಗಳನ್ನು ಕಲಿಸುವ ಒಂದು ಯೋಜನೆಯನ್ನು ಕೇಂದ್ರದವರು ಕೈಗೊಂಡಾಗ ಇವರನ್ನೇ ಅಲ್ಲಿಗೆ ಕರೆಯಿಸಿಕೊಂಡರು. ಬೆಂಗಳೂರಿನ ಆಚಾರ್ಯಪಾಠಶಾಲೆ ಕಾಲೇಜಿನಲ್ಲೂ ಸಂಗೀತ ವಿಭಾಗದ ಮುಖ್ಯಸ್ಥರಾಗಿದ್ದರು.

ಲಕ್ಷ್ಯಲಕ್ಷಣ ಪ್ರೌಢಿಮೆಗೆ ಹೆಸರಾದವರು. ವಿನಿಕೆಯಲ್ಲಿ ನಿರರ್ಗಳವಾದ ನೆರವಲು, ಸ್ವಾರಸ್ಯವಾದ ಸ್ವರಕಲ್ಪನೆ, ಮನಮುಟ್ಟುವ ರಾಗಾಲಾಪನೆ. ಶಿಕ್ಷಣದಲ್ಲಿ ಶಿಸ್ತು, ಸೌಜನ್ಯ, ಔದಾರ್ಯಗಳಿಗೆ ಎತ್ತಿದ ಕೈ. ಸುಸಂಸ್ಕೃತರಾದ ವಿದ್ವಾಂಸರು, ವಿನಯಸಂಪನ್ನರು, ಶುಚಿ-ರುಚಿಯ ಬದುಕು, ಸಂಪ್ರದಾಯ ಸಂಗೀತದ ಬೆಳಕನ್ನು ಎಲ್ಲರಿಗೆ ಒದಗಿಸುವ ತವಕ ಅವರದ್ದು. ❖



ಎಂ. ಎ. ನರಸಿಂಹಾಚಾರ್

(ಜನನ 1917)

ತಂದೆ ಮಂಗಳಂಪಲ್ಲಿ ಪಟ್ಟಾಭಿರಾಮಯ್ಯ ತ್ಯಾಗರಾಜರ ಶಿಷ್ಯಪರಂಪರೆಯಲ್ಲಿ ಬಂದ ಸುಸರ್ಲ ದಕ್ಷಿಣಾಮೂರ್ತಿಶಾಸ್ತ್ರಿಯವರ ಶಿಷ್ಯ. ತಾಯಿ ಸೂರ್ಯಕಾಂತಂ ಸುವಿಖ್ಯಾತ ವಾಗ್ಗೇಯಕಾರರೆನಿಸಿದ ಪ್ರಯಾಗ ರಂಗದಾಸ ಶರ್ಮರ ಮಗಳು; ವೀಣಾ ವಾದಕಿ. ಹೀಗಾಗಿ ಬಾಲಮುರಳಿ ತನ್ನ ಎಂಟು - ಒಂಬತ್ತನೆಯ ವಯಸ್ಸಿನಲ್ಲೇ ಕಚೇರಿ ಕೊಟ್ಟ ಪ್ರತಿಭಾಶಾಲಿ. ಮುಂದೆ ಪಾರುಪಲ್ಲಿ ರಾಮಕೃಷ್ಣಯ್ಯ ಪಂತುಲು ಅವರಲ್ಲಿ ಶಿಕ್ಷಣ.

ಹದಿನೆಂಟರ ಹರಯದಲ್ಲೇ ಎಪ್ಪತ್ತೆರಡು ಮೇಳರಾಗಗಳಲ್ಲಿ ಕೃತಿ ರಚನೆ. ಮೂವತ್ತು ವಯಸ್ಸಿನಲ್ಲಿ ವಿಜಯವಾಡದ ಸಂಗೀತ ಕಲಾಶಾಲೆಯ ಪ್ರಾಂಶುಪಾಲ; ರೇಡಿಯೋ ಕಲಾವಿದ. ಜನಪ್ರಿಯ ಗಾಯಕ.

ದೇವದತ್ತವಾದ ಸುಭಗಶಾರೀರ; ನಿಸರ್ಗಸಿದ್ಧವಾದ ರಸಿಕತೆ, ಪ್ರಯೋಗಶೀಲತೆ; ಅಸಾಧಾರಣವಾದ ಧೈರ್ಯ. ಸುನಾದವಿನೋದಿ ನಿಯಂಥ ಅಪುರೂಪ ರಾಗಗಳಲ್ಲಿ ಸರಳವಾಗಿ ಕೈಯಾಡಿಸಿ ಜನಪ್ರಿಯಗೊಳಿಸಿದರು. ರಘುಪ್ರಿಯ, ನಾಸಿಕಾಭೂಷಿಣಿ, ನೀತಿಮತಿ, ರಾಗವರ್ಧನಿ ರಾಗಗಳಿಗೆ ದಾರಿ ತೋರಿಸಿದವರೇ ಅವರು. ಸುಮುಖಿ, ಮಹತಿ ಮೊದಲಾದ ಹೊಸರಾಗಗಳನ್ನೂ ಸೃಷ್ಟಿಸಿ ನಾಲ್ಕು ಸ್ವರಗಳಿಂದಲೂ ರಾಗ ಆಗಬಹುದು ಎಂಬುದನ್ನು ದೃಢಪಡಿಸಿದರು. ಅವರ ಕೃತಿರಚನೆ ತೆಲುಗು, ಸಂಸ್ಕೃತಗಳಲ್ಲಿವೆ. ಸಂಖ್ಯೆ ನಾನ್ನೂರನ್ನೂ ಮೀರಿವೆ.

ಪ್ರಶಸ್ತಿಗಳು ನೂರನ್ನೂ ಮಿರಿವೆ, ಪದ್ಮಭೂಷಣ, ಸಂಗೀತ ಕಲಾನಿಧಿ; ಆಂಧ್ರಸರಕಾರದಿಂದ 'ಘಂಟಾ ಕಂಕಣ' ಮರ್ಯಾದೆ. ಕಾಳಿದಾಸ ಸನ್ಮಾನ, ಅನ್ನಮಾಚಾರ್ಯ ಪುರಸ್ಕಾರ, ರಾಷ್ಟ್ರಪ್ರಶಸ್ತಿ. ಐದು ವಿಶ್ವವಿದ್ಯಾಲಯಗಳಿಂದ ಡಾಕ್ಟೊರೇಟ್ ಪದವಿ. ಇನ್ನೂರೈವತ್ತು ಧ್ವನಿಸುರುಳಿಗಳನ್ನು ಹೊರತಂದು ವಿಶಿಷ್ಟರಾಗಿದ್ದಾರೆ. ಚಲಚ್ಚಿತ್ರ ಪ್ರಪಂಚದಲ್ಲೂ ಸಂಗೀತ ನಿರ್ದೇಶಕರಾಗಿ, ಹಿನ್ನೆಲೆಗಾಯಕರಾಗಿ ಹೆಸರಾಗಿದ್ದಾರೆ. ❖



ಮಂಗಳಂಪಲ್ಲಿ ಬಾಲಮುರಳೀಕೃಷ್ಣ

ವೃತ್ತಿಯಲ್ಲಿ ವೈದ್ಯರು. ಕರ್ನೂಲಿನ ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರು. ಆದರೂ ಸಂಗೀತ ಕ್ಷೇತ್ರದಲ್ಲಿ ದಿಗ್ಗಜ ಎನಿಸಿದರು.

ಹುಟ್ಟಿದ್ದು 1913ರಲ್ಲಿ ಶ್ರೀಕಾಕುಳಂ ಜಿಲ್ಲೆಯ ಪ್ರಿಯಾಗ್ರಹಾರದಲ್ಲಿ. ತಂದೆ ಶ್ರೀಪಾದ ಕಾಮೇಶ್ವರರಾಯರು ಸಂಗೀತದಲ್ಲಿ ಆಸಕ್ತರು; ಅಭ್ಯಾಸವನ್ನೂ ಮಾಡಿದ್ದವರು. ಪಿನಾಕಪಾಣಿ ಸ್ವಂತ ಪ್ರಯತ್ನದಿಂದ ಸಂಪ್ರದಾಯ ಸಂಗೀತದಲ್ಲಿ ಪರಿಶ್ರಮ ಪಡೆದರು. ಲಕ್ಷ್ಯ ಲಕ್ಷಣಗಳೆರಡರಲ್ಲೂ ಪಾರಂಗತರಾದವರು. ಎಲ್ಲ ಸಂಗೀತ ವಿದ್ವಾಂಸರ ಗೌರವಾದರಗಳನ್ನು ಗಳಿಸಿದರು. ಸಂಗೀತ ರಸಾನುಭವಕ್ಕೆ ತಮ್ಮ ಬಾಳನ್ನೆ ಮುಡಿಪಿಟ್ಟವರು.

ಪದ್ಮಭೂಷಣರಾದರು (1977), ಸಂಗೀತಕಲಾನಿಧಿಯೂ ಆದರು (1983).

ವೋಲೇಟಿ ವೆಂಕಟೇಶ್ವರಲು, ನೂಕುಲ ಚಿನ್ನಸತ್ಯನಾರಾಯಣ, ನೇದನೂರಿ ಕೃಷ್ಣಮೂರ್ತಿ, ಶ್ರೀರಂಗಂ ಗೋಪಾಲರತ್ನಂ ಮೊದಲಾದ ವಿಖ್ಯಾತ ವಿದ್ವಾಂಸರು ಇವರಲ್ಲಿ ಶಿಷ್ಯವೃತ್ತಿ ಮಾಡಿದವರು. ❖



ಶ್ರೀಪಾದ ಪಿನಾಕಪಾಣಿ
(ಜನನ : 1913)

ಮೇಲುಕೋಟೆ ಮಂತ್ರಿ ಸಂಪತ್ಕುಮಾರಾಚಾರ್ಯರ ಮಗ. ತಂದೆ ವೈದಿಕರಾದರೂ ಸಂಗೀತರಸಿಕರು. ಮಗನಿಗೆ ತಂಜಾವೂರು ರಾಮಸ್ವಾಮಿ ಅಯ್ಯಂಗಾರ್ಯರ ಬಳಿ ಸಂಗೀತಗುರುಕುಲ ಮಾಡಿಸಿದರು. ಮುಂದೆ ಬಿಡಾರಂ ಕೃಷ್ಣಪ್ಪನವರೇ ಗುರುಗಳು.

ಚಿದಂಬರಂನಲ್ಲಿ ಸಂಗೀತ ಮಹಾವಿದ್ಯಾಲಯಕ್ಕೆ ಸೇರಿ ಸಭೇಶಯ್ಯರ್ ಮತ್ತು ಪೊನ್ನಯ್ಯ ಪಿಳ್ಳೆಯವರಲ್ಲಿ ಶಿಕ್ಷಣವನ್ನು ಪಡೆದುಕೊಂಡು ಸಂಗೀತ ಭೂಷಣರಾದರು. ಲಕ್ಷ್ಯ-ಲಕ್ಷಣ ಎರಡರಲ್ಲೂ ಪ್ರೌಢಿಮೆ ಅವರದ್ದು. ಕಛೇರಿ ವಿನಿಕೆಗಿಂತ ಸಂಗೀತಗುರುಗಳಾಗಿ ಜನಪ್ರೀತಿಯನ್ನು ಗಳಿಸಿಕೊಂಡರು.

ಬೆಂಗಳೂರು ಆಕಾಶವಾಣಿ ಕೇಂದ್ರದ ಸಂಗೀತ ವಿಭಾಗದಲ್ಲಿ ಮೂವತ್ತು ವರ್ಷಗಳಿಗೂ ಮೀರಿ ಸೇವೆ ಸಲ್ಲಿಸಿದರು. ಅಲ್ಲಿಯೂ ಬಾನುಲಿ ಸಂಗೀತಶಿಕ್ಷಣವನ್ನು ಕ್ರಮಬದ್ಧವಾಗಿ ನೀಡಿ ನೂರಾರು ಸಂಗೀತರಸಿಕರಿಗೆ ಸಂಗೀತ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದರು. ಅವರ ಹಾಡಿಕೆಯಲ್ಲಿ ಸಂಪ್ರದಾಯ ಶುದ್ಧಿ, ಸಾಹಿತ್ಯ ಶುದ್ಧಿ, ಶ್ರುತಿಶುದ್ಧಿ, ಸ್ವರಶುದ್ಧಿಗಳು ಎದ್ದು ಕಾಣುತ್ತಿದ್ದುವು.

ಅವರು ಪ್ರಮುಖ ವಾಗ್ಗೇಯಕಾರರ ಕೃತಿಗಳನ್ನು ಹಾಡುವಾಗ ಬಳಸುತ್ತಿದ್ದ ಪಾಠಾಂತರ ಅಚ್ಚುಕಟ್ಟಾಗಿರುತ್ತಿದ್ದಿತು. ಚಿದಂಬರಂನಲ್ಲಿರುವಾಗಲೇ ಹಲವು ಮೂಲಗಳಿಂದ ಕೃತಿಗಳನ್ನು ಸಂಗ್ರಹ ಮಾಡಿದ್ದರು. ಆ ಕೃತಿಗಳ ಸಂಗೀತ ಸಾಹಿತ್ಯಗಳನ್ನು ಕುರಿತಂತೆ ವಿಶೇಷವಾದ ಅಧ್ಯಯನವನ್ನೂ ಕೈಗೊಂಡಿದ್ದರು.

ಶುದ್ಧ ಶಾಸ್ತ್ರೀಯ ಸಂಗೀತಕ್ಕೇ ಮೀಸಲಾದ ಬದುಕು. ರಸಿಕರು, ಸಹೃದಯರು, ಸ್ನೇಹಪರರು, ವಿನೋದಶೀಲರು, ಸದಾಚಾರ ಸಂಪನ್ನರು. ❖



ಎಂ. ಎಸ್. ಶೆಲ್ವಪುಳ್ಳೆ ಅಯ್ಯಂಗಾರ್

(1915 - 1993)

ಹುಟ್ಟಿದ್ದು ಪೆನುಕೊಂಡೆ; ಹಿರಿಯರು ಶ್ರೀರಂಗಪಟ್ಟಣದವರು. ಓದಿದ್ದು ಅನಂತಪುರದ ಕಾಲೇಜಿನಲ್ಲಿ (ಬಿ.ಎ.), ಚೆನ್ನೈನಲ್ಲಿ (ಬಿ.ಎಲ್.). ವಕೀಲಿವೃತ್ತಿ ಬಳ್ಳಾರಿಯಲ್ಲಿ, ಅನಂತಪುರದಲ್ಲಿ. ಆದರೆ ಒಲವೆಲ್ಲ ಸಂಗೀತದ ಮೇಲೆ.

ಏಳು ವರ್ಷದವರಿದ್ದಾಗಲೇ ಪಲ್ಲವಿ ಗಾಯನಕ್ಕೆ ಹೆಸರಾಗಿದ್ದ ಪಕ್ಕ ಹನುಮಂತಾಚಾರ್ಯರಲ್ಲಿ ಸಂಗೀತ ಶಿಕ್ಷಣ. ತಿರುಪತಿ ರಂಗಾಚಾರ್ಯರಲ್ಲೂ ಕಲಿಕೆ. ಮುಂದೆ ಮಹಾರಾಜಪುರಂ ವಿಶ್ವನಾಥಯ್ಯರಲ್ಲಿ ಶಿಷ್ಯವೃತ್ತಿ; ಟಿ.ಎಲ್. ವೆಂಕಟರಾಮಯ್ಯರಿಂದ ಮಾರ್ಗದರ್ಶನ. ಟೈಗರ್ ವರದಾಚಾರ್ಯರಲ್ಲಿ ಪಲ್ಲವಿ, ಮನೋಧರ್ಮ ಸಂಗೀತದ ಗ್ರಹಣ, ಮೈಸೂರು ವಾಸುದೇವಾಚಾರ್ಯರು, ದ್ವಾರಂ ವೆಂಕಟಸ್ವಾಮಿ ನಾಯ್ಡು ಅವರಿಂದ ರಾಗ-ತಾಳ-ಪಲ್ಲವಿ ವಿನಿಕೆಯ ಕಲಿಕೆ.

ಇಷ್ಟೆಲ್ಲ ಆದಮೇಲೆ ವೃತ್ತಿ ಪ್ರವೃತ್ತಿಯಂತೆಯೇ. ಆಕಾಶವಾಣಿಯಲ್ಲಿ ಸಂಗೀತ ನಿರ್ದೇಶಕರು, ಕರ್ನಾಟಕ ಸಂಗೀತದ ಕೇಂದ್ರ ಕಾಲೇಜಿನ ಪ್ರಿನ್ಸಿಪಲ್, ಚೆನ್ನೈ ಸಂಗೀತ ಅಕಾಡಮಿಯ ಶಿಕ್ಷಕರ ಕಾಲೇಜಿನ ಮುಖ್ಯಸ್ಥರು. ಸಂಗೀತದ ಅನೇಕ ಸಂಸ್ಥೆಗಳಲ್ಲಿ ಸದಸ್ಯರು.

ದಾಸ ಸಾಹಿತ್ಯ-ಸಂಗೀತಗಳಲ್ಲಿ ಎತ್ತಿದ ಕೈ. ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್, ಎಂ.ಎಸ್. ಸುಬ್ಬುಲಕ್ಷ್ಮಿ, ಜಿ.ಎನ್.ಬಿ. ಮೊದಲಾದವರಿಗೆ ದಾಸರ ಕೃತಿಗಳ ಗಾಯನವನ್ನು ಕಲಿಸಿದರು. ಲಕ್ಷ್ಯ-ಲಕ್ಷಣ ಎರಡೂ ಪ್ರಕಾರಗಳಲ್ಲಿ ನಿಸ್ಸೀಮರು. ಬೋಧನೆಯಲ್ಲಿ ಚತುರರಾಗಿದ್ದಂತೆ ಸಭಾಗಾಯನದಲ್ಲೂ ಪರಿಣತರು.

ಶಿಷ್ಯರಲ್ಲಿ ಅವರ ಮಗ ಪೂರ್ಣಪ್ರಜ್ಞರಾವ್ ಮತ್ತು ಪ್ರಪಂಚಂ ಸೀತಾರಾಮ್ ಪ್ರಮುಖರು. ತ್ರಿಚೂರು ರಾಮಚಂದ್ರನ್ ಇವರಲ್ಲಿ ದೀಕ್ಷಿತರ ಕೆಲವು ಕೃತಿಗಳನ್ನು ಕಲಿತರು. ಸಂಗೀತವನ್ನು ಕುರಿತಂತೆ ಇಂಗ್ಲೀಷಿನಲ್ಲಿ ಹಲವು ಪ್ರಬಂಧಗಳನ್ನು ಬರೆದಿದ್ದಾರೆ. ❖



ಸಂಧ್ಯಾವಂದನಂ ಶ್ರೀನಿವಾಸರಾವ್

(1918 - 1994)

ಚಿಂತಲಪಲ್ಲಿಯ ಮನೆತನ ಸಂಗೀತಕ್ಕೆ ಹೆಸರಾದುದು. ಕೋಲಾರ ಜಿಲ್ಲೆಗೆ ಸೇರಿದ ಹುಣಸೇನಹಳ್ಳಿ, ತೆಲುಗು ಪ್ರಭಾವದಿಂದ ಚಿಂತಲಪಲ್ಲಿಯಾಯಿತು. ವೆಂಕಟರಾಯರಿಗೆ ಚಿಕ್ಕಪ್ಪ ಭಾಸ್ಕರರಾಯರಲ್ಲೇ ಮೊದಲ ಶಿಕ್ಷಣ. ಹಾನಗಲ್ಲು ಚಿದಂಬರಯ್ಯನವರಲ್ಲಿ (ಮೈಸೂರು ಸದಾಶಿವರಾಯರ ಶಿಷ್ಯ) ಪ್ರೌಢಶಿಕ್ಷಣ; ನೇಕಾರಪಟ್ಟಿ ಪಲ್ಲವಿ ಶೇಷಯ್ಯರಿಂದಲೂ ಪಕ್ಕ ಹನುಮಂತಾಚಾರ್ಯರಿಂದಲೂ ಮಾರ್ಗದರ್ಶನ.

ಮೈಸೂರು ಆಸ್ಥಾನ ವಿದ್ವಾಂಸರು; 'ಸಂಗೀತರತ್ನ'. ಮುತ್ತಯ್ಯ ಭಾಗವತರೇ ಇವರ ಸಂಗೀತವನ್ನು ಮೆಚ್ಚಿಕೊಂಡಿದ್ದರು. ಉತ್ತಮವಾದ ಮನೋಧರ್ಮ; ಹೃದ್ಯವಾದ ಶಾರೀರ; ಅದ್ಭುತವಾದ ಕಲ್ಪನಾಶಕ್ತಿ. ಲಕ್ಷ್ಯ-ಲಕ್ಷಣ ಎರಡರಲ್ಲೂ ಎತ್ತಿದ ಕೈ.

ಹಲವು ಸಂಸ್ಥಾನಗಳಿಂದ ಸನ್ಮಾನಿತರು. ರಾಷ್ಟ್ರಾಧ್ಯಕ್ಷರ ಪ್ರಶಸ್ತಿಯನ್ನೂ ಗಳಿಸಿಕೊಂಡರು (1967). ಆಂಧ್ರಪ್ರದೇಶದ ಸಂಗೀತ ನಾಟಕ ಅಕಾಡಮಿಯ 'ಫೆಲೋ' ಆಗಿದ್ದರು. ತಮ್ಮ ವಿನಯ, ವಿದ್ಯೆ, ವೈಶಾರದ್ಯಗಳಿಂದ ಜನಪ್ರಿಯರಾದವರು.

ಶಿಷ್ಯರಲ್ಲಿ ಮುಖ್ಯರಾದವರು ಅವರ ಮಗ ಚಿಂತಲಪಲ್ಲಿ ರಾಮಚಂದ್ರರಾಯರು; ಇವರು ತಂದೆಯಿಂದಲೇ ಸಂಗೀತವನ್ನು ಕಲಿತು ಅನಂತರ ಚಿದಂಬರದ ಸಂಗೀತ ಕಾಲೇಜಿನಿಂದ ಸಂಗೀತಭೂಷಣರೂ ಆದರು. ಆಗ ತಂಜಾವೂರು ಪೊನ್ನಯ್ಯ ಪಿಳ್ಳೆ ಮತ್ತು ಸಭೇಶ ಅಯ್ಯರಿಂದ ಮಾಗದರ್ಶನ. ❖



ಚಿಂತಲಪಲ್ಲಿ ವೆಂಕಟರಾಯರು

(1875 - 1969)

ಸ್ವತಃ ಸಂಗೀತಗಾರರೆಂದು ಕಾಣಿಸಿಕೊಳ್ಳದಿದ್ದರೂ, ಸಂಗೀತವನ್ನು ಕುರಿತಂತೆ ಪರಮಾದರ ಇದ್ದ ಅರಸರು. ಮೈಸೂರು ರಾಜಮನೆತನದಲ್ಲಿ ಇವರು ರಾಜರ್ಷಿಯೆಂದೇ ಪ್ರಖ್ಯಾತರಾಗಿದ್ದರು. ಮೈಸೂರು ಸಂಸ್ಥಾನಕ್ಕೆ ಎಲ್ಲೆಲ್ಲೂ ಮರ್ಯಾದೆ ದೊರೆತದ್ದು ಇವರಿಂದಲೇ.

ಅವರ ಆಸ್ಥಾನದಲ್ಲಿದ್ದ ಸಂಗೀತವಿದ್ವಾಂಸರು ಎಲ್ಲರೂ ಪ್ರತಿಭಾವಂತರೇ. ಶೇಷಣ್ಣ, ಸುಬ್ಬಣ್ಣ, ಬಿಡಾರಂ, ಮುತ್ತಯ್ಯ ಭಾಗವತರು, ವಾಸುದೇವಾಚಾರ್ಯರು, ಚೌಡಯ್ಯ, ದೇವೇಂದ್ರಪ್ಪ, ಗೊಟ್ಟುವಾದ್ಯಂ ನಾರಾಯಣಯ್ಯಂಗಾರ್ ಹೀಗೆ ಲೆಕ್ಕವೇ ಇಲ್ಲ. 'ಅಭಿನವ ಭೋಜ' ಎಂಬ ಕೀರ್ತಿ ಅವರದ್ದು.

ಎಳವೆಯಲ್ಲಿ ತಾವೇ ಸಂಗೀತವನ್ನು ಅಧ್ಯಯನ ಮಾಡಿದ್ದರು. ವಾಸುದೇವಾಚಾರ್ಯರಿಂದ ಹಾಡಿಕೆ, ಶೇಷಣ್ಣನವರಿಂದ ಪಿಟೀಲು ವಾದನ, ವೆಂಕಟೇಶಯ್ಯಂಗಾರರಿಂದ ಕೊಳಲು ವಾದನ ಕಲಿತಿದ್ದರು; ಬಿಡಾರಂ ಕೃಷ್ಣಪ್ಪನವರೂ ಗುರುಗಳೇ. ತಮ್ಮ ಹದಿನಾರನೆಯ ವಯಸ್ಸಿನಲ್ಲೇ ಸಾಕ್ಸೋಫೋನ್ ನುಡಿಸುತ್ತಿದ್ದರು. ಐರೋಪ್ಯ ಸಂಗೀತದಲ್ಲಿ ತುಂಬ ಆಸಕ್ತಿಯನ್ನು ತಳೆದಿದ್ದು ಅರಮನೆಯಲ್ಲೇ ಗೋಷ್ಠಿವಿನಿಕೆಗಳನ್ನು ಏರ್ಪಡಿಸುತ್ತಿದ್ದರು. ಹಿಂದೂಸ್ಥಾನೀ ಸಂಗೀತದಲ್ಲೂ ಅಪಾರ ಪರಿಶ್ರಮವನ್ನು ಪಡೆದಿದ್ದರು. ವಾದ್ಯಮೇಳವೆಂದರೆ ಪ್ರೀತಿ.

ತಮ್ಮ ಆಸ್ಥಾನ ವಿದ್ವಾಂಸರಿಂದ ಹೊಸ ಕೃತಿ ರಚನೆಗಳನ್ನು ಮಾಡಿಸುತ್ತಿದ್ದರು. ಮುತ್ತಯ್ಯ ಭಾಗವತರ ಕನ್ನಡದ ಚಾಮುಂಡೇಶ್ವರೀ ಅಷ್ಟೋತ್ತರ ಶತಕೃತಿಗಳಿಗೆ ಇವರೇ ಪ್ರೇರಕರು. ಹಲವು ರಾಗಮಾಲಿಕೆಗಳನ್ನು ರಚಿಸುವಂತೆ ತಮ್ಮ ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದರು. ಅವರ ಆಪ್ತವರ್ಗದಲ್ಲಿ ವೈಣಿಕಪ್ರವೀಣ ಸುಬ್ಬಣ್ಣನವರೂ ಗೊಟ್ಟುವಾದ್ಯಂ ನಾರಾಯಣಯ್ಯಂಗಾರ್ಯರೂ ಇದ್ದರು. ಗೊಟ್ಟುವಾದ್ಯದಲ್ಲಿ ಪರಿಷ್ಕಾರ ಸಂಶೋಧನೆಗಳಿಗೆ ಒತ್ತಾಯ ಮಾಡಿದವರು ಇವರೇ.

ಸಂಗೀತ ವಿಮರ್ಶೆ ಇವರ ಪ್ರಿಯ ಹವ್ಯಾಸವಾಗಿದ್ದಿತು. ❖

ಕೃಷ್ಣರಾಜ ವಡೆಯರ್ (ನಾಲ್ವಡಿ)
(1895 - 1940)

ಹೆಸರು ಎಸ್. ರಾಮರಾವ್; ಹುಡುಗನಾಗಿದ್ದಾಗ ಪ್ರೀತಿಯಿಂದ ಮಹಾರಾಣಿಯವರು ಕರೆದದ್ದು 'ಚಿಕ್ಕರಾಮು' ಎಂದು. ಅದೇ ಹೆಸರು ನಿಂತಿತು. ಸಂಗೀತಗಾರರು, ನಟರು, ವಾಗ್ಗೇಯಕಾರ; ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯರು, ಸರಸಿಗಳು, ರಸಿಕರು. ಐದಾರು ವರ್ಷದವರಿದ್ದಾಗಲೇ ಬಿಡಾರಂ ಕೃಷ್ಣಪ್ಪನವರಲ್ಲಿ ಶಿಕ್ಷಣ; ಕರಿಗಿರಿರಾಯರ ಮಾರ್ಗದರ್ಶನ, ವೀಣೆ ಸುಬ್ಬಣ್ಣನವರಲ್ಲಿ ಪ್ರೌಢಶಿಕ್ಷಣ, ತಿರುವಯ್ಯಾರು ಸುಬ್ರಹ್ಮಣ್ಯಯ್ಯರಿಂದ ಪಲ್ಲವಿಗಾಯನದ ಕಲಿಕೆ.

ಹುಡುಗನಾಗಿದ್ದಾಗಲೆ ಶಾಕುಂತಲ ಕರ್ನಾಟಕ ಸಭಾ ಕಂಪೆನಿಯ ನಾಟಕಗಳಲ್ಲಿ ಬಾಲನಟನಾಗಿ ಹೆಸರು ಮಾಡಿಕೊಂಡರು. ಆದರೆ ಶಾಸ್ತ್ರೀಯ ಸಂಗೀತದತ್ತ ಒಲವು ಮೂಡಿ ಅದರಲ್ಲೇ ನೈಪುಣ್ಯವನ್ನು ಪಡೆದುಕೊಂಡರು. ಪ್ರವಾಸ ಮಾಡಿ ಸಂಗೀತ ವಿನಿಕೆಗಳನ್ನು ನಡೆಸಿದರು.

ಮನೋಧರ್ಮಸಂಗೀತ ಅವರದ್ದು. ಪಲ್ಲವಿ, ನೆರವಲ್ಲು, ಸ್ವರಕಲ್ಪನೆಗಳಲ್ಲಿ ಅಸಾಧಾರಣ ಪ್ರತಿಭೆ. ತಾಳ-ಲಯಗಳಲ್ಲಂತೂ ಎಣೆಯಿಲ್ಲದ ಪ್ರೌಢಿಮೆ. 'ತಾಳಬ್ರಹ್ಮ'ನೆಂದೇ ಹೆಸರಾದರು. ಮೈಸೂರು ವಾಸುದೇವಾಚಾರ್ಯರ ಕೃತಿಗಳನ್ನು ಹಾಡಿ ಪ್ರಚಾರಕ್ಕೆ ತಂದವರಲ್ಲಿ ಮೊದಲಿಗರು. ಜನಪ್ರಿಯರಾದರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇವರ ಹಾಡಿಕೆಯೆಂದರೆ ಬಲು ಮೆಚ್ಚಿಗೆ.

ಅವರ ಶಿಷ್ಯರಲ್ಲಿ ದೇವೇಂದ್ರಪ್ಪ, ಬೆಂಗಳೂರು ನಾಗರತ್ನಮ್ಮ, ಅರಕೆರೆ ನಾರಾಯಣರಾಯರು, ನಟ ನಾಗೇಂದ್ರರಾಯರು ಪ್ರಮುಖರು.

ಐರೋಪ್ಯ ಸಂಗೀತದಲ್ಲೂ ಪರಿಶ್ರಮವಿದ್ದಿತು; ಗ್ಲಾಸ್‌ತರಂಗ್ ಎಂಬ ವಾದ್ಯವನ್ನೂ ನುಡಿಸುತ್ತಿದ್ದರು. ವರ್ಣ, ಸ್ವರಜತಿ, ತಿಲ್ಲಾನಗಳನ್ನು ರಚಿಸಿದ್ದಾರೆ. ❖

ಹೆಸರು ಎಸ್. ರಾಮರಾವ್; ಹುಡುಗನಾಗಿದ್ದಾಗ ಪ್ರೀತಿಯಿಂದ ಮಹಾರಾಣಿಯವರು ಕರೆದದ್ದು 'ಚಿಕ್ಕರಾಮು' ಎಂದು. ಅದೇ ಹೆಸರು ನಿಂತಿತು. ಸಂಗೀತಗಾರರು, ನಟರು, ವಾಗ್ಗೇಯಕಾರ; ಎಲ್ಲಕ್ಕಿಂತ ಹೆಚ್ಚಾಗಿ ಸಹೃದಯರು, ಸರಸಿಗಳು, ರಸಿಕರು. ಐದಾರು ವರ್ಷದವರಿದ್ದಾಗಲೇ ಬಿಡಾರಂ ಕೃಷ್ಣಪ್ಪನವರಲ್ಲಿ ಶಿಕ್ಷಣ; ಕರಿಗಿರಿರಾಯರ ಮಾರ್ಗದರ್ಶನ, ವೀಣೆ ಸುಬ್ಬಣ್ಣನವರಲ್ಲಿ ಪ್ರೌಢಶಿಕ್ಷಣ, ತಿರುವಯ್ಯಾರು ಸುಬ್ರಹ್ಮಣ್ಯಯ್ಯರಿಂದ ಪಲ್ಲವಿಗಾಯನದ ಕಲಿಕೆ.

ಹುಡುಗನಾಗಿದ್ದಾಗಲೆ ಶಾಕುಂತಲ ಕರ್ನಾಟಕ ಸಭಾ ಕಂಪೆನಿಯ ನಾಟಕಗಳಲ್ಲಿ ಬಾಲನಟನಾಗಿ ಹೆಸರು ಮಾಡಿಕೊಂಡರು. ಆದರೆ ಶಾಸ್ತ್ರೀಯ ಸಂಗೀತದತ್ತ ಒಲವು ಮೂಡಿ ಅದರಲ್ಲೇ ನೈಪುಣ್ಯವನ್ನು ಪಡೆದುಕೊಂಡರು. ಪ್ರವಾಸ ಮಾಡಿ ಸಂಗೀತ ವಿನಿಕೆಗಳನ್ನು ನಡೆಸಿದರು.

ಮನೋಧರ್ಮಸಂಗೀತ ಅವರದ್ದು. ಪಲ್ಲವಿ, ನೆರವಲ್ಲು, ಸ್ವರಕಲ್ಪನೆಗಳಲ್ಲಿ ಅಸಾಧಾರಣ ಪ್ರತಿಭೆ. ತಾಳ-ಲಯಗಳಲ್ಲಂತೂ ಎಣೆಯಿಲ್ಲದ ಪ್ರೌಢಿಮೆ. 'ತಾಳಬ್ರಹ್ಮ'ನೆಂದೇ ಹೆಸರಾದರು. ಮೈಸೂರು ವಾಸುದೇವಾಚಾರ್ಯರ ಕೃತಿಗಳನ್ನು ಹಾಡಿ ಪ್ರಚಾರಕ್ಕೆ ತಂದವರಲ್ಲಿ ಮೊದಲಿಗರು. ಜನಪ್ರಿಯರಾದರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಇವರ ಹಾಡಿಕೆಯೆಂದರೆ ಬಲು ಮೆಚ್ಚಿಗೆ.

ಅವರ ಶಿಷ್ಯರಲ್ಲಿ ದೇವೇಂದ್ರಪ್ಪ, ಬೆಂಗಳೂರು ನಾಗರತ್ನಮ್ಮ, ಅರಕೆರೆ ನಾರಾಯಣರಾಯರು, ನಟ ನಾಗೇಂದ್ರರಾಯರು ಪ್ರಮುಖರು.

ಐರೋಪ್ಯ ಸಂಗೀತದಲ್ಲೂ ಪರಿಶ್ರಮವಿದ್ದಿತು; ಗ್ಲಾಸ್‌ತರಂಗ್ ಎಂಬ ವಾದ್ಯವನ್ನೂ ನುಡಿಸುತ್ತಿದ್ದರು. ವರ್ಣ, ಸ್ವರಜತಿ, ತಿಲ್ಲಾನಗಳನ್ನು ರಚಿಸಿದ್ದಾರೆ. ❖



ಚಿಕ್ಕರಾಮರಾಯರು
(1890 - 1945)

ತುಮಕೂರು ಜಿಲ್ಲೆಯವರಾದ ಇವರ ತಂದೆ ಪದ್ಮನಾಭಯ್ಯನವರು ಮುಮ್ಮಡಿಯವರ ಕಾಲದಿಂದ ಆಸ್ಥಾನ ವಿದ್ವಾಂಸರು. ಅವರಿಂದಲೇ ಇವರಿಗೆ ವೀಣಾವಾದನದಲ್ಲೂ ಗಾಯನದಲ್ಲೂ ಶಿಕ್ಷಣ. ಹದಿನಾರನೆಯ ವಯಸ್ಸಿಗೇ ಆಸ್ಥಾನ ವಿದ್ವಾಂಸರು. ನಾಲ್ವಡಿ ಕೃಷ್ಣರಾಜ ಒಡೆಯರಿಗೆ ತುಂಬ ಬೇಕಾದವರು; ಅವರ ವಾದ್ಯಗೋಷ್ಠಿಗೆ ಸಂಗೀತ ರಚನೆ ಮಾಡುತ್ತಿದ್ದರು.

ಕರಿಗಿರಿರಾಯರಲ್ಲಿ ಹಾಡಿಕೆ, ವಾಸುದೇವಾಚಾರ್ಯರಿಂದ ಮಾರ್ಗದರ್ಶನ; ಶೇಷಣ್ಣನವರಲ್ಲಿ ಎಂಟುವರ್ಷಗಳ ಪ್ರೌಢಶಿಕ್ಷಣ. ಮೂವತ್ತನೆಯ ವಯಸ್ಸಿನಲ್ಲೇ ತಿರುವಾಂಕೂರು ಸಂಸ್ಥಾನದ ಅರಸರಿಂದ ಸನ್ಮಾನ.

ಪ್ರತಿಭಾವಂತ ವೈಣಿಕರು, ಗಾಯಕರು. ವಾಗ್ಗೇಯಕಾರರೂ ಆಗಿದ್ದರು. ಸ್ವರಜತಿ, ತಿಲ್ಲಾನ, ವರ್ಣ, ರಾಗಮಾಲಿಕೆ ಮೊದಲಾದ ಅನೇಕ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದವರು. ಮೂರೇ ಸ್ವರಗಳುಳ್ಳ ಸ್ವಯಂಭೂಸ್ವರರಾಗವು ಇವರ ನಿರ್ಮಾಣವೇ, ಅದರಲ್ಲಿ ಕೃತಿಯೊಂದನ್ನೂ ರಚಿಸಿದರು. ಮೈಸೂರಿನ ಕುರುಡರ ಮೂಗರ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. 'ವೈಣಿಕಪ್ರವೀಣ'ರೆಂಬ ಬಿರುದು.

ಇವರ ಶಿಷ್ಯರಲ್ಲಿ ಅವರ ಮಗನೇ ಆದ ಅನಂತಪದ್ಮನಾಭರಾಯರು ಮತ್ತು ನಾಟನಹಳ್ಳಿ ಚೆನ್ನಕೇಶವಯ್ಯ ಪ್ರಮುಖರು.

ದೈವಭಕ್ತರು; ಸರಳವಾದ ನೆಮ್ಮದಿಯ ಬದುಕು. ಸಂಸ್ಕೃತದಲ್ಲೂ ಪಾಂಡಿತ್ಯವನ್ನು ಪಡೆದುಕೊಂಡವರು; ಅಧ್ಯಾತ್ಮ ರಸಿಕರು. ಸಂಗೀತ ಅವರಿಗೆ ಭಗವದುಪಾಸನೆಯ ಬಗೆ. ❖

ವೀಣೆ ಶಿವರಾಮಯ್ಯ

(1886 - 1946)

ತಂದೆ ಎಸ್. ವಿ. ವಿಜಯರಾಘವಾಚಾರ್ಯರು, ಎಸ್. ಎಸ್. ವಿ. ಎಂದು ಹೆಸರಾಂತ ತಮಿಳು ಬರಹಗಾರರು; ವೃತ್ತಿಯಲ್ಲಿ ವಕೀಲರು. ಅವರ ಪತ್ನಿ ಪಂಕಜಮ್ಮಾಳ್ ಸಂಗೀತ ವಿದುಷಿ. ತಾಯಿಯಿಂದಲೇ ಪಾರ್ಥಸಾರಥಿಗೆ ಮೊದಲ ಸಂಗೀತ ಶಿಕ್ಷಣ; ಓದಿಗಿಂತ ಹೆಚ್ಚು ಸಂಗೀತಕ್ಕೇ ಒಲಿದರು.

ಮುಂದೆ ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ಸಭೇಶಯ್ಯರ್ ಮುಂತಾದ ದಿಗ್ಗಜರ ಬಳಿ ಕಲಿತು 'ಸಂಗೀತಭೂಷಣ'ರಾದರು. ಟೈಗರ್ ವರದಾಚಾರ್ಯರ ಮಾರ್ಗದರ್ಶನ. ಬಾಲಪ್ರತಿಭೆ. ತಿರುವಣ್ಣಾಮಲೆಯಲ್ಲಿ ಮೊಟ್ಟಮೊದಲ ಕಚೇರಿ ನೀಡಿದಾಗ ಇಪ್ಪತ್ತು ವರ್ಷಗಳಷ್ಟೆ. ಸೋದರ ಸೌಂದರರಾಜನ್ ಜೊತೆ ಅನೇಕ ವಿನಿಕೆಗಳನ್ನು ನಡೆಸಿ ಯುಗಳಗಾಯಕರೆಂದು ಹೆಸರಾದರು. (1954ರ ವರೆಗೆ).

ಪಾರ್ಥಸಾರಥಿ ಮಧುರಕಂಠದ ಮನೋಜ್ಞಗಾಯಕರು; ಅವರ ಹಾಡಿಕೆಯಲ್ಲಿ ಪ್ರೌಢಿಮೆ ಎದ್ದು ಕಾಣುತ್ತಿತ್ತು; ಮನೋಧರ್ಮ ಉತ್ತಮವಾದುದು; ಕಲ್ಪನಾಚತುರರು. ಪ್ರಸಿದ್ಧವಲ್ಲದ ರಾಗಗಳನ್ನೆ ಎತ್ತಿಕೊಂಡು ಅವಕ್ಕೆ ಜೀವ ತುಂಬಿಸುವುದರಲ್ಲಿ ಕುಶಲರು. ಜನಪ್ರಿಯಗಾಯಕರಾದುದು ಆಶ್ಚರ್ಯವೇನಲ್ಲ. ವೀಣಾವಾದನದಲ್ಲೂ ಸಿದ್ಧಹಸ್ತರು. 'ಸಂಗೀತಸಾಮ್ರಾಟ'ರೆನಿಸಿಕೊಂಡರು.

ಹಲವಾರು ಕಾಲೇಜುಗಳಲ್ಲಿ ಸಂಗೀತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಅನಂತರ ತಿರುಚಿರಪಳ್ಳಿಯ ಆಕಾಶವಾಣಿ ಕೇಂದ್ರದಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಗಳು ಸಂಗೀತ ನಿರ್ದೇಶಕರಾಗಿದ್ದರು. ಒಳ್ಳೆಯ ಬರಹಗಾರರು. ಸಂಗೀತವನ್ನು ಕುರಿತಂತೆ ತಮಿಳಿನಲ್ಲೂ ಇಂಗ್ಲೀಷಿನಲ್ಲೂ ಹಲವಾರು ಪ್ರಬಂಧಗಳನ್ನು ಪ್ರಕಟಿಸಿದರು. 'ಕಲ್ಕಿ' ಎಂಬ ಹೆಸರಾದ ತಮಿಳು ವಾರಪತ್ರಿಕೆಯಲ್ಲಿ ಸಂಗೀತ ವಿಭಾಗದ ಸಂಪಾದಕರೂ ಆಗಿದ್ದರು.

ಮಕ್ಕಳಿಗೆ ಸಂಗೀತ ಕಲಿಸುವ ಸಂಕಲ್ಪವಿದ್ದವರು. ಇದಕ್ಕಾಗಿ ಆಕಾಶವಾಣಿಯಿಂದ ಅನೇಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಿದ್ದರು. ❖



ಎಸ್. ವಿ. ಪಾರ್ಥಸಾರಥಿ

(1886 - 1946)

ಸಂಗೀತಸಾಮ್ರಾಜ್ಯದಲ್ಲಿ ಅಭೂತಪೂರ್ವ ಪ್ರಖ್ಯಾತಿಯನ್ನು ಪಡೆದುಕೊಂಡ ಪ್ರತಿಭಾಶಾಲಿ ಗಾಯಕಿ. ಕರ್ನಾಟಕ ಸಂಗೀತ ಸಂಪ್ರದಾಯಕ್ಕೆ ವಿಶ್ವದಲ್ಲೆ ಹಿರಿಮೆಯನ್ನು ಗಳಿಸಿಕೊಟ್ಟಾಕೆ. ಗಾಯನದಲ್ಲಿ ಮಾಧುರ್ಯ, ಶಾರೀರದ ಸೊಗಸು, ಹಾಡಿಕೆಯಲ್ಲಿ ಸೊಬಗು, ಭಜನೆಗೆ ಒಲಿದ ಮೃದು ಹೃದಯ; ಶಿಸ್ತು, ಸೌಜನ್ಯ, ವಿನಯ, ಔದಾರ್ಯ, ಭಕ್ತಿಗಳಿಗೆ ವಿಶಿಷ್ಟವಾದ ವ್ಯಕ್ತಿತ್ವ.

ತಾಯಿ ಷಣ್ಮುಖಿಂ ವಡಿವೂ ಗಾಯಕಿ, ವೀಣಾವಾದಕಿ. ಸುಬ್ಬುಲಕ್ಷ್ಮಿಗೆ ತಾಯಿಯೇ ಮೊದಲ ಗುರು; ಅನಂತರ ಶೆಮ್ಮಂಗುಡಿ ಶ್ರೀನಿವಾಸಯ್ಯರಲ್ಲಿ ಕಲಿಕೆ. ಚಲಚ್ಚಿತ್ರರಂಗಕ್ಕೆ ಪ್ರವೇಶ ಮಾಡಿ ಶಕುಂತಲೆಯಾಗಿ, ಭಕ್ತಮೀರಾಬಾಯಿಯಾಗಿ ಹೆಸರಾಂತವರು. ಹದಿನೆಂಟನೆಯ ವಯಸ್ಸಿನಲ್ಲೇ ಮೊದಲ ಕಚೇರಿ ನಡೆಸಿ ಜಯಭೇರಿಯನ್ನು ಬಾಜಿಸಿ ಇಂದಿನವರೆಗೂ ಜನಪ್ರೀತಿಯನ್ನೂ ಅಜರಾಮರವಾದ ಯಶಸ್ಸನ್ನೂ ಗಳಿಸಿ ಉಳಿಸಿಕೊಂಡವರು.

ಕಲ್ಕಿ ಪತ್ರಿಕೆಯ ಟಿ. ಸದಾಶಿವಂ ಅವರೊಂದಿಗೆ ಮದುವೆಯಾದಮೇಲೆ ಬದುಕಿಗೊಂದು ಹೊಸ ತಿರುವು; ಅವರ ಪ್ರೋತ್ಸಾಹ, ಮಾರ್ಗದರ್ಶನ, ನಿರ್ದೇಶನಗಳಿಂದ ಈಕೆಯ ಮುನ್ನಡೆ. ಸಂಸ್ಥೆಗಳ ಸಹಾಯಕ್ಕೆಂದು ಸಂಗೀತಸೇವೆ. 'ಸಂಗೀತಕಲಾನಿಧಿ', 'ಪದ್ಮಭೂಷಣ'. ಜವಾಹರಲಾಲ ನೆಹ್ರು, ಚಕ್ರವರ್ತಿ ರಾಜಗೋಪಾಲಾಚಾರ್ಯ, ಕಾಂಚಿಪೀಠದ ಹಿರಿಯ ಆಚಾರ್ಯರು ಮೊದಲಾದವರ ವಿಶ್ವಾಸಾದರಗಳನ್ನು ಸೂರೆಗೊಂಡರು.

ಅವರ ಸಂಗೀತವೆಂದರೆ ಸಂಪ್ರದಾಯದ ಸೌಂದರ್ಯವನ್ನು, ಪ್ರೌಢಿಮೆಯನ್ನು, ಪ್ರತಿಭೆಯನ್ನು ಎತ್ತಿ ತೋರಿಸುವಂಥದು. ರಾಗಾಲಾಪನೆಯಲ್ಲಿ ಅಚ್ಚುಕಟ್ಟು, ಕೃತಿ ನಿರೂಪಣೆಯಲ್ಲಿ ಅಸ್ಖಲಿತವಾದ ವಾಣಿ, ಅನೇಕ ಭಾಷೆಗಳ ಕೃತಿಗಳನ್ನು ಹಾಡುವ ನೈಪುಣ್ಯ. ಹಲವು ಗುರುಗಳಿಂದ ಹೊಸ ಕೃತಿಗಳನ್ನು ಕಲಿತುಕೊಳ್ಳುವ ಕಾತರ. ವಿದ್ವಜ್ಜನರಲ್ಲಿ ಗೌರವಬುದ್ಧಿ, ರಸಿಕರಲ್ಲಿ ಆದರ, ಹಿರಿಯರಲ್ಲಿ ಭಕ್ತಿ ಇವುಗಳಿಂದ ಕಂಗೊಳಿಸುವ ಉದಾತ್ತನಿಲುವು.

ಹರಿದಾಸರ ಕೃತಿಗಳನ್ನು ಭಾವುಕತನದಿಂದ ಹಾಡುವುದರಲ್ಲಿ ಗಟ್ಟಿಗರು. ಟಿ. ಸದಾಶಿವಂ ಇತ್ತೀಚೆಗೆ ತೀರಿಕೊಂಡಮೇಲೆ ಒಂಟಿ ಜೀವನದ ಬೇಸರಿಕೆ; ವೇದಿಕೆಯ ವಿನಿಕೆ ನಿಂತಿದೆ. ❖

ಎಂ. ಎಸ್. ಸುಬ್ಬುಲಕ್ಷ್ಮಿ

(ಜನನ : 1916)

ಹಿಂದಿನ ತಲೆಮಾರಿನ ಹಿರಿಯ ಗಾಯಕರಿಗೆ (ಅರಿಯಕ್ಕುಡಿ, ಮುಸಿರಿ, ಮಧುರೈ ಮಣಿ ಅಯ್ಯರ್, ಮಹಾರಾಜಪುರಂ ಮೊದಲಾದವರಿಗೆ) ಅಚ್ಚುಮೆಚ್ಚಿನ ಪಿಟೀಲು ಪಕ್ಕವಾದ್ಯಗಾರರು. ಸಂಗೀತದಲ್ಲಿ ಮುಖ್ಯವಾದ ಮನೋಧರ್ಮ ಇವರ ವೈಶಿಷ್ಟ್ಯ. ರಸವನ್ನು ಅಭಿವ್ಯಕ್ತಗೊಳಿಸುವಲ್ಲಿ, ರಾಗದ ಸ್ವರೂಪವನ್ನು ಕೆಲವೇ ಕ್ಷಣಗಳಲ್ಲಿ ಎತ್ತಿತ್ತೋರಿಸುವುದರಲ್ಲಿ ಇವರದ್ದು ಮೇಲುಗೈ. ಕಣಕ್ಕು (ಲೆಕ್ಕಾಚಾರ), ಅತಿಯಾದ ನೆರವಲ್ಲು, ಮೇರೆ ಮೀರಿದ ಸ್ವರ ಕಲ್ಪನೆ ಇವರಿಗೆ ಹಿಡಿಸದು. ತಮ್ಮ ಬದುಕಿನಂತೆಯೇ ಸಂಗೀತವೂ ಸರಳವಾಗಿ, ಸುಂದರವಾಗಿ ಇರಬೇಕೆಂದು ಬಯಸಿದವರು. 'ಸುಸ್ವರಂ ಸುಂದರೇಶಯ್ಯರ್' ಎಂದೇ ಪ್ರಸಿದ್ಧಿ. ಎಲ್ಲದರಲ್ಲೂ ಔಚಿತ್ಯಪ್ರಜ್ಞೆ, ಎಷ್ಟುಬೇಕೋ ಅಷ್ಟೆ ಅಷ್ಟರಲ್ಲೇ ಸ್ವಾರಸ್ಯ, ಸೌಂದರ್ಯಗಳನ್ನೆಲ್ಲ ತುಂಬಬೇಕು. ಸಂಗೀತದಲ್ಲಿ ಮುಖ್ಯವಾದುದು ರಾಗಭಾವ ಎಂದವರ ನಿಲುವು.

ಸಂಸ್ಕೃತ ಪಂಡಿತರ ಮನೆತನ, ಆಜ್ಜ ವಿಶ್ವನಾಥಯ್ಯರವರು ತರ್ಕ, ವ್ಯಾಕರಣ ಮೀಮಾಂಸಾಶಾಸ್ತ್ರಗಳಲ್ಲಿ ಪಾರಂಗತರು. ತಂದೆ ನೀಲಕಂಠಯ್ಯರವರು ತರ್ಕ, ವ್ಯಾಕರಣ ಬಲ್ಲಿದರು. ಅವರ ಸ್ನೇಹಿತರಲ್ಲಿ ಪ್ರಸಿದ್ಧ ತಿರುಕ್ಕೋಡಿಕ್ಕಾವಲ್ ಕೃಷ್ಣಯ್ಯರೂ ನಾಗಸ್ವರಂ ತಿರುಮರುಗಾಳ್ ನಟೇಶ ಪಿಳ್ಳೆ ಸೇರಿದ್ದರು.

ಸುಂದರೇಶನ ಬಾಲಪಾಠ ತಿರುವನಂತಪುರಂ ರಾಮಸ್ವಾಮಿ ಭಾಗವತರಲ್ಲಿ. ಆನಂತರದ ಶಿಕ್ಷಣ ಪಿಟೀಲು ವಿದ್ವಾಂಸರಾಗಿದ್ದ ಶೆಮ್ಮಂಗುಡಿ ನಾರಾಯಣಸ್ವಾಮಿ ಅಯ್ಯರಲ್ಲಿ.

ತಮ್ಮ ಹದಿನೇಳನೇ ವಯಸ್ಸಿನಲ್ಲಿಯೇ ಆಗ ಜನಪ್ರಿಯರಾಗಿದ್ದ ಮಧುರೆ ಪುಷ್ಪವನಂ ಅಯ್ಯರ್ ಎಂಬ ಪ್ರತಿಭಾಶಾಲಿ ಗಾಯಕರಿಗೆ ಪಿಟೀಲು ಪಕ್ಕವಾದ್ಯ ನುಡಿಸಿ ಕೀರ್ತಿಭಾಜನರಾದರು. ಬದುಕಿನಲ್ಲೂ ಸಂಗೀತದಲ್ಲೂ ಶಿಸ್ತಿಗೆ ಬೆಲೆಕೊಟ್ಟವರು. ಯಾವ ಬಗೆಯ ಆಡಂಬರಕ್ಕೂ ಒಲಿದವರಲ್ಲ. ಹಣಕ್ಕಂತೂ ಎಂದೂ ಬಾಯಿಬಿಟ್ಟವರಲ್ಲ. ಸಂಗೀತದಲ್ಲಿ ಸಂಪ್ರದಾಯ ಎಷ್ಟು ಮುಖ್ಯವೋ, ಸಂಗೀತಗಾರರಿಗೂ ಅದು ಅಷ್ಟೇ ಮುಖ್ಯ ಎಂಬುದನ್ನು ಸ್ಪಷ್ಟಪಡಿಸಿದರು. ❖



ತಿರುವಾಲಂಗಾಡು ಸುಂದರೇಶ ಅಯ್ಯರ್
(1900-1966)

ವೈಣಿಕಶಿಖಾಮಣಿ ಶೇಷಣ್ಣನವರ ನಂತರ ವೀಣೆಯ ವೈಭವವನ್ನು ಬೆಳಗಿದವರು. ವ್ಯಕ್ತಿತ್ವದಲ್ಲೂ ಅದೇ ಸೊಗಸು; ಪ್ರತಿಭೆಯಲ್ಲೂ ಅದೇ ಸ್ವಾರಸ್ಯ. ವೀಣೆಗಾಗಿಯೇ ಮೈದಳೆದವರು, ಅವರಿಗಾಗಿಯೇ ವೀಣೆ ಸಿದ್ಧವಾದದ್ದು. ಅಷ್ಟು ತಾದಾತ್ಮ್ಯ ವಾದ್ಯ-ವಾದಕರಲ್ಲಿ.

ತಂದೆ ವೆಂಕಟೇಶಯ್ಯಂಗಾರರು (ಮಾದಿಹಳ್ಳಿಯವರು) ವೈಣಿಕರು, ವೇಣುವಾದಕರು, ಮೈಸೂರು ಅರಮನೆಯಲ್ಲಿ ವಿದ್ವಾಂಸರು. ದೊರೆಸ್ವಾಮಿಗೆ ಮೊದಲ ಪಾಠ ತಂದೆಯಿಂದಲೇ; ಆಸ್ಥಾನವಿದ್ವಾಂಸರಾಗಿದ್ದ ವೆಂಕಟಗಿರಿಯಪ್ಪನವರಲ್ಲಿ ಪ್ರೌಢಶಿಕ್ಷಣ. ಕಾಲೇಜಿನಲ್ಲಿ ಹಾಗೂ ಹೀಗೂ ಬಿ.ಎ. ಮುಗಿಸಿದರಾದರೂ ಒಲವೆಲ್ಲ ವೀಣೆಯಲ್ಲೇ. ಸತತವಾದ ಸಾಧನೆ; ಅವಿರತ ಪ್ರಯೋಗ, ವೀಣೆಯ ಮೇಲೆ ಎಲ್ಲಿಲ್ಲದ ಮಮತೆ. ಅವರು ವೀಣೆಯನ್ನು ತಾಯಿಯಂತೆ, ಮಗುವಿನಂತೆ ನೋಡಿಕೊಳ್ಳುತ್ತಿದ್ದರು. ಅಷ್ಟು ಅಕ್ಕರೆ.

ಮೈಸೂರು ಆಸ್ಥಾನವಿದ್ವಾಂಸರು; 'ಸಂಗೀತಕಲಾನಿಧಿ'; ದೇಶವಿದೇಶಗಳಲ್ಲೆಲ್ಲ ಪ್ರಖ್ಯಾತಿಯನ್ನು ಪಡೆದುಕೊಂಡರು. ಅವರ ವೀಣಾವಾದನದಲ್ಲಿ ನಯ, ನಾಜೂಕು, ಲಾಲಿತ್ಯ, ಮಾರ್ದವ, ಗಾಂಭೀರ್ಯ. ಬೆಂಗಳೂರು ಆಕಾಶವಾಣಿಯಲ್ಲಿ ಹಲಕಾಲ ಸಂಗೀತ ನಿರ್ದೇಶಕರಾಗಿದ್ದರು. ಪು.ತಿ. ನರಸಿಂಹಚಾರ್ಯರ ಕನ್ನಡ ಕಾವ್ಯಗಳಿಗೆ ಶಾಸ್ತ್ರೀಯ ಸಂಗೀತವನ್ನು ಯೋಜಿಸಿದರು.

ಅವರದ್ದು ಶುದ್ಧಾಂಗವಾಗಿ ಮನೋಧರ್ಮ ಸಂಗೀತ. ಅವರ ಸಂಗೀತದಂತೆಯೇ ಅವರೂ ಗಂಭೀರ ಪ್ರಕೃತಿಯವರು, ಸಂಪ್ರದಾಯಶರಣರು, ದೈವಭಕ್ತರು. ಆದರೂ ಪ್ರಯೋಗಶೀಲರು, ರಸಿಕರು, ಉದಾರ ಮನಸ್ಸಿನವರು. ಮೃದುಹೃದಯ, ಸಹೃದಯರು, ಪರಿಶುದ್ಧಾಂತಃಕರಣದವರು, ಸ್ನೇಹಪರರು. ರಾಗಾಲಾಪನೆಯಲ್ಲಿ ರಾಗಭಾವದ ನಿರೂಪಣೆ, ಸ್ವರಕಲ್ಪನೆಯಲ್ಲಿ ಬೆಡಗುಬಿನ್ನಾಣ, ತಾನದಲ್ಲಿ ಅಚ್ಚುಕಟ್ಟು, ವಾದನಶೈಲಿಯಲ್ಲಿ ಸೌಖ್ಯ ಇವನ್ನು ಹೊರಸೂಸುವ ಸಂಗೀತ ಅವರದ್ದು.

ಶಿಷ್ಯರಲ್ಲಿ ಅವರ ಮಗ ಬಾಲಕೃಷ್ಣ ಪ್ರಮುಖರು. ❖



ವಿ. ದೊರೆಸ್ವಾಮಿ ಅಯ್ಯಂಗಾರ್
(1920-1997)

ರಾಳ್ಳಪಲ್ಲಿ ಅನಂತಕೃಷ್ಣಶರ್ಮರು



ವೈಣಿಕಶಿಖಾಮಣಿ ಶೇಷಣ್ಣ



ಮೈಸೂರು ಕೆ. ವಾಸುದೇವಾಚಾರ್ಯರು



ಕಾರೈಕುಡಿ ಸಾಂಬಶಿವ ಅಯ್ಯರ್

ಮಧುರೆ ಮಣಿ ಅಯ್ಯರ್

ಪಾಲಕ್ಕಾಡು ಮಣಿ ಅಯ್ಯರ್

ಎಂ. ಡಿ. ರಾಮನಾಥನ್



ಮುಸಿರಿ ಸುಬ್ರಹ್ಮಣ್ಯಯ್ಯರ್